ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 25 ಜೂನ್ 16-22, 1997 ಬೆಲೆ ರೂ. 2.00



ಸರಕಾರದ ಕೆಟ್ಟ ಅಶಿಸ್ತಿಗೆ ಜನಸಾಮಾನ್ಯರಿಗೆ ಶಿಕ್ಷೆಯಂತೆ!

ಇದು "ತೈಲನಿಧಿ ಕೊರತೆಯೋ, ವಂಚನೆಯ ಕೊಚ್ಚೆಗುಂಡಿಯೋ?" - ಯೆಚೂರಿ

ಕೇಂದ್ರ ಸರಕಾರ, ವಿಶೇಷವಾಗಿ ಹಣಕಾಸು ಮಂತ್ರಿಗಳು ಕೆಲವು ಸಮಯದಿಂದ ಬೆದರಿಸುತ್ತಿರುವಂತೆ ಪೆಟ್ರೋಲ್ ಮತ್ತಿತರ ಪದಾರ್ಥಗಳ ಬೆಲೆಗಳನ್ನು ಏರಿಸುವುದನ್ನು ಸಿಪಿಐ(ಎಂ) ಸೇರಿದಂತೆ ಎಲ್ಲಾ ಎಡಪಕ್ಷಗಳು ಬಲವಾಗಿ ವಿರೋಧಿಸುತ್ತವೆ. ಸಂಯುಕ್ತ ರಂಗದ ಇತರ ಕೆಲವು ಅಂಗಪಕ್ಷಗಳಿಂದಲೂ ಇದರಲ್ಲಿ ಬೆಂಬಲ ದೊರೆಯುವ ನಿರೀಕ್ಷೆಯಿದೆ. ಹೀಗೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಹೇಳಿದ್ದಾರೆ. ಜೂನ್ 9 ರಂದು ಪಕ್ಷದ ಕೇಂದ್ರ ಕಚೇರಿ ಎ.ಕೆ.ಜಿ.ಭವನದಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಅವರು ಹೀಗೆ ಹೇಳಿದರು. ಹಣಕಾಸು ಮಂತ್ರಿಗಳ ಮೇಲ್ವರ್ಗ ಪರವಾದ ಪಕ್ಷಪಾತವನ್ನು ಒಪ್ಪಲು ಸಾಧ್ಯವಿಲ್ಲ, ಜನಸಾಮಾನ್ಯರ ವರ್ಗ ಹಿತಾಸಕ್ತಿಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ನಿಲುವನ್ನು ಅವರು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಜೂನ್ 15 ರಂದು ಸಂಯುಕ್ತ ರಂಗ ಚಾಲನಾ ಸಮಿತಿಯ ಸಭೆ ತೈಲನಿಧಿ ಕೊರತೆಯನ್ನು ತುಂಬಿಸುವ ಪ್ರಶ್ನೆಯನ್ನು ಚರ್ಚಿಸಲಿದ್ದು, ಸಿಪಿಐ(ಎಂ) ಅದರಲ್ಲಿ ಪ್ರಶ್ನೆ ಪರಿಹಾರಕ್ಕೆ ಖಂಡಿತಾ ಕಾರ್ಯಸಾಧ್ಯವೆನಿಸುವ ದೀರ್ಘಕಾಲೀನ ಮತ್ತು ತಕ್ಷಣ ಕೈಗೊಳ್ಳಬಹುದಾದ ಪರ್ಯಾಯವನ್ನು ಮುಂದಿಡುತ್ತದೆ ಎಂದು ಅವರು ಹೇಳಿದರು. ಅವರೇ ಬರೆದ ಸಿಪಿಐ(ಎಂ) ಪ್ರಕಟಣೆ 'ತೈಲನಿಧಿ ಕೊರತೆಯೋ, ವಂಚನೆಯ ಕೊಚ್ಚೆಗುಂಡಿಯೋ?' ಎಂಬ ಕಿರುಪುಸ್ತಕವನ್ನು ಆ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು.

ಹಣಕಾಸು ಕೊರತೆಯನ್ನಾಗಲೀ, ತೈಲನಿಧಿಯ ಕೊರತೆಯನ್ನಾಗಲೀ ತುಂಬಿಸಬೇಕು ಎಂಬ ಬಗ್ಗೆ ಯಾವುದೇ ವಿವಾದವಿಲ್ಲ ಎಂದು ಆರಂಭದಲ್ಲೇ ಯೆಚೂರಿಯವರು ಸ್ಪಷ್ಟಪಡಿಸಿದರು. ಆದರೆ ವಿವಾದ ಇರುವುದು ಅದನ್ನುಹೇಗೆ ತುಂಬಿಸುವುದು ಎಂಬ ಬಗ್ಗೆ ಮಾತ್ರ. ಇದರಲ್ಲಿ ಎರಡು ಅಭಿಪ್ರಾಯಗಳಿವೆ. ಹಣಕಾಸು ಮಂತ್ರಿಗಳು ಮತ್ತು ಪತ್ರಿಕೆಗಳಲ್ಲಿ, ಇತರ ಮಾಧ್ಯಮಗಳಲ್ಲಿನ ಅವರ ಪ್ರಶಂಸಕರು ತೈಲ ಬೆಲೆಗಳನ್ನು ಏರಿಸಿ ದುಡಿಯುವ ಜನಗಳ ಮೇಲೆ ಹೊಸ ಹೊರೆ ಹಾಕಿ ಈ ಕೊರತೆಯನ್ನು ತುಂಬಿಸಬೇಕು ಎಂದರೆ ಸಿಪಿಐ(ಎಂ) ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ತಾನು ಕೆಲವು ದಿನಗಳಿಂದ ಸೂಚಿಸುತ್ತಾ ಬಂದಿರುವ ಕ್ರಮಗಳಿಂದ ಈಗಿರುವ ಮತ್ತು ಮುಂದೆ ಉಂಟಾಗಬಹುದೆಂದು ಅಂದಾಜು ಮಾಡಿರುವ ಕೊರತೆಯನ್ನು ತುಂಬಿಸುವುದಲ್ಲದೆ, ಮುಂದಿನ ವರ್ಷಗಳಲ್ಲೂ ಹೀಗಾಗದಂತೆ ತಡೆಯಬಹುದು ಎನ್ನುತ್ತಿದೆ. ಪತ್ರಿಕಾ ಸಮ್ಮೇಳನದಲ್ಲಿ ಬಿಡುಗಡೆ ಗೊಳಿಸಿದ ಪ್ರಕಟಣೆ ಈ ಕ್ರಮಗಳನ್ನು ವಿವರಿಸುವುದರೊಂದಿಗೆ ತೈಲರಂಗದಲ್ಲಿ ಈಗಿನ ಪರಿಸ್ಥಿತಿಯ ವಿಶ್ಲೇಷಣೆಯನ್ನೂ ಮಾಡಿದೆ.

ತೈಲ ಸಬ್ಸಿಡಿ? - ಬೊಗಳೆ!

ತೈಲ ಉತ್ಪನ್ನಗಳ ಮೇಲೆ ಸರಕಾರ ಜನರಿಗೆ ಭಾರೀ ಸಬ್ಸಿಡಿ ನೀಡುತ್ತದೆ ಎಂಬ ಅಬ್ಬರದ ಪ್ರಚಾರ ಕೇವಲ ದುರುದ್ದೇಶದ ಪ್ರಚಾರ ಎಂದ ಯೆಚೂರಿಯವರು ಅಮೆರಿಕಾದಲ್ಲಿ ಪೆಟ್ರೋಲ್ ಭಾರತದಲ್ಲಿನ ಡೀಸೆಲ್‌ಗಿಂತಲೂ ಅಗ್ಗವಾಗಿದೆ ಏಕೆ ಎಂದು ಖಾರವಾಗಿ ಪ್ರಶ್ನಿಸಿದರು. ಕಾರಣ ಇಷ್ಟೆ - ಸರಕಾರ ತೈಲ ಆಮದಿನ ಮೇಲೆ ಬೃಹತ್ ಪ್ರಮಾಣದಲ್ಲಿ ಅಬಕಾರಿ ಮತ್ತು ಸೀಮಾ(ಕಸ್ಟಮ್ಸ್) ಸುಂಕಗಳನ್ನು ಸಂಗ್ರಹಿಸುತ್ತಿದೆ. ಇದನ್ನು ಒಂದು ಉದಾಹರಣೆಯ ಮೂಲಕ ಅವರು ವಿವರಿಸಿದರು. 100 ರೂ. ಬೆಲೆಯ ತೈಲ ಆಮದಿನ ಮೇಲೆ 30 ರೂ. ಸೀಮಾ ಸುಂಕ ಸಂಗ್ರಹಿಸಲಾಗುತ್ತಿದೆ. ಇದರಿಂದಾಗಿ ಅದರ ಬೆಲೆ 130 ರೂ. ಆಗುತ್ತದೆ. ಅದರ ಮೇಲೆ 20% ಅಬಕಾರಿ ಸುಂಕ, ಅಂದರೆ ಅದರ ಬೆಲೆ 156 ರೂ. ನಂತರ ಅದನ್ನು 120 ರೂ. ಮಾಡಿ 36 ರೂ. ಸಬ್ಸಿಡಿ ಕೊಟ್ಟೆ ಎಂದು ಬೆನ್ನುತಟ್ಟಿಕೊಳುತ್ತದೆ! ತೈಲ ಆಮದುಗಳ ಮೇಲೆ ಈ ಸುಂಕಗಳನ್ನು ತೆಗೆದರೆ ಸಬ್ಸಿಡಿಯ ಪ್ರಶ್ನೆಯೇ ಇಲ್ಲ. ಸರಕಾರ ಈ ರೀತಿ ಇಡೀ ದೇಶಕ್ಕೆ ತಪ್ಪು ಮಾಹಿತಿ ನೀಡುತ್ತಿದೆ ಎಂದು ಯೆಚೂರಿಯವರು ಆಪಾದಿಸಿದರು. ಇಂತಹ ದುರುದ್ದೇಶಪೂರಿತ ಸರಕಾರಿ ಅಪಪ್ರಚಾರವನ್ನು ಬಯಲಿಗೆಳೆಯಲೆಂದೇ ಈ ಪ್ರಕಟಣೆಯಲ್ಲಿ 'ವಂಚನೆಯ ಕೊಚ್ಚೆಗುಂಡಿ' ಯೆಂಬ ಪದ ಬಳಸಿದ್ದು ಎಂದು ಪತ್ರಕರ್ತರ ಪ್ರಶ್ನೆ ಯೊಂದಕ್ಕೆ ಉತ್ತರಿಸುತ್ತಾ ಸೀತಾರಾಂ ಯೆಚೂರಿ ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಈ ಸಿಪಿಐ(ಎಂ) ಮುಖಂಡರು ಸರಕಾರ ಮಾರ್ಚ್ 1989 ರಿಂದ ತೈಲನಿಧಿಯಲ್ಲಿನ ಮಿಗುತೆಯನ್ನು ದುರುಪಯೋಗಪಡಿಸಿಕೊಂಡಿದ್ದನ್ನು ಹಾಗೂ ತೈಲ ಉದ್ದಿಮೆ ಅಭಿವೃದ್ಧಿ ಮಂಡಳಿ (OIDB) ಗೆ ಸರಕಾರ ಸಂಗ್ರಹಿಸಿದ ಅಧಿಕ ತೆರಿಗೆಯನ್ನು ನೀಡದಿರುವುದನ್ನು ನೆನಪಿಸಿದರು.

ಮಾರ್ಚ್ 1989 ರ ವೇಳೆಗೆ ತೈಲನಿಧಿಯಲ್ಲಿ 8900 ಕೋಟಿ ರೂ. ಮಿಗುತೆಯಿತ್ತು. ಆದರೆ ಮಾರ್ಚ್ 1993 ರ ವೇಳೆಗೆ ಅದು 4429 ಕೋಟಿ ರೂಗಿಳಿಯಿತು. ಇದನ್ನು ತೈಲ ನಿಧಿಗೆ ಸರಕಾರದ ವಿವಿಧ ಇಲಾಖೆಗಳ ನಡುವಿನ ಹಣ ವ್ಯವಹಾರದಲ್ಲಿ ತೆರುವ ಬಡ್ಡಿ ದರದಲ್ಲಿ ಹಿಂದಿರುಗಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತಿದೆ. ಅದೇ ರೀತಿ OIDB ಗೆ ನೀಡಬೇಕಿರುವ ಅಧಿಕ ತೆರಿಗೆ 28900 ಕೋಟಿ ರೂ. ಆದರೆ ಸರಕಾರ ನೀಡಿರುವುದು ಕೇವಲ 902 ಕೋಟಿ ರೂ.

ಸರಕಾರ ತನ್ನ ಹಣಕಾಸು ಕೊರತೆಯನ್ನು ತಗ್ಗಿಸಲು ತೈಲವಲಯವನ್ನು ಹಿಂಡುತ್ತಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಅತ್ಯಂತ ಕೆಟ್ಟ ಹಣಕಾಸು ಅಶಿಸ್ತು. ಈ ನಂಬಿಕೆದ್ರೋಹಕ್ಕೆ ಈಗ ಜನಸಾಮಾನ್ಯರನ್ನು ಬೆಲೆಯೇರಿಕೆ ಮೂಲಕ ಶಿಕ್ಷಿಸಬೇಕೆಂಬುದು ಸರಕಾರದ ಹಕ್ನೋಟ. ಇದನ್ನು ಸಿಪಿಐ(ಎಂ) ಹೇಗೆ ತಾನೆ ಒಪ್ಪಲು ಸಾಧ್ಯ?

ವರ್ಗಸ್ವಾರ್ಥ ಬಿಟ್ಟರೆ ದಾರಿಹಲವು

ಹೀಗೆ ದುರುಪಯೋಗಪಡಿಸಿಕೊಂಡ ಹಣ ಈಗಾಗಲೇ ಖರ್ಚಾಗಿರುವಾಗ ತೈಲ ಬೆಲೆಗಳನ್ನು ಏರಿಸಿ ಸಂಪನ್ಮೂಲ ಸಂಗ್ರಹಿಸದೆ ಬೇರೆ ದಾರಿಯೇನಿದೆ ಎಂಬ ಹಣಕಾಸು ಮಂತ್ರಿಗಳ ಪ್ರಶ್ನೆಯ ಬಗ್ಗೆ ಕೇಳಿದಾಗ ತಮ್ಮ ಪಕ್ಷ ಈಗಾಗಲೇ ಇದಕ್ಕೂ ಕಾರ್ಯಸಾಧ್ಯವಾದ ಪರಿಹಾರವನ್ನು ಮುಂದಿಟ್ಟಿದೆ ಎಂದು ಸೀತಾರಾಂ ಯೆಚೂರಿ ಸ್ಪಷ್ಟಪಡಿಸಿದರು. ಉದಾಹರಣೆಗೆ, ಲಕ್ಷುರಿ ಕಾರುಗಳ ಮೇಲೆ, ಬಹುರಾಷ್ಟ್ರೀಯ ಕಂಪನಿಗಳು ಉತ್ಪಾದಿಸುವ ಡೀಸೆಲ್ ವಾಹನಗಳ ಮೇಲೆ ಇತ್ಯಾದಿ ರೀತಿಗಳಲ್ಲಿ ಸಂಪನ್ಮೂಲ ಸಂಗ್ರಹಿಸುವುದು ಖಂಡಿತಾ ಸಾಧ್ಯವಿದೆ. ನಿಜ ಸಂಗತಿಯೆಂದರೆ ತೆರಿಗೆಯ ಪ್ರಮಾಣ ಭಾರತದಲ್ಲಿ ಬೇರೆ ದೇಶಗಳೊಡನೆ ಹೋಲಿಸಿದರೆ ಅತ್ಯಂತ ಕಮ್ಮಿ.

ನಮ್ಮ ಹಣಕಾಸು ಮಂತ್ರಿಗಳು ಸದಾ ನಾವು 'ಏಶ್ಯನ್ ಹುಲಿ'ಗಳೆನಿಸಿಕೊಳ್ಳುವ ದಕ್ಷಿಣ ಕೊರಿಯ ಮತ್ತಿತರ ದೇಶಗಳ ಮಾದರಿಯನ್ನು ಅನುಸರಿಸಬೇಕು ಎನ್ನುತ್ತಿರುತ್ತಾರೆ. ಈ ದೇಶಗಳಲ್ಲಿ ತೆರಿಗೆ ಸಂಗ್ರಹಣೆಯ ಪ್ರಮಾಣ ಒಟ್ಟು ರಾಷ್ಟ್ರೀಯ ಆಂತರಿಕ ಉತ್ಪನ್ನದ 20% ಕ್ಕೂ ಹೆಚ್ಚು. ಆದರೆ ಭಾರತದಲ್ಲಿ ಇದು 10% ಕ್ಕಿಂತಲೂ ಕಮ್ಮಿ. ಅಂದರೆ ತೆರಿಗೆ ಆಧಾರವನ್ನು ವಿಸ್ತರಿಸಲು ಇಲ್ಲಿ ಸಾಕಷ್ಟು ಅವಕಾಶವಿದೆ. ಆದರೆ ಹಣಕಾಸು ಮಂತ್ರಿಗಳಿಗೆ ಇದೆಲ್ಲಾ ಎಳ್ಳಷ್ಟು ಇಷ್ಟವಿಲ್ಲ. ಇದಕ್ಕೆ ಕಾರಣ ಅವರ ಮೇಲ್ವರ್ಗಗಳ ಪರವಾದ ಪಕ್ಷಪಾತ. ಆದರೆ ಸಿಪಿಐ(ಎಂ) ಹಣಕಾಸು ಕೊರತೆ ತೊಲಗಿಸಲು ಜನಗಳ ಮೇಲಿನ ಹೊರೆಯನ್ನು ಹೆಚ್ಚಿಸಬೇಕೆನ್ನುವ ಪ್ರಸ್ತಾವಗಳನ್ನು ಒಪ್ಪಲು ಸಾಧ್ಯವಿಲ್ಲ. ಜನಸಾಮಾನ್ಯರ ವರ್ಗ ಹಿತಾಸಕ್ತಿಯನ್ನು ಬಿಟ್ಟುಕೊಡಲು ಸಾಧ್ಯವಿಲ್ಲ.

ಜನರ ಬಳಿಗೊಯ್ಯುತ್ತೇವೆ.

ಸಂಯುಕ್ತ ರಂಗ ಸರಕಾರ ಸಿಪಿಐ(ಎಂ) ಪ್ರಸ್ತಾವಗಳನ್ನು ಕುರಿತಂತೆ ಸಕಾರಾತ್ಮಕ ನಿಲುವು ತಳೆಯದೆ ತನ್ನ ಜನ-ವಿರೋಧಿ ಪ್ರಸ್ತಾವಗಳನ್ನು ಬಿಡಲೊಪ್ಪದಿದ್ದರೆ ಸಿಪಿಐ(ಎಂ) ಈ ಪ್ರಶ್ನೆಯನ್ನು ಜನರ ಬಳಿಗೊಯ್ಯುತ್ತದೆ ಎಂದೂ ಸೀತಾರಾಂ ಯೆಚೂರಿ ಸ್ಪಷ್ಟಪಡಿಸಿದರು. ಈಗಾಗಲೇ ಸಿಪಿಐ(ಎಂ) ಜುಲೈ 15 ರಿಂದ 31 ರ ವರೆಗೆ ಒಂದು ರಾಷ್ಟ್ರವ್ಯಾಪಿ ಪ್ರಚಾರಾಂದೋಲನವನ್ನು ಯೋಜಿಸಿದ್ದು ಅಲ್ಲಿ ಇಂತಹ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿ ಸರಕಾರದ ಮೇಲೆ ಒತ್ತಡ ತರಲಾಗುವುದು ಎಂದು ಅವರು ನೆನಪಿಸಿದರು.

(ಐಎನ್‌ಎಸ್)

ಸರಕಾರಿ ಖಜಾನೆ ಸಚಿವರುಗಳ ವಿಶ್ವ ಪ್ರದಕ್ಷಿಣೆಗಾಗಿದೆಯೇ?


ಎನ್.ಕೆ.ಉಪಾಧ್ಯಾಯ

ಕುಡಿಯಲು ನೀರಿಗಾಗಿ, ಕಲಿಯಲು ಕೊಠಡಿಗಾಗಿ, ಕೈಗೆ ಕೆಲಸಕ್ಕಾಗಿ, ಉಳಿಯಲು ಸೂರಿಗಾಗಿ ಜಡಪಡಿಸುತ್ತಿರುವಾಗ, ಈ ಗಂಭೀರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ನಮ್ಮನ್ನಾಳುವ ಮಂತ್ರಿ ಮಹಾಶಯರೆಲ್ಲ ವಿದೇಶ ಪ್ರಯಾಣ ಕೈಗೊಂಡಿದ್ದಾರೆ. ಒಂದು ಕಡೆ ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಒತ್ತಡಕ್ಕೊಳಗಾಗಿರುವ ನಮ್ಮ ಅರ್ಥವ್ಯವಸ್ಥೆಯಿಂದಾಗಿ ಬೆಲೆ ಹೆಚ್ಚಳ, ಖಾಸಗೀಕರಣ ನಿರುದ್ಯೋಗದಂಥ ಸಮಸ್ಯೆಗಳನ್ನೆದುರಿಸಬೇಕಾದಂಥ ಸಂದಿಗ್ಧ ಪರಿಸ್ಥಿತಿ, ಮತ್ತೊಂದು ಕಡೆ ಚುನಾವಣಾ ಆಯೋಗದ ಆದೇಶಕ್ಕೆ ತಲೆತಗ್ಗಿಸಿ, ತಮ್ಮ ಸಾಂಸ್ಥಿಕ ಸಂಸ್ಥೆಗಳ ಚುನಾವಣೆಯಲ್ಲಿ ತಮ್ಮ ಪಕ್ಷದೊಳಗೆ ಹುದುಗಿರುವ ಅಂತರಿಕ ಗುಂಪುಗಾರಿಕೆ, ಜಾತಿ ಮತಬೇಧಗಳ ಪ್ರದರ್ಶನದಿಂದುಂಟಾಗಬಹುದಾದ ಪರಿಣಾಮ, ದೇಶ ಮತ್ತು ರಾಜ್ಯದ ರಾಜಕೀಯದ ಮೇಲೆ ಉಂಟಾಗಬಹುದಾದ ಪ್ರಕ್ರಿಯೆಗಳತ್ತ ಗಮನ ಹರಿಸದೆ ನಿಶ್ಚಿಂತೆಯಿಂದಲೇ ಹಲವಾರು ಮಂತ್ರಿ ಮಹಾಶಯರು ಅಭ್ಯಾಸಕ್ಕಾಗಿಯೋ, ಬಂಡವಾಳ ಸಂಗ್ರಹಕ್ಕಾಗಿಯೋ, ಆರೋಗ್ಯ ಸುಧಾರಣೆಗಾಗಿಯೋ ಅಥವಾ ಮತ್ತಿನ್ನಾವ ಕಾರಣಗಳಿಗಾಗಿಯೋ ವಿಶ್ವ ಪ್ರದಕ್ಷಿಣೆ ಮಾಡುತ್ತಿರುವುದು ನಮಗೆ ಹಿತವಲ್ಲ, ಸರಕಾರಿ ಖಜಾನೆಗೂ ಹಿತವಲ್ಲ, ರಾಜ್ಯಕ್ಕೂ ಹಿತವಲ್ಲೆಂದೇ ಹೇಳಬೇಕಾಗಿದೆ.

ಕೆಲವು ಸಲ ಕೇಂದ್ರ ಮಂತ್ರಿಗಳಿಗೆ ವಿದೇಶ ಪ್ರಯಾಣದ ಅವಶ್ಯಕತೆ ಇರುತ್ತದೆ. ಆದರೆ ರಾಜ್ಯದ ಮಂತ್ರಿಗಳಿಗೆ ಅಂಥ ಪ್ರಯಾಣದ ಅವಶ್ಯಕತೆಯಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಮುಖ್ಯ ಮಂತ್ರಿಗಳು ವಿದೇಶಗಳಿಗೆ ಸಂಚರಿಸುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಯಾಕೆಂದರೆ ಕೇಂದ್ರ ಸಂಗ್ರಹಿಸುವ ಸಂಪನ್ಮೂಲಗಳಿಂದ ರಾಜ್ಯಗಳ ಅಭಿವೃದ್ಧಿಕಾರ್ಯಕ್ರಮಗಳಿಗೆ, ಕೇಂದ್ರ ಸರಿಯಾಗಿ ಧನ ಸಹಾಯ ನೀಡದಿರುವುದರಿಂದ, ವಿದೇಶಗಳಲ್ಲಿ ನೆಲೆಸಿರುವ ಭಾರತೀಯ ಕೈಗಾರಿಕೋದ್ಯಮಿಗಳನ್ನು ಸಂಪರ್ಕಿಸಲು, ತಂತಮ್ಮ ರಾಜ್ಯಗಳಿಗೆ ಅವರನ್ನು ಆಮಂತ್ರಿಸುವಂತೆ ಅವರನ್ನು ಮನವೊಲಿಸಿ ಹಾಗೆಯೇ ಬಂಡವಾಳ ಹೂಡಿಕೆಯ ಸಾಧ್ಯತೆಯನ್ನು ತಿಳಿದುಕೊಳ್ಳಲು ಮುಖ್ಯಮಂತ್ರಿಗಳು ವಿದೇಶಗಳಿಗೆ ಪ್ರಯಾಣ ಬೆಳೆಸುವುದರಲ್ಲಿ ಅಭ್ಯಂತರವಿಲ್ಲ. ಪಶ್ಚಿಮ ಬಂಗಾಲ, ಕೇರಳಗಳ ಮುಖ್ಯಮಂತ್ರಿಗಳು ವಿದೇಶಕ್ಕೆ ಹೋಗುತ್ತಾರೆ. ಅಂಥ ಪ್ರಯಾಣಗಳ ವರದಿ ಸರಕಾರದ ಹಾಗೆಯೇ ಜನತೆಯ ಮುಂದಿಡಲಾಗುತ್ತಿದೆ.

ಆದರೆ ನಮ್ಮ ರಾಜ್ಯದಿಂದ ಹೊರಹೋಗುತ್ತಿರುವ ಮಂತ್ರಿಗಳಾಗಲೀ, ಅಧಿಕಾರಿಗಳಾಗಲಿ

6 ನೇ ಪುಟ ನೋಡಿ



1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಕಳಚಿಹಾಕುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನ ಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನದ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇಡುವ ಹಣದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.
7. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 15-31, 1997

ಪೆಟ್ರೋಲಿಯಂ ಇಲಾಖೆ ತೈಲ ಶೋಧನೆ ಕುರಿತಂತೆ ಖಾಸಗಿ ಕಂಪನಿಗಳೊಡನೆ (ಪನ್ನಾ-ಮುಕ್ತಾ ಹಾಗೂ ಮಧ್ಯ ಹಾಗೂ ದಕ್ಷಿಣ ತಪತೀ ತೈಲ ಕ್ಷೇತ್ರಗಳ ಕಾಂಟ್ರಾಕ್ಟನ್ನು ಎನ್ರೋನ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಕೂಟ ಪಡೆಯಿತು, ರವ್ವಾ ತೈಲ ಕ್ಷೇತ್ರದ ಕಾಟ್ರಾಕ್ಟನ್ನು ವಿಡಿಯೋಕೋನ್ ಮತ್ತು ಸಿಂಗಾಪೂರದ ಕಂಪನಿಯ ಕೂಟ ಪಡೆಯಿತು) ನಡೆಸಿರುವ ವ್ಯವಹಾರಗಳ ಬಗ್ಗೆ ಭಾರತದ ಮಹಾ ಲೆಕ್ಕ ಪರಿಶೋಧಕರ(ಸಿ.ಎ.ಜಿ.) ವರದಿಯನ್ನು ಕಳೆದ ಮಾರ್ಚ್ ತಿಂಗಳಲ್ಲಿ ಸಂಸತ್ತಿನಲ್ಲಿ ಮಂಡಿಸಲಾಯಿತು. ಆ ವರದಿ ಈ ವ್ಯವಹಾರಗಳಲ್ಲಿ ಗಂಭೀರ ಲೋಪಗಳು ಹಾಗೂ ದೌರ್ಬಲ್ಯಗಳಿವೆಯೆಂಬುದನ್ನು ಗುರುತಿಸಿತ್ತು. ಆದರೆ ಅದೇಕೋ ಇದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಲಿಲ್ಲ-ಪೆಟ್ರೋಲಿಯಂ ಬೆಲೆಯೇರಿಕೆಗೆ ಎಡಪಕ್ಷಗಳ ವಿರೋಧ ಚಡಪಡಿಸುವ ಪತ್ರಿಕಾ "ವಿಶ್ಲೇಷಕ"ರಿಗೆ ಅದೇಕೋ ಈ ವರದಿ ಅಷ್ಟೊಂದು ಚಡಪಡಿಕೆ ಉಂಟು ಮಾಡಲಿಲ್ಲ. ಬಹುಶಃ ವರ್ಗ ಹಿತಾಸಕ್ತಿ ಇರಬಹುದೇ? ಪೆಟ್ರೋಲಿಯಂ ಬೆಲೆಗಳನ್ನು ಕುರಿತಂತೆ ಈಗ ನಡೆಯುತ್ತಿರುವ ವರ್ಗ ಸಮರದ ಸಂದರ್ಭಗಳಲ್ಲಿ ಸಿಎಜಿ ವರದಿಯ ಕೆಲವು ಮುಖ್ಯ ಟೀಕೆಗಳನ್ನು ಇಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳೋಣ.

ತೈಲ ವ್ಯವಹಾರದಲ್ಲಿ ಗಂಭೀರ "ದೌರ್ಬಲ್ಯ"

ಮಹಾ ಲೆಕ್ಕ ಪರಿಶೋಧಕರ ಟೀಕೆ

ಉತ್ಪಾದನೆ ಪಾಲುದಾರಿಕೆ ಕಾಂಟ್ರಾಕ್ಟ್(ಪಿ.ಎಸ್.ಸಿ) ಅನ್ನು ನೀಡುವ ಮೊದಲು ಸರಕಾರಿ ತೈಲ ಕಂಪನಿಗಳಾದ ಒಎನ್‌ಜಿಸಿ ಅಥವಾ ಒಐಎಲ್ ತಾವೇ ಈ ತೈಲಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿರುವುದರ ಖರ್ಚು ಹಾಗೂ ಆದಾಯ ಮತ್ತು ಖಾಸಗಿಯವರೊಡನೆ ಜಂಟಿಯಾಗಿ ಅಭಿವೃದ್ಧಿಪಡಿಸುವುದರ ಖರ್ಚು ಮತ್ತು ಆದಾಯ ಈ ಆರ್ಥಿಕ ಅಂಶಗಳ ಹೋಲಿಕೆ ಮಾಡಿಕೊಳ್ಳಬೇಕಾಗಿತ್ತು. ಸರಕಾರಕ್ಕೆ ಮೊದಲು ಕೊಟ್ಟ ಪ್ರಸ್ತಾವದಲ್ಲಿ ಈ ರೀತಿ ಹೋಲಿಕೆಯ ನಂತರವೇ ಕಾಂಟ್ರಾಕ್ಟ್‌ಗಳನ್ನು ನೀಡುವ ಬಗ್ಗೆ ಯೋಚಿಸುವುದಾಗಿ ಹೇಳಲಾಗಿತ್ತು. ಆದರೆ ಅಂತಹ ಹೋಲಿಕೆ/ವಿಶ್ಲೇಷಣೆಯನ್ನು ನಡೆಸಲೇ ಇಲ್ಲ.

▸ ತೈಲ ನಿಕ್ಷೇಪಗಳು ಎಷ್ಟಿವೆ ಎಂಬುದರ ಸರಿಯಾದ ಅಂದಾಜು ಮಾಡಿದ ನಂತರವೇ ಈ ಕಾಂಟ್ರಾಕ್ಟ್‌ಗಳನ್ನು ಕೊಡಬೇಕಾಗಿತ್ತು. ಆದರೆ ಈ ಅಂದಾಜುಗಳು ಒಂದೊಂದು ಹಂತದಲ್ಲೂ ಬೇರೆ ಬೇರೆಯಾಗಿದ್ದವು. ಕೊನೆಗೆ ಇವುಗಳಲ್ಲಿ ಅತಿ ಕಮ್ಮಿ ಅಂದಾಜಿನ ಆಧಾರದಲ್ಲಿ ಕಾಂಟ್ರಾಕ್ಟನ್ನು ಕೊಡಲಾಯಿತು. ಇದರಿಂದ ಖಾಸಗಿ ಕಂಪನಿಗಳೆದುರು ಸರಕಾರದ ಚೌಕಾಸಿ ಸಾಮರ್ಥ್ಯ ಕುಂಠಿತವಾಯಿತು.

▸ ಟೆಂಡರ್ ಆಹ್ವಾನ ಹಾಗೂ ಮೌಲ್ಯಮಾಪನ ವಿಧಾನಗಳಲ್ಲಿ ಬಹಳಷ್ಟು ಕೊರತೆಗಳಿದ್ದವು.

▸ ಪನ್ನಾ-ಮುಕ್ತಾ ಹಾಗೂ ಮಧ್ಯ ಮತ್ತು ದಕ್ಷಿಣ ತಪತೀ ತೈಲ ಕ್ಷೇತ್ರಗಳನ್ನು ಪತ್ತೆಹಚ್ಚಲು ಒಎನ್‌ಜಿಸಿ ಈಗಾಗಲೇ 676.52 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಆದ್ದರಿಂದ ಈ ತೈಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಕಾಂಟ್ರಾಕ್ಟನ್ನು ನೀಡುವ ಮೊದಲು ಈ ಖರ್ಚನ್ನು ಪರಿಗಣಿಸಬೇಕಾಗಿತ್ತು, ಒಎನ್‌ಜಿಸಿಗೆ ಆ ಹಣವನ್ನು ತುಂಬಿಸಿ ಕೊಡಬೇಕಾಗಿತ್ತು. ಅದನ್ನು ಮಾಡಿಲ್ಲ.ಇದರಿಂದ ಸರಕಾರಕ್ಕೆ/ಒಎನ್‌ಜಿಸಿಗೆ 676.52 ಕೋಟಿ ರೂ. ನಷ್ಟವಾದಂತಾಗಿದೆ.

▸ ಇಷ್ಟೇ ಅಲ್ಲ, ಖಾಸಗಿಯವರಿಗೆ ಕಾಂಟ್ರಾಕ್ಟ್ ನೀಡಿಕೆಯೊಂದಿಗೆ ಒಎನ್‌ಜಿಸಿ ಈ ಮೊದಲು ಪನ್ನಾ-ಮುಕ್ತಾ ತೈಲ ಕ್ಷೇತ್ರ ಕುರಿತಂತೆ ನೀಡಿದ ಗುತ್ತಿಗೆ ಮುಗಿದಂತಾಯಿತು. ಆದರೆ ಅದರ ನಂತರವೂ ಒಎನ್‌ಜಿಸಿ ಕೆಲವು ಸೌಲಭ್ಯಗಳನ್ನು ಕಲ್ಪಿಸಲು 240.37 ಕೋಟಿ ರೂ. ಖರ್ಚು ಮಾಡುವಂತೆ ಈ ಕಾಂಟ್ರಾಕ್ಟ್ ವಿಧಿಸಿದೆ. ಇದನ್ನು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರಲಿಲ್ಲ. ಇದರಿಂದ ಕೊನೆಗೆ ಈ ಕಾಂಟ್ರಾಕ್ಟನ್ನು ಪಡೆಯುವಲ್ಲಿ ಯಶಸ್ವಿಯಾದವರಿಗೆ ಅನಗತ್ಯವಾಗಿ ಪ್ರಯೋಜನ ಕಲ್ಪಿಸಿದಂತಾಗಿದೆ.

▸ ಕಾಂಟ್ರಾಕ್ಟ್‌ಗೆ ಸಹಿ ಹಾಕುವ ಮೊದಲು ಮಾಡಿದ ಖರ್ಚನ್ನು ತುಂಬಿಸಿಕೊಡುವಲ್ಲಿ ಪಕ್ಷಪಾತ ತೋರಿಸಲಾಗಿದೆ. ಎನ್ರೋನ್-ರಿಲಯನ್ಸ್ ಮಾಡಿದೆಯೆನ್ನುವ 7.5 ಲಕ್ಷ ಡಾಲರುಗಳವರೆಗಿನ ಖರ್ಚನ್ನು ತುಂಬಿಸಿಕೊಡಲು ಅವಕಾಶ ನೀಡಿದ ಸರಕಾರ ಒಎನ್‌ಜಿಸಿ ಮಾಡಬೇಕಾಗಿ ಬಂದ 7.58 ಕೋಟಿ ರೂ.ಗಳ ಖರ್ಚನ್ನು ತುಂಬಿಸಿಕೊಡಲು ಒಪ್ಪಲಿಲ್ಲ.

▸ ಒಎನ್‌ಜಿಸಿ ಈ ಹಿಂದೆ ನೀಡಲಾಗಿದ್ದ ಗುತ್ತಿಗೆಯನ್ನು ರದ್ದುಪಡಿಸಿದ್ದಕ್ಕೆ ಪರಿಣಾಮವಾಗಿ ನೀಡುವ ಸಿಗ್ನೇಚರ್ ಹಾಗೂ ಉತ್ಪಾದನಾ ಬೋನಸ್ ಲೆಕ್ಕ ಹಾಕುವಾಗಲೂ ಒಎನ್‌ಜಿಸಿಗೆ ಅನ್ಯಾಯ ವಾಗಲು ಅವಕಾಶ ನೀಡಲಾಗಿದೆ. ಖಾಸಗಿ ಕಾಂಟ್ರಾಕ್ಟ್ ಗಾರರು ಈ ಲೆಕ್ಕಾಚಾರದಲ್ಲಿ ತಮಗೆ ಪ್ರಯೋಜನವಾಗುವಂತೆ ನೋಡಿಕೊಳ್ಳಲು ಅವಕಾಶ ನೀಡಲಾಗಿದೆ.

▸ ಖಾಸಗಿಯುವರಿಗೆ ನಿರ್ವಹಣೆಯ ಖರ್ಚಿನ ಬಗ್ಗೆಯಾಗಲಿ ಕನಿಷ್ಟ ಉತ್ಪಾದನಾ ಮಟ್ಟದ ಬಗ್ಗೆಯಾಗಲೀ ಯಾವುದೇ ಶರತ್ತನ್ನು ಹಾಕದಿರುವುದು ಸರಿಯಲ್ಲ.

▸ ಪನ್ನಾ-ಮುಕ್ತಾ ಯೋಜನೆಗೆ ಜಂಟಿ ಉದ್ಯಮದಲ್ಲಿ ಮೊದಲಿಗಿಂತ ಬಹಳ ಹೆಚ್ಚು ಖರ್ಚಾಗುತ್ತಿದೆ. ಸಿಎಜಿ ಲೆಕ್ಕಾಚಾರದ ಪ್ರಕಾರ ಒಎನ್‌ಜಿಸಿ ಏಕಾಂಗಿಯಾಗಿ ಈ ತೈಲ ಕ್ಷೇತ್ರವನ್ನು ನಡೆಸುತ್ತಿದ್ದಾಗ ಸರಾಸರಿ ಕಚ್ಚಾ ತೈಲ ಉತ್ಪಾದನಾ ಖರ್ಚು ಟನ್‌ಗೆ 685 ರೂ ಮಾತ್ರ ಇತ್ತು. ಈಗಿನ ಖರ್ಚು ಒಂದು ವಿಧಾನದಲ್ಲಿ 1617 ರೂ.ಗಳು ಹಾಗೂ ಎರಡನೇ ವಿಧಾನದಲ್ಲಿ 2976 ರೂ.!

ರಾಷ್ಟ್ರೀಯ ತೈಲ ಕಂಪನಿಗಳ ವಿರುದ್ಧ ಪಕ್ಷಪಾತ

ಸಿಎಜಿ ವರದಿ ರಾಷ್ಟ್ರೀಯ ತೈಲ ಕಂಪನಿಗಳು ಮತ್ತು ಖಾಸಗಿ ಕಂಪನಿಗಳ ನಡುವೆ ಪಕ್ಷಪಾತ ಎಲ್ಲೆಲ್ಲಿ ನಡೆದಿದೆಯೆಂಬುದನ್ನು ಗುರುತಿಸಿದೆ. ಅವನ್ನು ಹೀಗೆ ಪಟ್ಟಿ ಮಾಡಬಹುದು.

1. ಕಚ್ಚಾತೈಲ ಹಾಗೂ ಅನಿಲಕ್ಕೆ ನೀಡುವ ಬೆಲೆ: ರಾಷ್ಟ್ರೀಯ ತೈಲ ಕಂಪನಿಗಳಿಗೆ ಸರಕಾರ ನಿಗದಿ ಮಾಡಿದ ಬೆಲೆಗಳಷ್ಟೇ ಸಿಗುತ್ತದೆ. ಖಾಸಗಿ ಕಂಪನಿಗಳಿಗೆ ಅಂತರ್ರಾಷ್ಟ್ರೀಯ ಬೆಲೆಗಳು ಸಿಗುತ್ತವೆ.ಇವು ಸರಕಾರ ನಿಗದಿಮಾಡಿದ ಬೆಲೆಗಳಿಗಿಂತ ಬಹಳಷ್ಟು ಹೆಚ್ಚಿವೆ. ಪನ್ನಾ-ಮುಕ್ತಾ ಯೋಜನೆಯಲ್ಲಿ ಈ ವ್ಯತ್ಯಾಸ ಟನ್ನಿಗೆ 1423 ರೂ.ಗಳಷ್ಟಿದೆ ಎಂದು ಸಿಎಜಿ ಲೆಕ್ಕ ಹಾಕಿದೆ. ಅಂದರೆ ಒಎನ್‌ಜಿಸಿಗೆ ಪ್ರತಿ ಟನ್ನಿನಲ್ಲಿ ಇಷ್ಟು ನಷ್ಟ-ಕೇವಲ ಸರಕಾರದ ನಿಲುವಿ ನಿಂದಾಗಿ.


2. ರಾಯಧನ ಮತ್ತು ಆರ್ಥಿಕ ತೆರಿಗೆ: ಒಎನ್‌ಜಿಸಿ ಸರಕಾರ ಕಾಲಕಾಲಕ್ಕೆ ನಿರ್ಧರಿಸಿದ ದರಗಳಲ್ಲಿ ತೆರಬೇಕು. ಆದರೆ ಜಂಟಿ ಉದ್ಯಮದ ಕಾಂಟ್ರಾಕ್ಟ್ ದಾರರುಗಳಿಗೆ ಮುಂದಿನ 25 ವರ್ಷಗಳವರೆಗೂ ಈಗಿನದ್ದೇ ದರ(ಟನ್ನಿಗೆ 481 ರೂ. ಮತ್ತು900 ರೂ.) ಅಷ್ಟೇ ಅಲ್ಲ ಈ ಕಾಂಟ್ರಾಕ್ಟ್‌ದಾರರಿಗೆ ಕಚ್ಚಾತೈಲದ ಹಣ ಡಾಲರುಗಳಲ್ಲಿ ಸಿಗುತ್ತದೆ. ರಾಯಧನ ಮತ್ತು ತೆರಿಗೆ ಮಾತ್ರ ರೂಪಾಯಿಗಳಲ್ಲೇ ಕೊಡಬಹುದು.

3. ಕಸ್ಟಮ್ಸ್ ಸುಂಕ: ರಾಷ್ಟ್ರೀಯ ಕಂಪನಿಗಳಿಗೆ ಸರಕಾರ ವಿಧಿಸಿದ ದರಗಳು, ಜಂಟಿ ಉದ್ಯಮದ ಕಾಂಟ್ರಾಕ್ಟ್ ದಾರರಿಗೆ ಸಂಪೂರ್ಣ ವಿನಾಯ್ತಿ.

4. ಪೆಟ್ರೋಲಿಯಂ ಮಾರಾಟ ಅಥವಾ ಬೇರೆ ಯಾವುದೇ ಆದಾಯದ ಮೇಲಿನ ತೆರಿಗೆ: ರಾಷ್ಟ್ರೀಯ ಕಂಪನಿಗಳು ಸರಕಾರ ವಿಧಿಸಿದ ದರಗಳಲ್ಲಿ ತೆರಬೇಕು. ಖಾಸಗಿಯವರು ಏನೂ ತೆರಬೇಕಾಗಿಲ್ಲ.

5. ಆರ್ಥಿಕ ಕಾನೂನುಗಳ ಬದಲಾವಣೆಯಿಂದ ರಕ್ಷಣೆ: ರಾಷ್ಟ್ರೀಯ ಕಂಪನಿಗಳಿಗೆ ಈ ರಕ್ಷಣೆಯಿಲ್ಲ. ಖಾಸಗಿಯವರಿಗೆ ಪೂರ್ಣ ರಕ್ಷಣೆಯಿದೆ.

ದೇಶದ, ಸಾರ್ವಜನಿಕ ವಲಯದ ಕಂಪನಿಗಳ ಹಿತಾಸಕ್ತಿಗಳನ್ನು ಸಂಪೂರ್ಣ ಕಡೆಗಣಿಸಿ ಮಾಡಿದ 'ವ್ಯವಹಾರ' ಇದು ಎಂಬುದು ಈ ಮೇಲಿನ ಅಂಶಗಳಿಂದ ಸ್ಪಷ್ಟ. ಈ 'ವ್ಯವಹಾರ' ನಡೆದಾಗ ಪೆಟ್ರೋಲಿಯಂ ಮಂತ್ರಿಯಾಗಿದ್ದ ಕ್ಯಾಪ್ಟನ್ ಸತೀಶ್ ಶರ್ಮಾರ ದಿಲ್ಲಿ ಬಳಿಯ 'ತೋಟದ ಮನೆ'ಯೊಂದರ ಮೌಲ್ಯವೇ 30 ಕೋಟಿ ರೂ. ಎಂದು ಸಿಬಿಐ ಅಂದಾಜು ಮಾಡಿದೆ! ನಮ್ಮ ಆಳರಸರು ಇಂತಹ ಇತರ ಹಲವು 'ವ್ಯವಹಾರ'ಗಳಿಂದ ತೈಲ ನಿಧಿ ಖಾತೆ ಕೊರತೆಗೆ ಕಾಣಿಕೆ ನೀಡುತ್ತಿದ್ದಾರೆ. ಭಾರತದ ಜನಸಾಮಾನ್ಯರು ಅದನ್ನು ತುಂಬಿಸಲು ಹೆಚ್ಚಿನ ಹೊರೆ ಹೊರಬೇಕೆ? ಇದು ಈಗ ನಮ್ಮ ಮುಂದಿರುವ ವರ್ಗ ಹಿತಾಸಕ್ತಿಯ ಪ್ರಶ್ನೆ.



ಬೆಲೆಯೇರಿಸದೆ ತೈಲ ನಿಧಿ ಕೊರತೆಯನ್ನು ತುಂಬಿಸುವುದು ಹೇಗೆ?

ಹಣಕಾಸು ಮಂತ್ರಿಗಳು ಮತ್ತಿತರರು, ಅದಕ್ಕೂ ಹೆಚ್ಚಾಗಿ ದೊಡ್ಡ ಇಂಗ್ಲೀಷ್ ಪತ್ರಿಕೆಗಳು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಸದಿದ್ದರೆ ಆಕಾಶವೇ ಕಳಚಿ ಬೀಳುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಇದು ಸರಿ ಯಲ್ಲ, ಬೆಲೆಯೇರಿಸದೆ ತೈಲ ನಿಧಿ ಕೊರತೆಯನ್ನು ತುಂಬಿಸಲು ಸಾಧ್ಯ ಎಂದು ಸಿಪಿಐ(ಎಂ) ಹೇಳಿರುವುದಷ್ಟೇ ಅಲ್ಲ, ನಿರ್ದಿಷ್ಟವಾಗಿ ಅದನ್ನು ದೇಶದ ಮುಂದಿಟ್ಟಿದೆ ಎಂಬುದನ್ನು 'ಐಕ್ಯರಂಗ'ದ ಹಿಂದಿನ ಸಂಚಿಕೆಗಳಲ್ಲಿ ಓದಿರುವಿರಿ. ಸಿಪಿಐ(ಎಂ) ದೀರ್ಘ ಕಾಲದ ಪರ್ಯಾಯ ಹಾಗೂ ತಕ್ಷಣದ ಪರ್ಯಾಯ ಎರಡನ್ನೂ ಮುಂದಿಟ್ಟಿದೆ. ಆಳುವ ವರ್ಗಗಳ, ಅವರ ವಕ್ತಾರರು ಪೆಟ್ರೋಲಿಯಂ ಬೆಲೆಯೇರಿಸುವುದಕ್ಕೆ ಚಡಪಡಿಸುತ್ತಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಪರ್ಯಾಯವನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡುತ್ತಿದ್ದೇವೆ.

ದೀರ್ಘ ಕಾಲದ ಪರಿಹಾರ

1.31.3.89ರಂದು ತೈಲ ನಿಧಿ ಖಾತೆಯಿಂದ ಹಣಕಾಸು ಇಲಾಖೆ ಎತ್ತಿಕೊಂಡ 8900 ಕೋಟಿ ರೂ.ಗಳ ಬಡ್ಡಿಸಮೇತ ಪಾವತಿಯಿಂದ
ರೂ. 27849 ಕೋಟಿ.

2.ಬಜೆಟ್‌ನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಮತ್ತು ಕಸ್ಟಮ್ಸ್ ಸುಂಕಗಳನ್ನು ತೆಗೆದರೆ ಉಳಿಯುವ ಹಣ
ರೂ. 19675.20 ಕೋಟಿ.

3. ದೇಶೀ ತೈಲ ಉತ್ಪಾದನೆಯ ಅಭಿವೃದ್ಧಿಗೆಂದು 31.3.89ರವರೆಗೆ ಅಧಿಕ ತೆರಿಗೆಯನ್ನು ತೈಲ ಕಂಪನಿಗಳಿಗೆ ಹಿಂದಿರುಗಿಸಿದರೆ ಬರುವ ಹಣ
ರೂ. 29900 ಕೋಟಿ.
(ಇದುವರೆಗೆ ಕೊಟ್ಟಹಣ) (-) **902.00ಕೋಟಿ**
= **27998.00 ಕೋಟಿ ರೂ.**

ಅಲ್ಪಕಾಲೀನ ಪರಿಹಾರ

1. ನೈಸರ್ಗಿಕ ಅನಿಲ ಬೆಲೆಗಳನ್ನು ತರ್ಕಬದ್ಧ ಗೊಳಿಸುವುದರಿಂದ
ರೂ. 5000.00 ಕೋಟಿ
2. ಜುಲೈ 1996ರಲ್ಲಿ ಬೆಲೆಯೇರಿಸಿ ಹಣಕಾಸು ಇಲಾಖೆ ಪಡೆದ ಹೆಚ್ಚಿನ ಆದಾಯದ ವಾಪಸಾತಿಯಿಂದ
ರೂ. 4200.00 ಕೋಟಿ
3. 1000 ಸಿ.ಸಿ. ಸಾಮರ್ಥ್ಯಕ್ಕಿಂತ ಹೆಚ್ಚಿನ ಪೆಟ್ರೋಲ್‌ಕಾರ್‌ಗಳಿಗೆ ಐಷಾರಾಮ ತೆರಿಗೆಯಿಂದ ಸಂಗ್ರಹ
ರೂ. 1000.00 ಕೋಟಿ.
4. ಡೀಸೆಲ್ ಕಾರ್‌ಗಳಿಗೆ ತಲಾ 10000 ರೂ. ತೆರಿಗೆ ಹಾಕುವುದರಿಂದ ಸಂಗ್ರಹ
ರೂ. 1600.00 ಕೋಟಿ.
5. ಉದ್ದಿಮೆಗಳು ಬಳಸುವ ಡೀಸೆಲ್ ಜನರೇಟರು ಗಳ ಮೇಲೆ ತೆರಿಗೆ ಸಂಗ್ರಹಿಸುವುದರಿಂದ
ರೂ. 1000.00 ಕೋಟಿ.
6. ಈಗ ಹಣಕಾಸು ಇಲಾಖೆಯ ಬಳಿಯಿರುವ ತೈಲ ನಿಧಿ ಹೆಚ್ಚುವರಿಯನ್ನು ಹಿಂದಿರುಗಿಸುವುದರಿಂದ
ರೂ. 4429.00 ಕೋಟಿ.
7. ರಸಗೊಬ್ಬರ ಸಬ್ಸಿಡಿಯನ್ನು ತೈಲ ನಿಧಿ ಖಾತೆಗೆ ವರ್ಗಾಯಿಸುವ ಬದಲು ಬಜೆಟ್‌ಗೆ ವರ್ಗಾಯಿಸುವುದರಿಂದ
ರೂ. 1570.00 ಕೋಟಿ.
8. ಕಚ್ಚಾತೈಲದ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ. 5ರಷ್ಟು ಇಳಿಸುವುಧರಿಂದ(ಅಂದರೆ ಶೇ. 25ರಿಂದ ಶೇ. 20ಕ್ಕೆ ಇಳಿಸುವುದರಿಂ)
ರೂ. 1000.00 ಕೋಟಿ
9. ಡೀಸೆಲ್ ಮೇಲಿನ ಕಸ್ಟಮ್ಸ್‌ಸುಂಕವನ್ನು 30ರಿಂದ ಶೇ. 20ಕ್ಕೆ ಇಳಿಸುವುದರಿಂದ
ರೂ. 1300.00 ಕೋಟಿ

ಒಟ್ಟು **ರೂ. 21099.00 ಕೋಟಿ.**
ಈಗಿರುವ ತೈಲ ನಿಧಿ ಕೊರತೆ **ರೂ. 15500.00 ಕೋಟಿ.**

ರಾಮದುರ್ಗ : ಅತಿಕ್ರಮ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಣೆ

ರಾಮದುರ್ಗ ತಾಲ್ಲೂಕಿನಲ್ಲಿ 10-20 ವರ್ಷಗಳಿಂದ ಸರಕಾರಿ ಭೂಮಿ, ಗೋಮಾಳ, ಹೆಚ್ಚುವರಿ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದ ಭೂಹೀನ ಕೃಷಿಕರಿಗೆ ಮೇ ದಿನಾಚರಣೆಯ ಸಂದರ್ಭದಲ್ಲಿ ಹಕ್ಕು ಪತ್ರ ವಿತರಣೆ ಮಾಡಲಾಯಿತು.

1991 ರಲ್ಲಿ ಅತಿಕ್ರಮ ಸಾಗುವಳಿದಾರರು ಫಾರ್ಮ್ ನಂ. 50 ತುಂಬಿ ಸಕ್ರಮಗೊಳಿಸಲು ಅರ್ಜಿ ಹಾಕಲು ಸರಕಾರ ತಿಳಿಸಿತ್ತು. ಆ ಪ್ರಕಾರ ರಾಜ್ಯಾದ್ಯಂತ ಭೂಹೀನ ಕೃಷಿಕರು ತಾವು ಸಾಗುವಳಿ ಮಾಡುತ್ತಿದ್ದ ಕುರಿತು ಫಾರ್ಮ್ 50 ತುಂಬಿದ್ದರು. ರಾಮದುರ್ಗ ತಾಲ್ಲೂಕಿನಲ್ಲೂ ನೂರಾರು ಜನರು ಫಾರ್ಮ್ ಭರ್ತಿ ಮಾಡಿದ್ದರು.

ಬೇರೆ ಬೇರೆ ತಾಲ್ಲೂಕುಗಳಲ್ಲಿ 1991 ರ ಕೊನೆಯಲ್ಲಿ ಭೂ ಮಂಜೂರಾತಿ ಸಮಿತಿಗಳು ರಚನೆಗೊಂಡು ಕಾರ್ಯಾರಂಭ ಮಾಡಿದ್ದರೂ ರಾಮದುರ್ಗದಲ್ಲಿ ಭೂ ಮಂಜೂರಾತಿ ಸಮಿತಿ ರಚನೆಯಾಗಿರಲಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಪಿ.ಪಿ.ಕುಲಕರ್ಣಿ ಇವರು ಭೂ ಮಂಜೂರಾತಿ ಸಮಿತಿ ರಚನೆಗೆ ಒತ್ತಾಯಿಸಿ 4 ದಿನ ಆಮರಣ ಉಪವಾಸ ಸತ್ಯಾಗ್ರಹ ನಡೆಸಿದ್ದರು.

ನಂತರ ಭೂ ಮಂಜೂರಾತಿ ಸಮಿತಿ ರಚಿತವಾಗಿ ಪ್ರಕರಣಗಳನ್ನು ನಿಕಾಲೆ ಮಾಡಿತ್ತು. ಆದರೆ ಮಂಜೂರಾದ ವ್ಯಕ್ತಿಗಳಿಗೆ ಈ ಬಗ್ಗೆ ಏನೂ ತಿಳಿಸದೇ 2 ವರ್ಷ ಕಡತಗಳನ್ನು ಮೂಲೆಗೆಸೆಯಲಾಗಿತ್ತು.

ಈ ಬಗ್ಗೆ ಸತತ ಒತ್ತಾಯ ಮಾಡುತ್ತಾ ಬಂದಿದ್ದ ಕರ್ನಾಟಕ ಪ್ರಾಂತ ರೈತ ಸಂಘವು ಸದ್ಯದ ತಹಶೀಲ್ದಾರರಾದ ಶ್ರೀದೊಡ್ಡಮನಿ ಇವರಿಗೂ ಈ ಬಗ್ಗೆ ತಿಳಿಸಿತ್ತು.

ತಹಶೀಲ್ದಾರರು ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಮಂಜೂರಾದ ವ್ಯಕ್ತಿಗಳಿಗೆ ದಂಡ ತುಂಬಿಸಿಕೊಂಡು ಹಕ್ಕು ಪತ್ರ ಕೊಡಲು ಕ್ರಮ ವಹಿಸಿದರು.

31 ರೈತರಿಗೆ ಹಕ್ಕು ಪತ್ರಗಳು ತಯಾರಾಗಿ ಉಳಿದ 82 ರೈತರಿಗೆ ಹಕ್ಕು ಪತ್ರ ತಯಾರಿಸಲು ತಹಶೀಲ್ದಾರರು ಕ್ರಮ ತೆಗೆದುಕೊಂಡಿದ್ದಾರೆ.

ಇದೇ ಮೇ 1 ರಂದು ರಾಮದುರ್ಗದಲ್ಲಿ ಭಾರೀ ವಿಜೃಂಭಣೆಯಿಂದ ನಡೆದ ಮೇ ದಿನಾಚರಣೆಯ ಸಂದರ್ಭದಲ್ಲಿ ತಹಶೀಲ್ದಾರರ ಪರವಾಗಿ ಸಿಬ್ಬಂದಿ ಶ್ರೀ ಕುಂಬಾರ ಅವರು 5 ರೈತರಿಗೆ ಹಕು ಪತ್ರ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಪಿ.ಪಿ.ಕುಲಕರ್ಣಿ ಮಾತನಾಡಿ ಭೂಹೀನ ರೈತನ ಕನಸು ನನಸಾಗಲು ಸಹಕರಿಸಿದ ತಹಶೀಲ್ದಾರರಾದ ದೊಡ್ಡಮನಿ, ಸಿಬ್ಬಂದಿಗಳಾದ ಕುಂಬಾರ ಹಾಗೂ ಹಣಬರಟ್ಟಿ ಇವರಿಗೆ ಹೃತ್ಪೂರ್ವಕ ಧನ್ಯವಾದ ತಿಳಿಸಿದರು. ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಭೂಮಿ ಮಂಜೂರಾದ ಪ್ರಕರಣಗಳನ್ನು ಮುಚ್ಚಿಹಾಕಿದ್ದು, ಭೂಹೀನ ರೈತರಿಗೆ ಭಾರೀ ಅನ್ಯಾಯವೆಸಗಲಾಗಿದೆ, ರಾಮದುರ್ಗ ತಾಲ್ಲೂಕಿನ ಈ ಸಾಧನೆಯನ್ನು ಇತರೆಡೆಯ ಭೂ ಹೀನ ರೈತರು ಹೋರಾಟದ ಮೂಲಕ ಪಡೆಯಲು ಮುಂದಾಗುವಂತೆ ಕುಲಕರ್ಣಿ ಕೋರಿದರು. ಹಕ್ಕು ಪತ್ರ ಪಡೆದ ರೈತನ ಮುಖದಲ್ಲಿನ ಧನ್ಯತೆ ಕರ್ನಾಟಕ ಪ್ರಾಂತ ರೈತ ಸಂಘದ ಸತತ 5 ವರ್ಷಗಳ ಹೋರಾಟಕೆ ಕೃತಜ್ಞತೆ ಸೂಚಿಸುವಂತಿತ್ತು.

ಸಿಂಧನೂರು: ಪುಟ್ಟ ವ್ಯಾಪಾರಿಗಳ ಹೋರಾಟಕ್ಕೆ ಜಯ

ಸಿಂಧನೂರಿನಲ್ಲಿ ನಗರದ ರಸ್ತೆಯ ಪಕ ದಲ್ಲಿ ಫುಟ್‌ಪಾತ್‌ಗಳಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ಹೊರೆಯುವ ಪುಟ್ಟ ವ್ಯಾಪಾರಿಗಳಿಂದ ಪ್ರತಿ ದಿನ 50 ಪೈಸೆ ತೆರಿಗೆ ಸಂಗ್ರಹಿಸುವುದನ್ನು 2 ರೂ.ಗಳಿಗೆ ಏರಿಸಿ, ಅದರ ಸಂಗ್ರಹದ ಕೆಲಸವನ್ನು ಗುತ್ತಿಗೆಗೆ ಕೊಡುವ ಅಲ್ಲಿನ ನಗರಸಭೆಯ ಪ್ರಯತ್ನ ವಿಫಲಗೊಂಡಿದೆ. ನಗರಸಭೆಯಲ್ಲಿ ಸಿಪಿಐ(ಎಂ) ಸದಸ್ಯರ ವಿರೋಧ, ಹೊರಗೆ 350 ಪುಟ್ಟ ವ್ಯಾಪಾರಿಗಳ ಮತ ಪ್ರದರ್ಶನ, ಧರಣೆಯ ಫಲವಾಗಿ ಕೊನೆಗೆ 0.50 ಪೈಸೆ ಸಂಗ್ರಹಿಸು ತ್ತಿದ್ದುದನ್ನೂ ನಿಲ್ಲಿಸಿರುವುದಾಗಿ ಹಾಗೂ ತೆರಿಗೆ ಸಂಗ್ರಹದ ಗುತ್ತಿಗೆ ನೀಡಿದ್ದನ್ನು ರದ್ದುಪಡಿಸ ಲಾಗಿದೆ ಎಂದು ಪುರಸಭೆಯ ಅಧ್ಯಕ್ಷರು ಘೋಷಿಸಿದರು. ನಂತರ ಹೊರಗೆ ಧರಣಿ ನಿರತರಾಗಿದ್ದ ಪುಟ್ಟ ವ್ಯಾಪಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸಿಪಿಐ(ಎಂ) ಪುರಸಭಾ ಸದಸ್ಯ ಶೇಕ್ಷಾಖಾದ್ರಿಯವರು ಇದು ನಮ್ಮ ಹೋರಾಟಕೆ ಸಿಕ್ಕ ಜಯ ಎಂದರು. ಈ ಹಿಂದೆ ತೆರಿಗೆ ಏರಿಸಿ ಅದರ ಸಂಗ್ರಹ ಕೆಲಸವನ್ನು ಗುತ್ತಿಗೆ ಕೊಡಬೇಕೆಂದು ನಗರ ಸಭೆ ನಿರ್ಣಯಿಸಿದಾಗ ಇಬ್ಬರು ಸಿಪಿಐ(ಎಂ) ಸದಸ್ಯರು ಮಾತ್ರ ಅದನ್ನು ವಿರೋಧಿಸಿದ್ದರು. ನಂತರ ಈ ಗುತ್ತಿಗೆ ಹಂಚಿದ ದಿನ ಅದನ್ನು ವಿರೋಧಿಸಿ ಪ್ರತಿಭಟನೆ ಮಾಡಿದಾಗ ಅದನ್ನು ಬೆಂಬಲಿಸಿದ ಶೇಕ್ಷಾಖಾದ್ರಿಯವರನ್ನೂ ಬಂಧಿಸಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಗ ತೆರಿಗೆ ಹೆಚ್ಚಳ ಬೆಂಬಲಿಸಿದ್ದ ಕಾಂಗ್ರೆಸ್ ಸದಸ್ಯರು ಪುಟ್ಟ ವ್ಯಾಪಾರಿಗಳ ಧರಣೆಯನ್ನು ನೋಡಿ ಆ ಕ್ರಮವನ್ನು ವಿರೋಧಿಸಿದರು, ಸಿಪಿಐ(ಎಂ) ಸದಸ್ಯರ ತರ್ಕಗಳನ್ನು ಬೆಂಬಲಿಸಿದರು.

ತೆರಿಗೆಯನ್ನು 50 ಪೈಸೆಯಿಂದ 2 ರೂ.ಗೆ ಏರಿಸಿದ್ದರಿಂದ ಒಂದು ವರ್ಷಕ್ಕೆ 3.6 ಲಕ್ಷ ರೂ. ಆಗುತ್ತದೆ. ಆದರೆ ಅದನ್ನು ಕೇವಲ 52000 ರೂ.ಗೆ ಗುತ್ತಿಗೆ ನೀಡಲಾಗಿದೆ, ಇದೇಕೆ ಎಂದು ಸಿಪಿಐ(ಎಂ) ಪುರಸಭಾ ಸದಸ್ಯರ ತೀವ್ರ ಪ್ರಶ್ನೆ, ಪುರಸಭೆಯ ಮಳಿಗೆಗಳ ಬಾಡಿಗೆಯನ್ನು 15 ವರ್ಷಗಳಿಂದ ಏರಿಸದೆ, ವಸೂಲಿ ಮಾಡದ ಪುರಸಭೆಗೆ ಪ್ರತಿ ತಿಂಗಳು 60 ಸಾವಿರ ನಷ್ಟವಾಗುತ್ತಿರುವುದನ್ನು ನಿರ್ಲಕ್ಷಿಸಿ ಕೇವಲ ಬಡ ಪುಟ್ಟ ವ್ಯಾಪಾರಿಗಳ ಮೇಲೆ ತೆರಿಗೆ ಹೆಚ್ಚಿಸುವ ನೀತಿಯನ್ನು ಶೇಕ್ಷಾಖಾದ್ರಿ ಮತ್ತು ಗಂಗೂಭಾಯಿಯವರು ಬಲವಾಗಿ ಖಂಡಿಸಿದರು.

ಹೊರಗೆ 350 ಪುಟ್ಟವ್ಯಾಪಾರಿಗಳು ತೆರಿಗೆ ಏರಿಕೆಯನ್ನು ರದ್ದು ಪಡಿಸಬೇಕು, ಗುತ್ತಿಗೆಯನ್ನು ರದ್ದು ಮಾಡಬೇಕು, ಪುರಸಭೆ ಸಿಬ್ಬಂದಿಯೇ ತೆರಿಗೆ ವಸೂಲಿ ಮಾಡುವಂತಾಗಬೇಕು ಎಂಬ ಬೇಡಿಕೆಯ ಮನವಿಯನ್ನು ಪುರಸಭಾ ಅಧ್ಯಕ್ಷರಿಗೆ ಸಲ್ಲಿಸಲು ಕಾದು ಕೂತಿದ್ದಾಗ ಅವರನ್ನು ಭೇಟಿ ಮಾಡಲು ನಿರಾಕರಿಸಿದ ಪುರಸಭಾಧ್ಯಕ್ಷರ ಕ್ರಮವನ್ನು ಸಿಪಿಐ(ಎಂ) ಸದಸ್ಯರು ಬಲವಾಗಿ ವಿರೋಧಿಸಿದರು.

ಕೊನೆಗೆ ಮನವಿಯನ್ನು ಸ್ವೀಕರಿಸಿ ಸಭೆಯಲ್ಲಿ ಪುಟ್ಟ ವ್ಯಾಪಾರಿಗಳ ಬೇಡಿಕೆಯನ್ನು ಚರ್ಚಿಸಲೇಬೇಕಾಗಿ ಬಂತು. ಈ ಬಾರಿ ಸಿಪಿಐ(ಎಂ)ನ ಸದಸ್ಯರ ವಾದಗಳನ್ನು 8 ಕಾಂಗ್ರೆಸ್ ಸದಸ್ಯರೂ ಬೆಂಬಲಿಸಿದರು. ಅಂತಿಮವಾಗಿ ಮೇಲೆ ಹೇಳಿದಂತೆ 50 ಪೈಸೆ ತೆರಿಗೆಯನ್ನು, ಗುತ್ತಿಗೆಯನ್ನು ರದ್ದು ಮಾಡಲು ನಿರ್ಧರಿಸಬೇಕಾಗಿ ಬಂತು. ಜನತಾದಳದ ಪುರಸಭಾಧ್ಯಕ್ಷರು ಸಭೆ ಮುಗಿಸಿ ಹೊರಗೆ ಹೋಗುವಾಗ ಕಾಂಗ್ರೆಸ್ ಸದಸ್ಯರಿಗಿಂತ ಸಿಪಿಐ(ಎಂ)ನವರದ್ದೇ ಕಿರಿಕಿರಿ ಎಂದು ಗೊಣಗುತ್ತಿದ್ದರಂತೆ. ಜನಪರ ನಿಲುವನ್ನು ಮೊದಲೇ ತಳೆದಿದ್ದರೆ ಇಂತಹ ಪರಿಸ್ಥಿತಿ ಬರುವುದಿಲ್ಲ ಎಂದೇಕೆ ಯೋಚಿಸುತ್ತಿಲ್ಲವೋ?

ತುಮಕೂರಿನಲ್ಲಿ ಸಿಪಿಐ(ಎಂ) ಸದಸ್ಯರ ಪಾದಯಾತ್ರೆ

ಜೂನ್ 7 ರಂದು ತುಮಕೂರು ನಗರದ 12 ನೇ ವಾರ್ಡಿನ ಸಿಪಿಐ(ಎಂ) ಕಾರ್ಯಕರ್ತರ ಸಭೆಯು ಮಹಮದ್ ದಸ್ತಗೀರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯ ನಂತರ ನಗರದ ಅಭಿವೃದ್ಧಿ ಕೆಲಸಗಳನ್ನು, ನಗರ ಸಭೆಯಿಂದ ಆಗುವ ಸಾರ್ವಜನಿಕ ಕೆಲಸವನ್ನು ಜರೂರಾಗಿ ಆಗುವಂತೆ ಮಾಡಲು, ನಗರ ಸಭೆಯ ಆಸ್ತಿ-ಪಾಸ್ತಿ ರಕ್ಷಿಸಲು ಸಿಪಿಐ(ಎಂ) ಅಭ್ಯರ್ಥಿ ಬಿ.ಉಮೇಶ್‌ರವರನ್ನು 12 ನೇ ವಾರ್ಡಿನ ಉಪ ಚುನಾವಣೆಯಲ್ಲಿ ಚುನಾಯಿಸಿ ಕಳಿಸಲು ಪಾದಯಾತ್ರೆಯ ಮೂಲಕ ವಿನಂತಿಸಲಾಯಿತು. ಪಾದಯಾತ್ರೆಯಲ್ಲಿ ರೈತಸಂಘದ ಹೆಚ್.ಸಿ.ಚೆನ್ನಪ್ಪ, ಆಟೋ ಚಾಲಕರ ಸಂಘದ ಎಂ.ಎನ್.ಚೆಲುವರಾಜು, ವೈ.ಎನ್. ಲೋಕೇಶ್, ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಸೈಯದ್ ಮುಜೀಬ್ ಅವರು ನೇತೃತ್ವ ವಹಿಸಿದ್ದರು.

ಪಡಿತರ ಪದಾರ್ಥಗಳ ಕಡಿತ ಹಾಗೂ ಬೆಲೆ ಏರಿಕೆಗೆ ಸಿಐಟಿಯು ಖಂಡನೆ

ಕರ್ನಾಟಕ ರಾಜ್ಯ ಸರಕಾರವು ಅಗತ್ಯವಾದ ಪಡಿತರ ಪದಾರ್ಥಗಳ ಬೆಲೆ ಏರಿಸಿರುವುದಲ್ಲದೆ ಅದರ ಪ್ರಮಾಣವನ್ನು ಕಡಿಮೆ ಮಾಡಿರುವುದನ್ನು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಹಾಗೂ ಸಿಐಟಿಯು ಖಂಡಿಸಿದೆ. ಬಡ ಕಾರ್ಮಿಕರು ಹಾಗೂ ನಾಗರೀಕರಿಗೆ ದಿನನಿತ್ಯದ ಅಗತ್ಯವಾದ ಸೀಮೆಎಣ್ಣೆ, ಅಕ್ಕಿ, ಗೋಧಿ, ಸಕ್ಕರೆ ಬೆಲೆಯನ್ನು ಏರಿಸಿರುವ ಹಾಗೂ ಪದಾರ್ಥಗಳ ಕಡಿತ ಮಾಡಿರುವುದು ರಾಜ್ಯ ಸರಕಾರದ ಜನವಿರೋಧಿ ನೀತಿ ಎಂದು ಸಿಐಟಿಯು ಖಂಡಿಸಿದೆ. ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯ ಭಾಗವಾಗಿಯೇ ಈ ಬೆಲೆಗಳು ಏರುತ್ತಿದ್ದು ಐಎಂಎಫ್ ಹಾಗೂ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳಿಂದಾಗಿ ಸಬ್ಸಿಡಿ ಕಡಿತ ಮಾಡಿ ಬಡ ರೈತ ಹಾಗೂ ಕೂಲಿ ಕಾರ್ಮಿಕರ ಮೇಲೆ ಹೆಚ್ಚಿನ ಹೊರೆ ವಿಧಿಸುತ್ತಿರುವುದು ಸರಿಯಲ್ಲ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ. ಹಿಂದಿ ನಿಂದಲೂ ಜನವಿರೋಧಿ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳನ್ನು ಜಾರಿಗೊಳಿ ಸಲು ತನ್ನ ವಿರೋಧವನ್ನು ವ್ಯಕ್ತಪಡಿಸಿರುವ ಸಿಐಟಿಯು ಇದರ ವಿರುದ್ಧ ಹೋರಾಡುತ್ತಾ ಬಂದಿದೆ. ಸರಕಾರವು ಹೆಚ್ಚಿಸಿರುವ ಅಗತ್ಯ ವಸ್ತುಗಳ ಬೆಲೆಯನ್ನು ಹಿಂದಕ್ಕೆ ಪಡೆಯು ವಂತೆ ಸಿಐಟಿಯು ಸರಕಾರವನ್ನು ಒತ್ತಾಯಿ ಸಿದೆ. ಅಲ್ಲದೆ ಅಗತ್ಯ ವಸ್ತುಗಳ ಕಾಯಿದೆಯನ್ನು ಮುಂದುವರೆಸ ಬೇಕೆಂದು ಅಭಿಪ್ರಾಯ ಪಟ್ಟಿದೆ. ಇಲ್ಲವಾದರೆ ಹೋರಾಟಕ್ಕೆ ಇಳಿಯಬೇಕಾಗು ತ್ತದೆ ಎಂದು ಸರಕಾರವನ್ನು ಎಚ್ಚರಿಸಿದೆ.

ಪ್ರಮಾಣಿಕೃತ ಬೀಜ-ಗೊಬ್ಬರ ಎಲ್ಲಾ ಕಡೆಗೆ ಒದಗಿಸಿ : ರೈತ ಸಂಘದ ಒತ್ತಾಯ

ಗುಲ್ಬರ್ಗ: ಮಾನಸೂನ್ ತಡವಾಗಿ ಪ್ರಾರಂಭವಾಗಿರುವುದರಿಂದ ರೈತರು ಸದ್ಯದಲ್ಲೇ ಭೂಮಿಗೆ ಬೀಜ ಹಾಕಲು ತಯಾರಿರುವಾಗ ಮಳೆಯ ಕೊರತೆಯಿಂದ ಮುಗಿಲು ನೋಡುತ್ತಿರುವಾಗ ಕನಿಷ್ಟ ನೀರಾವರಿಗೆ ಒಳಪಟ್ಟಿ ಸುರಪುರ, ಶಹಪೂರ, ತಾಲ್ಲೂಕಿನ ರೈತರ ಜಮೀನಿಗೆ ಕೂಡಲೇ ಕಾಲುವೆಯಲ್ಲಿ ನೀರು ಬಿಟ್ಟು ರೈತರು ಬದುಕಿಗೆ ವಲಸೆ ಹೋಗುವುದನ್ನು ತಡೆಗಟ್ಟಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ, ಗುಲ್ಬರ್ಗಾ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಭ್ರಷ್ಟ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಅಧಿಕಾರಿಗಳು ಕಾಲುವೆ ರಿಪೇರಿಯ ನೆಪದಲ್ಲಿ ಕೋಟ್ಯಾಂತರ ರೂಪಾಯಿ ಲಪಟಾಯಿಸಲು ಕಾಲುವೆಯಲ್ಲಿ ನೀರು ಬಿಡದಂತೆ ಪ್ರಯತ್ನಿಸುವುದನ್ನು ಸಂಘ ಉಗ್ರವಾಗಿ ಖಂಡಿಸಿದೆ.

ಎಷ್ಟು ಭೂಮಿ ಇದೆ, ಯಾವ ಯಾವ ಬೀಜ ಬಿತ್ತಣಿಕೆಯಾಗುತ್ತದೆಂಬುದು ಎಲ್ಲಾ ತಾಲ್ಲೂಕು ಕೃಷಿ ಅಧಿಕಾರಿಗಳು ಮೊದಲೇ ಅಂದಾಜು ಮಾಡಿ ವರದಿ ಕಳಿಸಿದರೆ ಮಂತ್ರಿಗಳು ಬೀಜಗಳ ಕೊರತೆಯಿದೆ ಎನ್ನುವುದು ಬೇಜವಾಬ್ದಾರಿತನ ಎಂದೂ ಸಂಘ ವಿಷಾದ ವ್ಯಕ್ತಪಡಿಸಿದೆ. ಕೂಡಲೇ ಹೆಸರು, ತೊಗರಿ, ಸಜ್ಜೆ, ಹತ್ತಿ, ಸೂರ್ಯಪಾನ ಇನ್ನಿತರ ಅವಶ್ಯವಿದ್ದ ಬೀಜಗಳನ್ನು ಹಾಗೂ ರಸಗೊಬ್ಬರದ ಕೊರತೆ ತೋರಿಸಿದಂತೆ ಈಗಾಗಲೇ ಯಾವ ಯಾವ ತಾಲ್ಲೂಕಿಗೆ ಎಷ್ಟು ಎಷ್ಟು ಬೇಕೆಂಬ ಅಂದಾಜಿನಂತೆ ಕೂಡಲೇ ಒದಗಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ.ಎನ್.ಆನೆಗುಂದಿ ಸರಕಾರವನ್ನು ಒತ್ತಾಯಿಸಿದ್ದಾರೆ.

ಕೊಡಗು : ಪ್ರತ್ಯೇಕತಾವಾದ ಐಕ್ಯಹೋರಾಟಕ್ಕೆ ಭಂಗ ತರುತ್ತದೆ.

ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಹೋರಾಡುತ್ತಿರುವ ಸಂಘಟನೆ ಕೊಡಗು ರಾಜ್ಯ ಮುಕ್ತಿ ಮೋರ್ಚಾದ ಪ್ರಧಾನ ಸಂಚಾಲಕ ಶ್ರಿ ಎಸ್.ಯು.ನಾಚಪ್ಪ ನವರು ತಮ್ಮ ಬೇಡಿಕೆಯ ಬಗ್ಗೆ ಇತರರೊಂದಿಗೆ ವಿಶ್ವಸಂಸ್ಥೆಯ ಕಾರ್ಯದರ್ಶಿಗಳಿಗೂ, ಬರೆದಿರು ವುದಾಗಿ ತಿಳಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ಸಿಪಿಐ(ಎಂ)ನ ವಿರಾಜಪೇಟೆ ಶಾಖೆ ತೀವ್ರವಾಗಿ ಖಂಡಿಸಿದೆ.

ಕೊಡಗು ಕರ್ನಾಟಕದ, ಭಾರತದ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ ಇಡೀ ದೇಶ ಅನುಭವಿಸುವ ಸಮಸ್ಯೆಗಳೆಲ್ಲವೂ ಕೊಡಗಿನಲ್ಲೂ ಕಂಡು ಬರುತ್ತಿದೆ. ಆದರೆ ಈ ಸಮಸ್ಯೆಗಳನ್ನು ವಿಕೃತವಾಗಿ ವಿಶ್ಲೇಷಿಸಿ, ಉತ್ಪ್ರೇಕ್ಷಿಸಿ ಕೊಡಗಿನ ಯುವಕರನ್ನು ಉದ್ರೇಕಿಸು ವಂತೆ ಮಂಡಿಸಿ ಅವರನ್ನು ತಪ್ಪು ದಾರಿಗೆಳೆಯುತ್ತಿದ್ದು, ಪ್ರತ್ಯೇಕತಾವಾದ ವನ್ನು ಬೆಳೆಸಿ ಇತರರ ವಿರುದ್ಧ ದ್ವೇಷ ಭಾವವನ್ನು ಬೆಳೆಸಿ ಐಕ್ಯ ಹೋರಾಟದ ಬೆಳವಣಿಗೆಗೆ ಕೊಡಲಿ ಏಟು ಹಾಕಲು ಕೊಡಗು ರಾಜ್ಯ ಮುಕ್ತಿ ಮೋರ್ಚಾದ ಸಂಘಟಕರು ಯತ್ನಿಸುತ್ತಿದ್ದಾರೆ ಎಂದು ಶಾಖೆ ಅಭಿಪ್ರಾಯಪಟ್ಟಿದೆ.

ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ದೇಶದ ಐಕ್ಯತೆಗೆ ಭಂಗ ಬರದಂತೆ ಹೋರಾಡಲು ತಮ್ಮ ವಾದ ಮಂಡಿಸಲು ಎಲ್ಲರಿಗೂ ಇರುವಂತೆ ಇವರಿಗೂ ಅವಕಾಶವಿದೆ. ಆದರೆ ಈ ಸ್ವಾತಂತ್ರ್ಯದ ದುರುಪಯೋಗ ಪಡಿಸಿ, ವಿಶ್ವಸಂಸ್ಥೆಯ ಕಾರ್ಯದರ್ಶಿಗಳಿಗೆ ಬರೆಯುವುದರ ಮೂಲಕ ಶ್ರೀ ನಾಚಪ್ಪನವರು ದೇಶದ ಆಂತರಿಕ ಸಮಸ್ಯೆಗಳನ್ನು ಅಂತರ್ರಾಷ್ಟ್ರೀಯ ವೇದಿಕೆಗೆ ಕೊಂಡೊಯ್ದು ಆ ಮೂಲಕ ನಮ್ಮ ದೇಶದಲ್ಲಿ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಹಸ್ತಕ್ಷೇಪಕ್ಕೆ ಕರೆ ನೀಡುತ್ತಿದ್ದಾರೆ.

ಈಗಾಗಲೇ ಈ ದೇಶದ ಐಕ್ಯತೆ ಯನ್ನು ಮುರಿಯಲು ಷಡ್ಯಂತ್ರಗಳನ್ನು ನಡೆಸುತ್ತಿರುವ ಅಮೆರಿಕನ್ ಸಾಮ್ರಾಜ್ಯ ಶಾಹಿಗೆ ವಿಶ್ವ ಸಂಸ್ಥೆಯ ಮೂಲಕ ಶ್ರೀನಾಚಪ್ಪನವರು ಕರೆ ನೀಡುವುದು ನಾಚಿಕೆಗೇಡಿನ ರಾಷ್ಟ್ರ ವಿರೋಧಿ ವರ್ತನೆ ಯಾಗಿದೆ ಎಂದು ಸಿಪಿಐ(ಎಂ) ಶಾಖೆ ಹೇಳಿದೆ. ಎಲ್ಲಾ ರಾಷ್ಟ್ರ ಪ್ರೇಮಿಗಳೂ ನಾಚಪ್ಪನವರ ವರ್ತನೆಯನ್ನು ಒಕ್ಕೊರಲಿನಿಂದ ಖಂಡಿಸಬೇಕೆಂದು ಸಿಪಿಐ(ಎಂ) ವಿರಾಜಪೇಟೆ ಶಾಖೆ ಕರೆ ನೀಡಿದೆ.

ಹಿಂದೆ ಸೋಮವಾರಪೇಟೆಯಲ್ಲಿ ಮಸೀದಿಯೊಂದರ ಮೇಲೆ ಪಾಕಿಸ್ತಾನದ ಧ್ವಜ ಹಾರಿಸಲಾಗಿದೆ ಎಂದು ಜಿಲ್ಲೆಯಾದ್ಯಂತ ಪ್ರಕ್ಷುಬ್ಧ ಸ್ಥಿತಿ ಸೃಷ್ಟಿಸಿದ ಭಾ.ಜ.ಪ. ಮುಖಂಡರು ಮತ್ತು ಕೊ.ರಾ.ಮು. ಮೋರ್ಚಾಕೆ ಸಂಪೂರ್ಣ ಬೆಂಬಲ ನೀಡಿದ್ದ ಶಾಸಕ ಬಸವರಾಜು ರವರು ಶ್ರೀನಾಚಪ್ಪನವರ ಈ ವರ್ತನೆಯ ಬಗ್ಗೆ ಏನು ಹೇಳುತ್ತಾರೆ ಎಂದೂ ಅವರನ್ನು ಶಾಖೆ ಪ್ರಶ್ನಿಸಿದೆ.

ಬಿ.ಇ.ಎಲ್.ನಲ್ಲಿ ಚುನಾವಣೆ

ಬೆಂಗಳೂರಿನ ಒಂದು ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆ ಬಿ.ಇ.ಎಲ್. ನಲ್ಲಿ ಇದುವರೆಗೂ ಪ್ರಧಾನ ಕಾರ್ಮಿಕ ಸಂಘವಾಗಿದ್ದ ಎ.ಐ.ಟಿ.ಯು.ಸಿ.ಗೆ ಸೇರಿದ ಬಿ.ಇ.ಇ.ಯು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡಿದೆ. ಯುನಿಟಿಫೋರಂ ಮತ್ತು ಅದಕ್ಕಿಂತ 98 ಮತಗಳನ್ನು ಕಮ್ಮಿ ಪಡೆದ ಸಿಐಟಿಯು ಗೆ ಸೇರಿದ ಬಿ.ಇ.ಡಬ್ಲ್ಯು.ಯು ಮಾತುಕತೆ ನಡೆಸಲು ಅರ್ಹತೆ ಪಡೆದ ಸಂಘಗಳಾಗಿವೆ. ಒಟ್ಟು 7417 ಮತಗಳಲ್ಲಿ, ಸಿಐಟಿಯು ಗೆ 2590 ಮತಗಳು ದೊರೆತವು. ಯೂನಿಟಿ ಫೋರಂ ಗೆ 2688 ಮತಗಳು ದೊರೆತವು. ಎಐಟಿಯುಸಿ ಸಂಘ 1840 ಮತಗಳನ್ನು ಪಡೆದು ಮೂರನೇ ಸ್ಥಾನದಲ್ಲಿದೆ. ಬಿ.ಎಂ.ಎಸ್.ಗೆ ಕೇವಲ 299 ಮತಗಳನ್ನು ಮಾತ್ರ ಪಡೆಯಲು ಸಾಧ್ಯವಾಗಿದೆ.

ಕರ್ನಾಟಕದಲ್ಲಿ ಕಳೆದ ವಾರ

ಜೂನ್ 6

- ದಾವಣಗೆರೆ, ಬಾಗಲಕೋಟೆ, ಗದಗ, ಹಾವೇರಿ, ಕೊಪ್ಪಳ, ಚಾಮರಾಜನಗರ ಮತ್ತು ಉಡುಪಿ ಕೇಂದ್ರವಾಗುಳ್ಳ ಹೊಸ ಜಿಲ್ಲೆಗಳ ರಚನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ವಾರ್ತಾ ಸಚಿವರು.
- ಕೂಡಲ ಸಂಗಮ ಕ್ಷೇತ್ರದ ಅಭಿವೃದ್ಧಿಗಾಗಿ ಈ ವರ್ಷ 15 ಕೋಟಿ ರೂ. ಬಿಡುಗಡೆಗೆ ಮುಖ್ಯಮಂತ್ರಿಗಳ ಆದೇಶ.
- ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಆರನೇ ದಿನದ ಕೊನೆಗೆ ಪಂಜಾಬ್‌ಗೆ ಮೊದಲ ಸ್ಥಾನ, ಕರ್ನಾಟಕ ಎರಡನೇ ಸ್ಥಾನ.

ಜೂನ್ 7

- ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಧರ್ಮಸಿಂಗ್, ಬಂಗಾರಪ್ಪ ಹಾಗೂ ವೀರಪ್ಪಮೊಯಿಲಿ ತ್ರಿಕೋಣ ಸ್ಪರ್ಧೆಯ ಸಂಭವ.
- ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮತ್ತೆ ಕರ್ನಾಟಕಕ್ಕೆ ಮೊದಲ ಸ್ಥಾನ.

ಜೂನ್ 8

- ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಅಧ್ಯಕ್ಷರ ನೇಮಕಾತಿ ವಿಷಯದಲ್ಲಿ ಇರುವ ಕಾನೂನು ತೊಡಕನ್ನು ನಿವಾರಿಸಲು ಸರಕಾರ ಕ್ರಮ ಕೈಗೊಳ್ಳುವುದು ಎಂದು ಸಚಿವರು.
- ರಾಷ್ಟ್ರೀಯ ಕ್ರೀಡಾಕೂಟದಲ್ಲಿ ರಾಜ್ಯದ ತಂಡಕ್ಕೆ ಸಮಗ್ರ ಪ್ರಶಸ್ತಿ.

ಜೂನ್ 9

- ಕೆ.ಪಿ.ಸಿ.ಸಿ. ಅಧ್ಯಕ್ಷ ಚುನಾವಣೆಗೆ ಶಿವಮೊಗ್ಗದ ಸಿವಿಲ್ ನ್ಯಾಯಾಲಯದ ತಡೆಯಾಜ್ಞೆ.
- ಜನತಾದಳ ರಾಷ್ಟ್ರೀಯ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸುವಂತೆ ರಾಜ್ಯ ಸಚಿವ ಸಂಪುಟದ ಮನವಿ.
- ಕಂಠೀರವ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ದಾಂಧಲೆ. ಪದಕ ಪಟ್ಟಿಯಲ್ಲಿ ಕರ್ನಾಟಕದ ಅಗ್ರ ಸ್ಥಾನ ಮುಂದುವರಿಕೆ.

ಜೂನ್ 10

- ರಾಜ್ಯದಲ್ಲಿನ ರಸ್ತೆ ನಿರ್ಮಾಣಕ್ಕೆ ನಬಾರ್ಡ್‌ನಿಂದ 250 ಕೋಟಿ ರೂಪಾಯಿ ಸಾಲದ ನೆರವು ಪಡೆಯಲಾಗಿದೆ ಎಂದು ಲೋಕೋಪಯೋಗಿ ಸಚಿವರು.
- ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದ ಪ್ರಾಯೋಜಕರಿಂದ ಮುಖ್ಯ ಪ್ರಾಯೋಜಕ 'ವಿಡಿಯೋಕೋನ್' ಮೇಲೆ ದೂರು, ವಿಡಿಯೋಕೋನ್‌ಗೆ ಸಂಘಟನಾ ಸಮಿತಿಯಿಂದ ಎಚ್ಚರಿಕೆ ಸೂಚನೆ - ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ.

ಜೂನ್ 11

- ಕೆ.ಪಿ.ಸಿ.ಸಿ. ಚುನಾವಣೆಗೆ ಶಿವಮೊಗ್ಗ ಸಿವಿಲ್ ನ್ಯಾಯಾಧೀಶರು ನೀಡಿದ ತಡೆಯಾಜ್ಞೆಯ ಕ್ರಮ ಬದ್ಧತೆಯನ್ನು ಪ್ರಶ್ನಿಸಿದ್ದ ರಿಟ್ ಅರ್ಜಿ ಹೈಕೋರ್ಟಿನಲ್ಲಿ ವಜಾ.
- ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟ ಅಂತ್ಯ.

ಜೂನ್ 12

- ರಾಜ್ಯಾದ್ಯಂತ ಬಾಲಕಾರ್ಮಿಕರನ್ನು ಗುರುತಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮೀಕ್ಷೆ - ಸಮೀಕ್ಷೆ ಕಾರ್ಯ ಅತೃಪ್ತಿಕರವಾಗಿರುವ ಹಲವು ಕಡೆ ಮರು ಸಮೀಕ್ಷೆ ನಡೆಸಲಾಗುವುದು ಎಂದು ಕಾರ್ಮಿಕ ಖಾತೆಯ ರಾಜ್ಯ ಸಚಿವರು.
- ಮಾಜಿ ಪ್ರಧಾನಿ ದೇವೇಗೌಡರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಧಾನ.

ಮಹಿಳಾ ಮೀಸಲಾತಿಯಿಂದ ವಿಧಾನ ಸಭೆ, ಸಂಸತ್ತಿನೊಳಗಡೆ ಮೇಲ್ಜಾತಿಯ, ಕುಲೀನ ಮಹಿಳೆಯರ ಮಹಾಪೂರವೇ ಬಂದು ಒ.ಬಿ.ಸಿ.ಗಳ ಸಾಮೂಹಿಕ ನ್ಯಾಯದ ಪ್ರಯತ್ನ ಬುಡಮೇಲಾಗುತ್ತದೆ ಎಂಬ ತರ್ಕ ನಿಜವಾಗಿ ಸಾಮಾಜಿಕ ನ್ಯಾಯ, ಸಮಾನತೆ ಪುರುಷರ ಮೂಲಕವೇ ನಡೆಯಬೇಕೆಂಬ ಸಂಕುಚಿತವಾದ ಪುರುಷ ಪ್ರಾಬಲ್ಯ ರಾಜಕೀಯ ತರ್ಕವಲ್ಲದೆ ಮತ್ತೇನೂ ಅಲ್ಲ ಎಂಬುದನ್ನು ದಲಿತ, ಶೋಷಿತ ವಿಭಾಗಗಳ ಮಹಿಳೆಯರಿಗೆ ಮನವರಿಕೆ ಮಾಡಬೇಕಾಗಿದೆ ಎನ್ನುತ್ತಾರೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ(ಎಐಡಿಡಬ್ಲ್ಯುಎ)ದ ಪ್ರಧಾನ ಕಾರ್ಯದರ್ಶಿ ಬೃಂದಾಕಾರಟ್.



ಪುರುಷ ಪ್ರಾಬಲ್ಯದ ರಾಜಕೀಯಕ್ಕಾಗಿ ಜಾತಿ ಆಧಾರಿತ ತರ್ಕ

ಬೃಂದಾ ಕಾರಟ್

ಸಂಯುಕ್ತ ರಂಗ ಸರಕಾರದಲ್ಲಿ ನಾಲು ಮಹಿಳಾ ಮಂತ್ರಿಗಳನ್ನು ಸೇರಿಸಿಕೊಂಡದ್ದು ನಿಸ್ಸಂದೇಹವಾಗಿಯೂ ಒಂದು ಸ್ವಾಗತಾರ್ಹ ಕ್ರಮ. ಏಕೆಂದರೆ ಇದುವರೆಗೆ ಈ ಸರಕಾರದಲ್ಲಿ ಬಿಹಾರದ ಏಕಮಾತ್ರ ಮಹಿಳಾ ಮಂತ್ರಿಯಿದ್ದದ್ದು ನಿಜಕೂ ನಾಚಿಕೆಗೇಡು. ಅದನ್ನೀಗ ಸರಿಪಡಿಸಲಾಗಿದೆ. ಆದರೆ ಇದು ಮಹಿಳೆಯರಿಗೆ 33% ಮೀಸಲಾತಿ ಕುರಿತ ಮಸೂದೆಯನ್ನು ಅಂಗೀಕರಿಸುವಲ್ಲಿ ಸರಕಾರ ಈಗಲೂ ವಿಫಲವಾಗಿರುವುದರಿಂದ ಸಿಟ್ಟಿಗೆದ್ದಿರುವ ಮಹಿಳೆಯರನ್ನು ಸಾಂತ್ವನಗೊಳಿಸುವ ಒಂದು ಕ್ರಮ. ಮಸೂದೆಯ ಬದಲು ಈ ಕ್ರಮ ಇದ್ದರೂ ಇರಬಹುದು ಎಂಬ ಒಂದು ಶಂಕೆ ಮಹಿಳಾ ಕಾರ್ಯಕರ್ತರಲ್ಲಿದೆ. ಪ್ರಧಾನ ಮಂತ್ರಿಗಳೂ ಈ ಶಂಕೆಯನ್ನು ಬಲಪಡಿಸುವ ಒಂದು ಸಂಪೂರ್ಣ ಅನುಚಿತ ಹೇಳಿಕೆ ನೀಡಿದರು. ಈ ಮಸೂದೆಯನ್ನು ಪಾಸು ಮಾಡಿಕೊಳ್ಳುವ ತರಾತುರಿಯೇನೂ ತನಗಿಲ್ಲವೆಂದೂ, ಹಿಂದೆ ಹಿಂದೂ ಕೋಡ್ ಬಿಲ್ ವಿಷಯದಲ್ಲಿ ಮಾಡಿದಂತೆ ಈ ಮಸೂದೆಯ ವಿರೋಧಿಗಳಿಗೂ ಮನವರಿಕೆ ಮಾಡಿಸಲು ತಾನು ಸಹನೆಯಿಂದ ಪ್ರಯತ್ನಿಸುವುದಾಗಿಯೂ ಅವರು ಹೇಳಿದರು. ಆದರೆ ಇದೊಂದು ಸೂಕ್ತವೆನಿಸುವ ಉದಾಹರಣೆಯಲ್ಲ. ಏಕೆಂದರೆ ಐವತ್ತರ ದಶಕದಲ್ಲಿ ಹಿಂದೂ ಕೋಡ್ ಬಿಲ್ ಬಗ್ಗೆ ಚರ್ಚೆ ನಡೆದಾಗ ಎಲ್ಲಾ ರಾಜಕೀಯ ಪಕ್ಷಗಳೂ ಈ ಹಿಂದೂ ಕಾನೂನಿನ ಸುಧಾರಣೆಯನ್ನು ಬೆಂಬಲಿಸಿರಲಿಲ್ಲ. ವಾಸ್ತವವಾಗಿ ಮೊದಲ ಚುನಾವಣೆಗಳಲ್ಲಿ ಹಿಂದೂ ಮಹಾ ಸಭಾ ಹಿಂದೂಗಳ ವೈಯುಕ್ತಿಕ ಕಾನೂನುಗಳಲ್ಲಿ ಯಾವುದೇ ಹಸ್ತಕ್ಷೇಪವಿರಬಾರದು ಎಂಬುದನ್ನು ತನ್ನ ಚುನಾವಣಾ ವಿಷಯವನ್ನಾಗಿ ಮಾಡಿತ್ತು. ಆದರೆ ಈಗ ಮಹಿಳಾ ಮೀಸಲಾತಿ ಮಸೂದೆಯ ವಿಷಯದಲ್ಲಿ ಹಾಗಲ್ಲ. ಪ್ರತಿಯೊಂದು ರಾಷ್ಟ್ರೀಯ ಪಕ್ಷವೂ ರಾಜ್ಯ ವಿಧಾನ ಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಮಹಿಳೆಯರಿಗೆ ಮೂರನೇ ಒಂದಂಶ ಮೀಸಲಾತಿಯನ್ನು ಬೆಂಬಲಿಸಿದೆ. ಎಲ್ಲಾ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ಈ ಅಂಶ ಇತ್ತು. ಈ ಅಂಶವನ್ನು ನಾವು ಸತತವಾಗಿ ಒತ್ತಿ ಹೇಳುತ್ತಿದ್ದೇವೆ.

ಶರದ್ ಯಾದವ್ ಮತ್ತು ನಿತಿಶ್ ಕುಮಾರ್ ರವರ ಟಿಪ್ಪಣಿಗಳ ಬಗ್ಗೆ ವ್ಯಕ್ತವಾಗಿರುವ ಕ್ರೋಧ ಖಂಡಿತಾ ಸಮರ್ಥನೀಯ. ಆದರೆ ಈ ಮೀಸಲಾತಿ ಪ್ರಶ್ನೆಯನ್ನು ಬುಡಮೇಲು ಮಾಡಲು ಮಹಿಳೆಯರನ್ನು ಜಾತಿ ಮತ್ತು ಕೋಮಿನ ಹೆಸರಲ್ಲಿ ಒಡೆಯುವ ಗಂಭೀರ ಪ್ರಯತ್ನದಲ್ಲಿರುವ ಒಂದು ಶಕ್ತಿಶಾಲಿ ವಲಯವನ್ನು ಅವರು ಪ್ರತಿನಿಧಿಸುತ್ತಿದ್ದಾರೆ ಎಂಬುದು ನಿಜ. ಹಲವು ರಾಜ್ಯಗಳಲ್ಲಿ ಜಾತಿ ಮತ್ತು ಧರ್ಮದ ಹೆಸರಿಗೆ ಮಹಿಳೆಯರು ಹೆಚ್ಚು ಮಿಡಿಯುತ್ತಾರೆ. ಆದ್ದರಿಂದ ಮೀಸಲಾತಿ ಮಸೂದೆಯ ಪ್ರತಿಪಾದಕರು ಕೆಲವು ಟಿಪ್ಪಣಿಗಳಿಗೆ ಸಿಟ್ಟಿನಿಂದ ಪ್ರತಿಕ್ರಿಯಿಸುವುದಷ್ಟಕ್ಕೇ ನಿಲ್ಲದೆ ಇನ್ನೂ ಮುಂದೆ ಹೋಗಿ ದಲಿತ, ಶೋಷಿತ ವಿಭಾಗಗಳ ಮಹಿಳೆಯರಿಗೇ ಮನವರಿಕೆ ಮಾಡಬೇಕಾಗಿದೆ. ಜಾತಿ ಆಧಾರಿತ ತರ್ಕಗಳು ವಾಸ್ತವವಾಗಿ ಪುರುಷ ಪ್ರಾಬಲ್ಯದ ರಾಜಕೀಯವನ್ನು ಮುಂದುವರೆಸಲು ಬದ್ಧರಾಗಿರುವವರ ಪಟ್ಟಭದ್ರ ಹಿತಾಸಕ್ತಿಗಳನ್ನಷ್ಟೇ ಈಡೇರಿಸುತ್ತದೆ ಎಂದು ಮನವರಿಕೆ ಮಾಡಬೇಕಾಗಿದೆ.

ಸಂಪ್ರದಾಯಶರಣರ ವಿಶೇಷಣಗಳು

ಮಹಿಳೆಯರಿಗೆ ಮೀಸಲಾತಿಯಿಂದ ರಾಜ್ಯದ ವಿಧಾನ ಮಂಡಲಗಳಲ್ಲಿ ಹಾಗೂ ಸಂಸತ್ತಿನೊಳಗೆ ಮೇಲ್ಜಾತಿಯ ಉಚ್ಚ ಕುಲೀನ ಮಹಿಳೆಯರ ಮಹಾಪೂರವೇ ಬರಬಹುದು, ಇದರಿಂದ ಚುನಾಯಿತ ಸಂಸ್ಥೆಗಳಲ್ಲಿ ಮೇಲ್ಜಾತಿಯ ಗುತ್ತೇದಾರಿಕೆಯನ್ನು ಒಡೆಯುವ ಇತರ ಹಿಂದುಳಿದ ವರ್ಗಗಳ(ಒಬಿಸಿ ಗಳ) ಯಶಸ್ವಿ ಪ್ರಯತ್ನಗಳೆಲ್ಲಾ ವ್ಯರ್ಥವಾಗುತ್ತವೆ ಎಂದು ಹೇಳಲಾಗುತ್ತಿದೆ. ಶರದ್ ಯಾದವ್‌ರ ಸ್ಮರಣೀಯ ಮಾತುಗಳಲ್ಲಿ ಹೇಳುವುದಾದರೆ "ಯಾವ ಮಹಿಳೆಯರ ಬಗ್ಗೆ ನೀವು ಮಾತಾಡುತ್ತೀರಿ? ಗಿಡ್ಡ ಕೂದಲಿನ ಮಹಿಳೆಯರೇ?... ಸಿತಾರ್ ಮತ್ತು ಗಿಟಾರ್ ಬಾರಿಸುವ ಮಹಿಳೆಯರೆ?....... ನೀವು ಅವರನ್ನು ಸಂಸತ್ತಿಗೆ ತರಬಯಸುತ್ತೀರಿ.... ನಮ್ಮ ಹೋರಾಟವನ್ನು ವ್ಯರ್ಥಗೊಳಿಸ ಬಯಸುತ್ತೀರಿ"!

ಸಾಮಾಜಿಕ ನ್ಯಾಯದ ಹೆಸರಲ್ಲಿ ಮಾತನಾಡುವವರೂ ಅತಿ ಬಲಪಂಥೀಯರು ಸಂಪ್ರದಾಯವನ್ನು ರಕ್ಷಿಸುವ ಹೆಸರಲ್ಲಿ ಮಹಿಳೆಯ ಬಗ್ಗೆ ಯಾವ ಅವಹೇಳನಕಾರಿ ವರ್ಣನೆಗಳನ್ನು ಬಳಸುತ್ತಾರೋ ಅದನ್ನೇ ಬಳಸುತ್ತಿರುವುದು ನಿಜವಾಗಿಯೂ ಗಮನಾರ್ಹ. ಇಲ್ಲಿ ರೂಪಕನ್ವರ್‌ಳ ಕೊಲೆಯ ವಿರುದ್ಧ ಪ್ರಚಾರಾಂದೋಲನ ನಡೆಸಿದ ಮಹಿಳಾ ಕಾರ್ಯಕರ್ತರನ್ನು ಹೀಗಳೆಯಲು ಸತಿ ಪದ್ಧತಿಯ ಪರವಾಗಿರುವವರು ಬಳಸಿದ ವಿಶೇಷಣಗಳನ್ನು ನೆನಪಿಸಿಕೊಳ್ಳಬಹುದು "ಪಾಶ್ಚಾತ್ಯೀಕರಣ ಗೊಂಡವರು, ಗಿಡ್ಡ ಕೂದಲಿನವರು, ಗಂಡಸರ ವೇಷ ಭೂಷಣ ಮಾಡುವವರು" ಎಂದೆಲ್ಲಾ ಹೇಳಿದ್ದರಲ್ಲವೇ? ಈ ಇಬ್ಬರ ನಡುವೆ ಇರುವ ಒಂದು ಸಮಾನ ಅಂಶವೆಂದರೆ ಮಹಿಳೆಯರನ್ನು ಕುರಿತಂತೆ ಒಂದು ಅತ್ಯಂತ ಆಳವಾದ ಸಂಪ್ರದಾಯಶರಣ ದೃಷ್ಟಿಕೋನ ಹಾಗೂ ಅವರ ಸಮಾನತೆಯ ಹೋರಾಟದ ಬಗ್ಗೆ ಒಂದು ತುಚ್ಛ ಭಾವನೆ. ಇದು ಸಂಪೂರ್ಣವಾಗಿ ಕೇವಲ ಜಾತಿಯನ್ನೇ ಆಧರಿಸಿದ ಸಾಮಾಜಿಕ ನ್ಯಾಯದ ವೇದಿಕೆ ಎಂತಹ ಸಂಕುಚಿತ ಪಂಥವಾದೀ ಸ್ವರೂಪದ್ದು ಎಂಬುದನ್ನು ತೋರಿಸುತ್ತದಷ್ಟೆ. ಇದು ಸಾಮಾಜಿಕ ನ್ಯಾಯದ ವ್ಯಾಪಕ ಹೋರಾಟದಿಂದ ಲಿಂಗ ನ್ಯಾಯದ ಒಂದು ಮಹತ್ವಪೂರ್ಣ ಆಯಾಮವನ್ನೇ ಕಿತ್ತು ಹಾಕುತ್ತದೆ.

ದಲಿತ, ಶೋಷಿತ ಜಾತಿಗಳ ಮಹಿಳೆಯರು ಮೂರು ರೀತಿಯ - ಜಾತಿ ದಮನ, ವರ್ಗ ಶೋಷಣೆ ಮತ್ತು ಲಿಂಗ ಅಸಮಾನತೆ - ಹೊರೆಗಳನ್ನು ಹೊರಬೇಕಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಇಲ್ಲಿ ಶರದ್ ಯಾದವ್ ಮತ್ತು ಅವರ ಸಹಯೋಗಿಗಳು ದನಿ ನೀಡಿರುವುದು ಇಂತಹ ಮಹಿಳೆಯರ ಹಿತಾಸಕ್ತಿಗಳಿಗಲ್ಲ, ರಾಜಕೀಯ ವಲಯದಲ್ಲಿ ಮುಖ್ಯವಾಗಿರುವುದು ವಿವಿಧ ಜಾತಿಗಳ ಮಹಿಳೆಯ ನಡುವಿನ ಅಂತರವಲ್ಲ, ಒಂದೇ ಜಾತಿಯೊಳಗೆ ಮಹಿಳೆ ಮತ್ತು ಪುರುಷರ ನಡುವಿನ ಅಂತರ.

ಒ.ಬಿ.ಸಿ. ಮಹಿಳೆಯರ ಪ್ರಮಾಣವೆಷ್ಟು?

ವಿವಿಧ ಕಾರಣಗಳಿಂದಾಗಿ ಸಂಸತ್ತಿನಲ್ಲಿ ಹಾಗೂ ಬಿಹಾರ, ಉತ್ತರ ಪ್ರದೇಶ, ತಮಿಳುನಾಡುವಿನಂತಹ ರಾಜ್ಯಗಳಲ್ಲಿ ಒ.ಬಿ.ಸಿ. ಗಳು ಅತಿದೊಡ್ಡ ಜಾತಿ ಗುಂಪು. ಮಂಡಲ್ ಚಳುವಳಿಯ ನಂತರ ಒ.ಬಿ.ಸಿ. ಗಳನ್ನು ಒಂದು ರಾಜಕೀಯ ವಿಭಾಗವಾಗಿ ಅಣಿನೆರೆಸಿರುವುದು, ಒ.ಬಿ.ಸಿ.ಗಳಲ್ಲಿ ಒಂದು ವಿಭಾಗ ಆರ್ಥಿಕವಾಗಿ ಮೇಲಟ್ಟಕ್ಕೆ ಚಲಿಸಿರುವುದು (ಸುಪ್ರೀಂ ಕೋರ್ಟ್ ಇವರನ್ನು ಕೆನೆಪದರ ಎಂದು ನಿರ್ವಚಿಸಿದೆ) ಇತ್ಯಾದಿ ಕಾರಣಗಳೂ ಇರಬಹುದು. ಸಂಸತ್ತಿನಲ್ಲಿ ಶ್ರೀಯುತ ಯಾದವ್‌ರವರ ಅಂದಾಜಿನ ಪ್ರಕಾರ ಸಂಸತ್ತಿನಲ್ಲಿ ಮಧ್ಯಮ ಜಾತಿಗಳ ಎಂಪಿಗಳ ಸಂಖ್ಯೆ 280(ಬೇರೆ ಅಂದಾಜುಗಳ ಪ್ರಕಾರ ಒಬಿಸಿ ಸಂಖ್ಯೆ ಸುಮಾರು 160) ಆದರೆ ಒ.ಬಿ.ಸಿ. ಮಹಿಳೆಯರ ಸಂಖ್ಯೆ ಕೇವಲ 4. ಉತ್ತರ ಪ್ರದೇಶ ಅಸೆಂಬ್ಲಿಯಲ್ಲಿ 120 ಒ.ಬಿ.ಸಿ. ಪುರುಷ ಎಂ.ಎಲ್.ಎ. ಗಳಿದ್ದಾರೆ. ಮಹಿಳೆಯರ ಸಂಖ್ಯೆ ಕೇವಲ 7. ಬಿಹಾರದಲ್ಲಿ 157 ಕ್ಕೆ ಎದುರಾಗಿ ಕೇವಲ 5 .

ಆದರೆ ಮೀಸಲಾತಿ ಮಸೂದೆಯ ವಿರುದ್ಧ ಜಾತಿ ಆಧಾರಿತ ತರ್ಕಗಳಿಗೆ ವ್ಯಾಪಕ ಬೆಂಬಲವಿರುವ ಬಿಹಾರ ಮತ್ತು ಉತ್ತರ ಪ್ರದೇಶದ ಅಸೆಂಬ್ಲಿಗಳಲ್ಲಿ ವಿವಿಧ ಜಾತಿಗಳ ಮಹಿಳಾ ಸದಸ್ಯರ ಸಂಖ್ಯೆಗಳು ಒ.ಬಿ.ಸಿ. ಮಹಿಳೆಯರೇ ಇತರರಿಗಿಂತ ಹೆಚ್ಚಿನ ಸ್ಥಾನ ಪಡೆದಿದ್ದಾರೆ ಎಂಬುದಕ್ಕೆ ಪುರಾವೆ ಒದಗಿಸುತ್ತವೆ. ಬಿಹಾರದಲ್ಲಿ ಒಟ್ಟು ಮಹಿಳಾ ಎಂ.ಎಲ್.ಎ. ಗಳ ಸಂಖ್ಯೆ 10, ಇವರಲ್ಲಿ ಐವರು ಒ.ಬಿ.ಸಿ. ತಲಾ ಇಬ್ಬರು ಪರಿಶಿಷ್ಟ ಜಾತಿ ಮತ್ತು ಪಂಗಡದವರು. ಒಬ್ಬರು ಮೇಲ್ಜಾತಿಯವರು. ಉತ್ತರ ಪ್ರದೇಶದ ಒಟ್ಟು 16 ಮಹಿಳಾ ಎಂ.ಎಲ್.ಎ ಗಳಲ್ಲಿ 7 ಮಂದಿ ಒಬಿಸಿ, ನಾಲ್ವರು ಪರಿಶಿಷ್ಟ ಜಾತಿಗಳವರು, ಇಬ್ಬರು ಪರಿಶಿಷ್ಟ ಪಂಗಡಗಳವರು ಹಾಗೂ ಮೂವರು ಮೇಲ್ಜಾತಿಗಳವರು.

ಇದು ಜಾತಿ ಪಕ್ಷಪಾತವನ್ನು ತೋರದೆ ಲಿಂಗ ಪಕ್ಷಪಾತವನ್ನು ತೋರಿಸುತ್ತದಷ್ಟೆ. ಮೇಲೆ ಇದ್ದರೆ, ಅದು ಕೆಳಗೂ ತೊಟ್ಟಿಕುತ್ತದೆ ಎಂಬ ಸಿದ್ಧಾಂತವನ್ನು ರಾಜಕೀಯಕ್ಕೆ ಅನ್ವಯಿಸುವುದರ ಅರ್ಥವೆಂದರೆ ಪ್ರಾತಿನಿಧ್ಯವೆಂಬುದು ಪುರುಷರ ಮೂಲಕವೇ ಇರಬೇಕು ಎಂದು. ಆದರೆ ಸಾಮಾಜಿಕ ನ್ಯಾಯ ಪ್ರಾಕ್ಸಿಯ ಮೂಲಕ, ಏಜೆಂಟರ ಮೂಲಕ ಸಾಧ್ಯವಿಲ್ಲವಲ್ಲ. ಮಹಿಳೆಯರಿಗೆ ಸಾರ್ವತ್ರಿಕ ಮೀಸಲಾತಿ ಒ.ಬಿ.ಸಿ. ಮಹಿಳೆಯರಿಗೂ ಪ್ರಾಯೋಜನಕಾರಿ. ಏಕೆಂದರೆ ಜಾತಿ-ಆಧಾರಿತ ಚುನಾವಣಾ ಲೆಕ್ಕಾಚಾರದ ಪಕ್ಷಗಳು ಮಹಿಳಾ ಮೀಸಲಾತಿ ಸ್ಥಾನಗಳಲ್ಲೂ ಅದನ್ನೇ ಮುಂದುವರೆಸುತ್ತಾರೆ. ಇದರಿಂದ ಮುಂದಿನ ಲೋಕಸಭೆಯಲ್ಲಿನ ಸಾಮಾಜಿಕ ಸಂಯೋಜನೆಯಲ್ಲಿ ಕಾಣಬಹುದಾದ ಬದಲಾವಣೆಯೆಂದರೆ ಇದೋ ಅದೋ ಜಾತಿಯ ಸಂಖ್ಯೆಯಲ್ಲಲ್ಲ. ಬದಲಿಗೆ ಒಂದು ಜಾತಿಯ ಪುರುಷರ ಸ್ಥಾನದಲ್ಲಿ ಆ ಜಾತಿಯ ಮಹಿಳೆಯರು ಬರುತ್ತಾರಷ್ಟೆ.

ತಮಾಷೆಯ ಸಂಗತಿಯೆಂದರೆ ಜಾತಿ ಆಧಾರಿತ ಕೋಟಾಗಳನ್ನು ಬಯಸುವವರು ಓ.ಬಿ.ಸಿ. ಮಹಿಳೆಯರನ್ನೇ ಅವಹೇಳನ ಮಾಡುತ್ತಾರೆ, ಸಾರ್ವಜನಿಕ ಜೀವನದಲ್ಲಿ ಪಾತ್ರ ವಹಿಸುವ ಅವರ ಸಾಮರ್ಥ್ಯವನ್ನೇ ಈ ಮೂಲಕ ಪ್ರಶ್ನಿಸುತ್ತಾರೆ. ಗಿಡ್ಡ ಕೂದಲಿನ ಮಹಿಳೆಯರ ಬಗ್ಗೆ ತೋರಿದ ದುರಹಂಕಾರದ ಮತ್ತೊಂದು ಮಗ್ಗುಲು ಓ.ಬಿ.ಸಿ. ಮಹಿಳೆಯರು ಅಷ್ಟು ಸಮರ್ಥರಲ್ಲ, ಆದ್ದರಿಂದ ಚುನಾವಣೆ ಗೆಲ್ಲಲು ಅಸಮರ್ಥರು ಎಂಬ ಅಷ್ಟೇ ಆಕ್ಷೇಪಾರ್ಹವಾದ ಅಂದಾಜು. ಪಂಚಾಯತುಗಳಲ್ಲಿ ಮಹಿಳಾ ಮೀಸಲು ಸ್ಥಾನಗಳಿಂದ ಗೆದ್ದು ಬಂದ ದೊಡ್ಡ ಸಂಖ್ಯೆಯ ಓ.ಬಿ.ಸಿ. ಮಹಿಳೆಯರು ವಹಿಸಿರುವ ಸಕಾರಾತ್ಮಕ ಪಾತ್ರ ಇದಕ್ಕೆ ಸಾಕಷ್ಟು ಉತ್ತರವಾಗಬೇಕು.

ದಲಿತ ಮಹಿಳೆಯರಿಗಾಗಿ ಇವರೇನು ಮಾಡಿದ್ದಾರೆ?

ಒಂದು ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಒಬ್ಬಾತ ಅಥವಾ ಒಬ್ಬಾಕೆ ತಂತಾನೇ ಆ ಜಾತಿಯ ವಕ್ತಾರರಾಗುತ್ತಾರೆ ಎಂಬ ತರ್ಕವನ್ನು ಕೂಡಾ ಪ್ರಶ್ನಿಸಲೇಬೇಕಾಗುತ್ತದೆ. ಈ ವಿಭಾಗಗಳ ಮಹಿಳೆಯರನ್ನೇ ಹೆಚ್ಚಾಗಿ ತಟ್ಟುವ, ಅದರಲ್ಲೂ ಮುಖ್ಯವಾಗಿ ಅವರ ಮೇಲೆ ವೈಯುಕ್ತಿಕ ಹಿಂಸಾಚಾರದ ಪ್ರಶ್ನೆಗಳನ್ನೆತ್ತಿ ಮಹಿಳಾ ಸಂಘಟನೆಗಳು ಹೋರಾಟ ನಡೆಸುತ್ತಿದ್ದಾಗ ಈ ಓಬಿಸಿ ಮಹಿಳೆಯರ ಹೆಸರಲ್ಲಿ ಮಾತನಾಡುವ ಈ ಮಂದಿಯ ಪತ್ತೆಯೇ ಇರಲಿಲ್ಲ. ರಾಜಸ್ತಾನದ ಬಾಂವ್ರಿ ದೇವಿಯ ಹಕ್ಕುಗಳಿಗಾಗಿ ಹೋರಾಡಿದವರು ಈ ಮಹನೀಯರಂತೂ ಅಲ್ಲ. ಬಿಹಾರದಲ್ಲಿ ಭುಕ್ಲಿ ದೇವಿಯ ಬಟ್ಟೆ ಕಳಚಿ ಮೆರವಣಿಗೆ ನಡೆಸಿದಾಗ, ಸಹಾರಾಣ್‌ಪುರದ ಉಷಾ ಧೀಮನ್ ಕೂಡಾ ಇಂತಹುದೇ ಭೀಕರ ಯಾತನೆಗೊಳಗಾದಾಗ ಪ್ರತಿಭಟಿಸಿದವರು ಇವರಲ್ಲ. ಇಷ್ಟೇ ಅಲ್ಲ, ಜಾತಿಯ ಹೆಸರಲ್ಲಿ ತಮ್ಮನ್ನು ಪ್ರತಿನಿಧಿಸುವುದಾಗಿ ಹೇಳುವವರು ತಮಗೆ ರಾಜಕೀಯವಾಗಿ ಅನುಕೂಲಕರವೆನಿಸಿದಾಗ ಮಾತ್ರವೇ ತಮ್ಮ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾರೆ ಎಂಬುದನ್ನು ಹಿಂಸಾಚಾರಕ್ಕೊಳಗಾದ ವಿಭಿನ್ನ ಜಾತಿಗಳ ಮಹಿಳೆಯರು ಸ್ವಂತ ಕಹಿ ಅನುಭವದಿಂದಲೇ ಕಂಡುಕೊಂಡಿದ್ದಾರೆ. ಯಾವುದೇ ಜಾತಿಯಿರಲಿ, ಜಾತಿಯೊಳಗೆ ಮಹಿಳೆಯರ ವಿರುದ್ಧ ದಮನ ಮತ್ತು ಹಿಂಸಾಚಾರದ ಘಟನೆಗಳನ್ನು ಜಾತಿಯನ್ನು ಪ್ರತಿನಿಧಿಸುತ್ತೇವೆ ಎನ್ನುವವರು ಕೈಗೆತ್ತಿಕೊಳ್ಳುವುದಿಲ್ಲ, ಅದನ್ನು ಜಾತಿಯ ಪ್ರತಿಷ್ಠೆ ಎಂದು ಕೆಲವರು ಭಾವಿಸುತ್ತಾರೆ. ಸಂಕುಚಿತ ಜಾತಿವಾದಿ ರಾಜಕೀಯದಲ್ಲೇ ಅಡಕವಾಗಿರುವ ಮಿತಿಯಿದು.


ಎಐಡಿಡಬ್ಲ್ಯುಎ ನಂತಹ ಮಹಿಳಾ ಸಂಘಟನೆಗಳು ಗ್ರಾಮೀಣ ಬಡ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿರುವ ಇನ್ನೂ ಹಲವು ಉದಾಹರಣೆಗಳಿವೆ. ಸುಮಾರಾಗಿ ಇವರೆಲ್ಲಾ ದಲಿತರು ಅಥವಾ ಓ.ಬಿ.ಸಿ.ಗಳ ಅತ್ಯಂತ ಹಿಂದುಳಿದ ವಿಭಾಗಗಳವರು. ಇಂತಹ ಸಂದರ್ಭಗಳಲ್ಲಿ ಓ.ಬಿ.ಸಿ. ಮಹಿಳೆಯರ ಇಂತಹ ಸ್ವಯಂ ಘೋಷಿತ ರಕ್ಷಕರ ಬೆಂಬಲ ದೊರೆತದ್ದು ಬಹಳ ಅಪರೂಪ. ಬದಲಾಗಿ ಓ.ಬಿ.ಸಿ.ಗಳಲ್ಲಿನ ಕೆನೆಪದರದ ಪ್ರತಿನಿಧಿಗಳು ಈ ಹೋರಾಟಗಳನ್ನು ವಿರೋಧಿಸಿ ನಿಂತ ಸಂದರ್ಭಗಳೇ ಹೆಚ್ಚು. ಉದಾಹರಣೆಗೆ, ಬಿಹಾರದಲ್ಲಿ ಭೂ ಹಕ್ಕುಗಳ ಹೋರಾಟದಲ್ಲಿ ಮಹಿಳೆಯರು ಮಹತ್ತರ ಪಾತ್ರ ವಹಿಸುತ್ತಿದ್ದಾರೆ. ಇಂತಹ ಆರ್ಥಿಕ ಹಕ್ಕುಗಳ ಸಂದರ್ಭಗಳಲ್ಲಿ ಜಾತಿ ಸೌಹಾರ್ದತೆ ಮರೆತೇ ಹೋಗುತ್ತದೆ. ವರ್ಗಹಿತಾಸಕ್ತಿಗಳೇ ಪ್ರಬಲವಾಗುತ್ತವೆ.

ಆದ್ದರಿಂದ ಮಹಿಳೆಯರ ಅತ್ಯಂತ ದಲಿತ ವಿಭಾಗಗಳಲ್ಲಿ ಈ ಜಾತಿ ಆಧಾರಿತ ತರ್ಕದ ಟೊಳ್ಳುತನವನ್ನು ಪರೋಕ್ಷವಾಗಿ ರಾಜಕೀಯದಲ್ಲಿ ಪುರುಷ ಪ್ರಾಬಲ್ಯದ ರಕ್ಷಣೆಗಾಗಿ ಮಾಡುತ್ತಿರುವ ಪ್ರಯತ್ನ ಎಂದು ಬಯಲಿಗೆಳೆಯಲು ಅತ್ಯಂತ ವ್ಯಾಪಕ ಪ್ರಚಾರಾಂದೋಲನ ಅಗತ್ಯ. ○

'ಸಮಾನ ಕನಿಷ್ಠ ಕಾರ್ಯಕ್ರಮ' ಜಪ ಮಾತ್ರಕ್ಕೆ ಎಂಬುದು ಪರಿಣತರ ಅಭಿಪ್ರಾಯ ಕೂಡಾ

ಸಂಯುಕ್ತ ರಂಗ ಸರಕಾರದ ಆರ್ಥಿಕ ನೀತಿಗಳು ಹಿಂದಿನ ನರಸಿಂಹರಾವ್ ಸರಕಾರದ ಮುಂದುವರಿಕೆ ಮಾತ್ರವೇ ಅಲ್ಲ ವಾಸ್ತವವಾಗಿ, ಅದನ್ನು ಇನ್ನಷ್ಟು ತೀವ್ರಗೊಳಿಸಲಾಗಿದೆ. ಈ ವರ್ಷದ ವಾರ್ಷಿಕ ಬಜೆಟ್ ಅದಕ್ಕೊಂದು ಉತ್ತಮ ಉದಾಹರಣೆ - ಇದು ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ತಜ್ಞರ ಒಂದು ಗುಂಪಿನ ತೀರ್ಮಾನ. ಮೇ 21 ರಂದು 1997-98 ರ 'ಪರ್ಯಾಯ ಆರ್ಥಿಕ ಸರ್ವೇಕ್ಷಣೆ' ಎಂಬ ದಸ್ತಾವೇಜನ್ನು ತಜ್ಞರ ಗುಂಪು ಬಿಡುಗಡೆಗೊಳಿಸಿತು. ಐಎಂಎಫ್-ವಿಶ್ವಬ್ಯಾಂಕ್ ಪ್ರೇರಿತ ಸಂರಚನಾ ಹೊಂದಾಣಿಕೆ ಕಾರ್ಯಕ್ರಮವನ್ನು ವಿರೋಧಿಸುವ ಹಾಗೂ ಒಂದು ಪರ್ಯಾಯ ಧೋರಣಾ ಚೌಕಟ್ಟಿನಿಂದ ಮಾತ್ರವೇ ಭಾರತದ ಬಹುಪಾಲು ಜನರ ಒಳಿತಿನ ಹಾಗೂ ದೇಶದ ಸಾರ್ವಭೌಮತೆಯ ರಕ್ಷಣೆ ಸಾಧ್ಯ ಎಂದು ನಂಬುವ ಈ ತಜ್ಞರ ಗುಂಪು 1992-93 ರಿಂದ ಈ ರೀತಿ ಪರ್ಯಾಯ ಆರ್ಥಿಕ ಸರ್ವೇಕ್ಷಣೆಯನ್ನು ಪ್ರಕಟಿಸುತ್ತಾ ಬರುತ್ತಿದೆ.

ದಸ್ತಾವೇಜು ವಾಸ್ತವವಾಗಿ ಸರಕಾರೀ ಅಂಕಿ-ಅಂಶಗಳನ್ನೇ ಆಧರಿಸಿರುತ್ತದೆ. ವಾಸ್ತವವಾಗಿ ಇದು ಸರಕಾರೀ ಆರ್ಥಿಕ ಸರ್ವೇಕ್ಷಣೆ ಯಾವ ಅಂಕಿ-ಅಂಶಗಳನ್ನಾಧರಿಸಿ ದೇಶದ ಆರ್ಥಿಕದ ಬಗ್ಗೆ ಒಂದು ಕಣ್ಣೋಟವನ್ನು ಪ್ರತಿವರ್ಷ ನೀಡುತ್ತದೋ ಅದೇ ಅಂಕಿ-ಅಂಶಗಳ ಆಧಾರದ ಮೇಲೆ ಪರ್ಯಾಯ ನೋಟವೊಂದನ್ನು ಕೊಡುತ್ತದೆ. ಪರ್ಯಾಯವೆಂದರೆ ಬಹುಪಾಲು ಭಾರತೀಯ ಹಿತದೃಷ್ಟಿಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳುವ ಪರ್ಯಾಯ ಸಮಾನ ಕನಿಷ್ಠ ಕಾರ್ಯಕ್ರಮ ಇದ್ದರೂ ಸರಕಾರ ಜನ-ಕೇಂದ್ರಿತ ಅಭಿವೃದ್ಧಿಯತ್ತ ಹೆಜ್ಜೆಯಿಡಲು ಏನೂ ಕ್ರಮ ಕೈಗೊಂಡಿಲ್ಲ ಎಂದು ಈ ವರ್ಷದ ಪರ್ಯಾಯ ಆರ್ಥಿಕ ಸರ್ವೇಕ್ಷಣೆಯನ್ನು ಬಿಡುಗಡೆ ಮಾಡುತ್ತಾ ಈ ತಜ್ಞರು ಖೇದ ವ್ಯಕ್ತಪಡಿಸಿದರು. ಈ ಸಮಾನ ಕನಿಷ್ಠ ಕಾರ್ಯಕ್ರಮ ಸುಮಾರಾಗಿ ಕಾಗದದಲ್ಲಿಯೇ ಉಳಿದಿದೆ. ಅದರ ಜಪ ಮಾಡಲಾಗುತ್ತಿದೆ.



ಕೋಟ್ಯಾಂತರ ಜನರಿಗೆ ಕುಡಿಯುವ ನೀರಿಲ್ಲ, ಪೆಪ್ಸಿಯ ದೈತ್ಯಗಾತ್ರದ ಜಾಹೀರಾತು 'ಉದಾರೀಕರಣ' ಎಂದರೆ ಇದೆ!

ಆದರೆ ಅನುಷ್ಠಾನಕ್ಕೆ ತರಲಾಗುತ್ತಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ದೇಶದ ಆರ್ಥಿಕದ ವಿವಿಧ ಆಯಾಮಗಳ ಬಗ್ಗೆ ವಿವಿಧ ತಜ್ಞರ ವಿವರವಾದ ಪ್ರಯತ್ನಗಳು ಈ ಪರ್ಯಾಯ ಆರ್ಥಿಕ ಸರ್ವೇಕ್ಷಣೆಯಲ್ಲಿ ಇವೆ. ಕೆಲವು ಮುಖ್ಯ ಅಂಶಗಳು ಹೀಗಿವೆ-

ಕೃಷಿ

ಎರಡನೇ ಯೋಜನೆಯ ಅವಧಿಯಲ್ಲಿ ಆಹಾರಧಾನ್ಯ ಉತ್ಪಾದನೆ ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿರಲಿಲ್ಲ. ಸಂಯುಕ್ತ ರಂಗ ಸರಕಾರ ರಾಜ್ಯ ಸರಕಾರಗಳಿಗೆ ಹಣದ ವಿಕೇಂದ್ರೀಕರಣ ಮಾಡುವಲ್ಲಾಗಲೀ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹಣವನ್ನ ಹೆಚ್ಚಿಸುವುದರಲ್ಲಾಗಲೀ ವಿಫಲವಾಯಿತು. ಅದರ ಬದಲಿಗೆ ಈ ಹಣವನ್ನು ಕಮ್ಮಿ ಮಾಡಿ ಶ್ರೀಮಂತರಿಗೆ ವಿಪರೀತ ತೆರಿಗೆ ರಿಯಾಯಿತಿಗಳನ್ನು ನೀಡಿದೆ. ಕೃಷಿ ಉತ್ಪನ್ನಗಳ ರಫ್ತಿಗೆ ಹೆಚ್ಚಿನ ಒತ್ತು ನೀಡುವ ಹೊಸ ಕೃಷಿ ನೀತಿಗಳು ಬಡವರಿಗೆ ಆಹಾರ ಧಾನ್ಯಗಳ ಪೂರೈಕೆಯನ್ನು ಕಮ್ಮಿ ಮಾಡಿ ಕೊನೆಗೆ ಮುಂದುವರಿದ ಬಂಡವಾಳಶಾಹಿ ದೇಶಗಳಿಗೆ ನೆರವಾಗುತ್ತದೆ. ಏಕೆಂದರೆ ಅವು ತಮ್ಮ ಕೃಷಿ ಆಮದುಗಳಿಗೆ ಕಮ್ಮಿ ಡಾಲರು ಬೆಲೆಗಳನ್ನೇ ಕೊಡುತ್ತವೆ ಎಂದು ಈ ಸರ್ವೆ ಎಚ್ಚರಿಸಿದೆ.

ಕೈಗಾರಿಕೆ

ಕೈಗಾರಿಕಾ ಉತ್ಕರ್ಷವೇ ಕಂಡುಬಂದಿದೆ ಎಂಬ ಸರಕಾರೀ ದಾವೆಗಳು ನಂಬಲರ್ಹವಲ್ಲ. ಕೈಗಾರಿಕಾ ವಲಯ 24 ಪ್ರಧಾನ ಉದ್ದಿಮೆಗಳಿರುವ ಪ್ರಬಲ ಭಾಗವನ್ನು ಪರಿಶೀಲಿಸಿದರೆ ಏಪ್ರಿಲ್ 1996-ಜನವರಿ 1997 ರವರೆಗಿನ ಬೆಳವಣಿಗೆ ದರ 4.9% ಅದರ ಹಿಂದಿನ ವರ್ಷ ಆ ಅವಧಿಯ ಬೆಳವಣಿಗೆ 9.9%. ಈ ಸರ್ವೆಯಲ್ಲಿನ ಕೈಗಾರಿಕೆ ಕುರಿತಾದ ಲೇಖನ ತೀವ್ರ ಇಳಿಕೆಗೆ ಕಾರಣಗಳನ್ನು ಕೊಡುತ್ತದೆ. ಇವುಗಳಲ್ಲೊಂದು ಕಾರಣವೆಂದರೆ ಬೇಡಿಕೆ ತಣಿದಿರುವುದು. ಅಂದರೆ ಹೆಚ್ಚು ಆದಾಯದ ಗುಂಪಿನ ಬಳಕೆ ವಸ್ತುಗಳ, ಐಷಾರಾಮದ ವಸ್ತುಗಳ ಬೇಡಿಕೆಗಳು ತಣಿದಿವೆ, ಇನ್ನು ಮುಂದೆ ಅವರಿಗೆ ಇಂತಹ ಸರಕುಗಳು ಅಗತ್ಯವೆನಿಸುವುದಿಲ್ಲ ಎಂದು.

ಹಣಕಾಸು ಬೆಳವಣಿಗೆಗಳು

ಅಭಿವೃದ್ಧಿಯ ಜವಾಬ್ದಾರಿಯಿಂದ ಸರಕಾರ ಹಿಂದೆ ಸರಿಯುವ ಪ್ರವೃತ್ತಿ ಇತ್ತೀಚಿನ ಬಜೆಟ್‌ನಲ್ಲಿ ಮತ್ತೆ ದೃಢಪಟ್ಟಿದೆ. 1985-86 ರಲ್ಲಿ ಅಭಿವೃದ್ಧಿ ಖರ್ಚಿಗೆ ಕೊಟ್ಟಿದ್ದು ಒಟ್ಟು ರಾಷ್ಟ್ರೀಯ ಉತ್ಪನ್ನದ 12.5% ಮಾತ್ರ. ಆದರೆ ಇದೂ ಕೂಡಾ ಇಳಿಮುಖವಾಗಿದೆ. 1996-97 ರಲ್ಲಿ 7.7% ಕ್ಕಿಳಿದಿದೆ. ಸರಕಾರ ಸಾಮಾಜಿಕ ಮೂಲ ಸೌಕರ್ಯಗಳಲ್ಲಿ ಹೆಚ್ಚು ಖರ್ಚು ಮಾಡಬೇಕಾಗಿದೆಯೆಂದು ಹೇಳುತ್ತಿರುವಾಗಲೂ ಈ ರೀತಿ ಕಡಿತ ಇವೆಲ್ಲದರಲ್ಲಿ ಸರಕಾರದ ಪಾತ್ರ ಕ್ಷೀಣಿಸುತ್ತಾ ಬರಬೇಕು ಎಂಬ ನಿಲುವನ್ನಷ್ಟೇ ಸೂಚಿಸುತ್ತದೆ. ಕೇಂದ್ರ ಸರಕಾರದ ಅಭಿವೃದ್ಧಿ ಬಂಡವಾಳ ಖರ್ಚಿನ ಪ್ರಮಾಣ ಈಗ ಒಟ್ಟು ರಾಷ್ಟ್ರೀಯ ಉತ್ಪನ್ನದ 1/2% ಕ್ಕಿಳಿದಿದೆ. 1985-86 ರಲ್ಲಿ ಇದು 2.5% ಕ್ಕಿಂತಲೂ ಹೆಚ್ಚಿತ್ತು ಎಂಬ ಸಂಗತಿಯತ್ತ ಈ ಸರ್ವೆ ಗಮನ ಸೆಳೆದಿದೆ.

ರಾಜ್ಯಗಳಿಗೆ ಕೇಂದ್ರದಿಂದ ನಿವ್ವಳ ವರ್ಗಾವಣೆ ಒಟ್ಟಾರೆಯಾಗಿ 3.6% ರಷ್ಟು ಮಾತ್ರ ಹೆಚ್ಚಿದೆ ಎಂದು 1996-97 ರ ಪರಿಷ್ಕೃತ ಅಂದಾಜು ತೋರಿಸುತ್ತವೆ. ಆದರೆ 1997-98 ರ ಬಜೆಟ್ ಇದಕ್ಕಾಗಿ ಕೊಟ್ಟಿರುವ ಹಣದಲ್ಲಿ 1566 ಕೋಟಿ ರೂ. ಅಂದರೆ 5.3% ಕಡಿತವಾಗಿದೆ. ಹಣದುಬ್ಬರವನ್ನು ಗಮನಕ್ಕೆ ತೆಗೊಂಡರೆ ಈ ಕಡಿತ 13% ಕ್ಕೆ ಹೆಚ್ಚಾಗುತ್ತದೆ.

ಹೀಗೆ ಸರಕಾರ ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯುವ ಹಣಕಾಸು ನೀತಿಯ ವಿವರಗಳನ್ನು ಶಿಕ್ಷಣ, ಆರೋಗ್ಯ, ಉದ್ಯೋಗ, ಮಹಿಳೆ ಮತ್ತು ಪರಿಸರ ಕುರಿತ ಪ್ರತ್ಯೇಕ ವಿಭಾಗಗಳಲ್ಲಿ ಚರ್ಚಿಸಲಾಗಿದೆ. ಸಾರ್ವಜನಿಕ ಸೇವೆಗಳನ್ನು ಕಳಚಿ ಹಾಕಿದಾಗ ಬಹುಪಾಲು ಮಂದಿಗೆ ಸೇವೆಗಳನ್ನು ಪಡೆಯಲು ಬೇರೆ ದಾರಿಯೇ ಇಲ್ಲ. ಈಗಿರುವ ಸಾರ್ವಜನಿಕ ಆಸ್ಪತ್ರೆಗಳು ಹಾಗೂ ಸಂಸ್ಥೆಗಳಲ್ಲಿ ಹಾಕುವ ಬಳಕೆ ದಾರರ ದರಗಳನ್ನು ಕೊಡಲೂ ಅವರಿಗೆ ಸಾಧ್ಯವಿಲ್ಲ. ದುಬಾರಿ ಖಾಸಗಿ ಸೇವೆ ಗಳಂತೂ ಅವರ ಎಟುಕಿಗೇ ಮೀರಿದ್ದು. ಉದಾರೀಕರಣ ನೀತಿಗಳು ಹೇಗೆ ಬಹುಪಾಲು ಜನಗಳನ್ನು ತಟ್ಟುತ್ತದೆ ಎಂಬುದನ್ನು ಈ ವಿಭಾಗಗಳಲ್ಲಿ ವಿವರಿಸಲಾಗಿದೆ.

ಈ ಪರ್ಯಾಯ ಸರ್ವೆಯಲ್ಲಿರುವ ಇತರ ಅಂಶಗಳೆಂದರೆ ಮೂಲ ಸೌಕರ್ಯ ವಲಯದ ಪುನರ್ರಚನೆ, ವಿದೇಶೀ ವ್ಯಾಪಾರ ಸಾಲ ಮತ್ತು ವ್ಯಾಪಾರ ಸಾಲ ಬಿಕ್ಕಟ್ಟು, ಭಾರತ ಮತ್ತು ವಿಶ್ವ ವ್ಯಾಪಾರ ಸಂಘಟನೆ, ಸಾರ್ವಜನಿಕ ವಲಯ, ಕಂಪೆನಿ ಕಾನೂನು, ಕಂಪನಿ ವಲಯ, ಉದ್ಯೋಗ ಮತ್ತು ಕಾರ್ಮಿಕರು. ಸಾಮಾಜಿಕ ವಲಯಗಳಲ್ಲಿ 'ಆರ್ಥಿಕ ಸುಧಾರಣೆ'ಗಳ ನಿಜವಾದ ಸ್ವರೂಪ ಏನು, ಪರಿಣಾಮ ಏನು ಎಂಬುದನ್ನು ಪರಿಶೀಲಿಸಲಾಗಿದೆ.

ಈ ಪರ್ಯಾಯ ಆರ್ಥಿಕ ಸರ್ವೇಕ್ಷಣೆಗಳಲ್ಲಿ ಅಭಿಜಿತ್ ಸೆನ್, ಸಿ.ಪಿ.ಚಂದ್ರಶೇಖರ್, ಉತ್ಸಾ ಪಟ್ನಾಯಕ್, ಅರುಣ್ ಘೋಷ್, ಪ್ರಬೀರ್ ಪುರಕಾಯಸ್ತ, ಡಿ.ಕೆ.ಸಾಗರ್, ಇಮ್ರಾನ್ ಖಾದಿರ್, ಸುರೇಶ್ ಶುಕ್ಲಾ, ಎಂ.ಒಪೀನ್, ಅಶೋಕ್ ರಾವ್, ಅನುರಾಧ ಚೆನೋಯ್, ಎಂ.ಕೆ.ಸಾಂಬಮೂರ್ತಿ, ಪಿ.ಎಂ.ಮಾಥ್ಯೂ, ಡಿ.ಎನ್.ರೆಡ್ಡಿ, ಜಯಾ ಮೆಹ್ತಾ ಮತ್ತಿತರರು ಕಾಣಿಕೆ ನೀಡಿದ್ದಾರೆ.

ಸರಕಾರದ ನೀತಿಗಳಿಂದಾಗಿ, ರಿಸರ್ವ್ ಬ್ಯಾಂಕ್ ನಿರಾಸಕ್ತಿಯಿಂದಾಗಿ ಭ್ರಷ್ಟ ಉನ್ನತಾಧಿಕಾರಿಗಳಿಗೆ ಅವಕಾಶ

ಜೂನ್ 11 ರಂದು ದೇಶಾದ್ಯಂತ ಬ್ಯಾಂಕ್‌ನೌಕರರು ರಿಝರ್ವ್ ಬ್ಯಾಂಕ್ ಕಚೇರಿಗಳ ಎದುರು ಬೃಹತ್ ಮತಪ್ರದರ್ಶನಗಳನ್ನು ನಡೆಸಿದರು. ರಿಝರ್ವ್ ಬ್ಯಾಂಕ್‌ನಿಂದ ಬ್ಯಾಂಕುಗಳ, ಎಲ್ಲಾ ಹಣಕಾಸು ಸಂಸ್ಥೆಗಳ(ಬ್ಯಾಂಕೇತರ ಹಣಕಾಸು ಕಂಪೆನಿಗಳೂ ಸೇರಿದಂತೆ) ಸೂಕ್ತ ಪರಿಣಾಮಕಾರಿ ಉಸ್ತುವಾರಿ, ಬ್ಯಾಂಕು ಸಾಲಗಳನ್ನು ಮರುಪಾವತಿ ಮಾಡುವಲ್ಲಿ ತಪ್ಪಿದ ಕಂಪನಿಗಳ ಹೆಸರುಗಳ ಪ್ರಕಟಣೆ ಹಾಗೂ ನೀತಿ ಬಾಹಿರ ಸಾಲಗಾರರು ಮತ್ತು ಬ್ಯಾಂಕಿನ ಭ್ರಷ್ಟ ಉಚ್ಚಾಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ಬಿಇಎಫ್‌ಐ (ಭಾರತ ಬ್ಯಾಂಕ್ ನೌಕರರ ಒಕ್ಕೂಟ) ಕರೆಯ ಮೇರೆಗೆ ಈ ಮತಪ್ರದರ್ಶನ ನಡೆಯಿತು. ಅಖಿಲ ಭಾರತ ರಿಝರ್ವ್ ಬ್ಯಾಂಕ್ ನೌಕರರ ಸಂಘವೂ ಇದನ್ನು ಬೆಂಬಲಿಸಿತ್ತು. ಈ ವಿಷಯಗಳಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳುವಲ್ಲಿ ರಿಝರ್ವ್ ಬ್ಯಾಂಕ್ ಮತ್ತು ಭಾರತ ಸರಕಾರದ ನಿರ್ಲಕ್ಷ್ಯದಿಂದಾಗಿ ದೇಶದ ಹಣಕಾಸು ವಲಯ ವಿನಾಶಕಾರಿ ಪರಿಣಾಮಗಳನ್ನುದುರಿಸುತ್ತಿದೆ. ಶೇರು ಹಗರಣ, ಎಂ.ಎಸ್.ಶೂಸ್ ಕೇಸು, ಯೂರಿಯಾ ಹಗರಣ, ಇಂಡಿಯನ್ ಬ್ಯಾಂಕ್ ಪ್ರಕರಣ ಮತ್ತು ಇತ್ತೀಚಿನ ಸಿ.ಆರ್.ಬಿ. ಕ್ಯಾಪಿಟಲ್ ಘಟನೆ ಇವೆಲ್ಲಾ ಹೇಗೆ ಸರಕಾರದ ಹಾಗೂ ಹಣಕಾಸು ವಲಯದ ಕಾವಲಿಗೆಂದೇ ಇರುವ ರಿಝರ್ವ್ ಬ್ಯಾಂಕಿನ ಕಣ್ಣೆದುರೇ ಹೇಗೆ ಎಲ್ಲಾ ನೀತಿ-ನಿಯಮ, ವಿಧಿ-ವಿಧಾನಗಳನ್ನು ಉಲ್ಲಂಘಿಸಲಾಗುತ್ತಿದೆ ಎಂಬುದಕ್ಕೆ ಕೆಲವು ಜ್ವಲಂತ ಉದಾಹರಣೆಗಳು. ಆದರೆ ಇವು ಕೇವಲ ಕಣ್ಣಿಗೆ ಬಿದ್ದಿರುವ ಕೆಲವು ಉದಾಹರಣೆಗಳಷ್ಟೆ. ಬಯಲಿಗೆ ಬಾರದ ಇತರ ಪ್ರಕರಣಗಳೆಷ್ಟೋ?. ತನ್ನನ್ನು ಸಮರ್ಥಿಸಿಕೊಳ್ಳಲು ರಿಝರ್ವ್ ಬ್ಯಾಂಕ್ ಮುಂದಿಟ್ಟಿರುವ ವಿವರಣೆ ನೋಡಿದರೆ ಸರಕಾರದ ಹೊಸ ಆರ್ಥಿಕ ಧೋರಣೆಗಳಿಗೆ ಅನುಗುಣವಾಗಿ ರಿಝರ್ವ್ ಬ್ಯಾಂಕ್ ಇತರಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಮೇಲೆ ಅರ್ಥಪೂರ್ಣ ಉಸ್ತುವಾರಿ ನಡೆಸುವ ಆಸಕ್ತಿ ಹೊಂದಿಲ್ಲ ಎಂಬುದನ್ನು ಯಾರಾದರೂ ಗ್ರಹಿಸಿಕೊಳ್ಳಬಹುದು. ಎಲ್ಲಾ ಹತೋಟಿ ಕ್ರಮಗಳನ್ನು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಉಚ್ಚ ಆಡಳಿತಾಧಿಕಾರಿಗಳ ಮರ್ಜಿಗೇ ಬಿಡಲು ಅದು ಕಾತುರವಾಗಿದೆ. ಆದರೆ ಈ ಮಂದಿಗಳ ಭ್ರಷ್ಟಾಚಾರ ಮತ್ತು ಕರ್ತವ್ಯ ಭ್ರಷ್ಟತೆಯಿಂದಲೇ ಇಂದಿನ ಶೋಚನೀಯ ಸ್ಥಿತಿ ಉಂಟಾಗಿದೆ. ರಾಷ್ಟ್ರೀಯ ಆರ್ಥಿಕದ ಹಿತಾಸಕ್ತಿಗಳನ್ನು ಉಳಿಸಲು ರಿಝರ್ವ್ ಬ್ಯಾಂಕ್ ಮತ್ತು ಸರಕಾರದ ಈ ನೀತಿಯನ್ನು ಕಟುವಾಗಿ ವಿರೋಧಿಸಬೇಕು, ಅದರ ವಿರುದ್ಧ ತೀವ್ರ ಹೋರಾಟ ನಡೆಸಬೇಕು. ಬಿ.ಇ.ಎಫ್.ಐ. ಹಾಗೂ ರಿಝರ್ವ್ ಬ್ಯಾಂಕ್ ನೌಕರರ ಸಂಘ ಈ ಹೋರಾಟವನ್ನು ಮುಂದುವರೆಸಲು ದೃಢ ನಿರ್ಧಾರ ಮಾಡಿವೆ ಎಂದು ಪ್ರಧಾನ ಕಾರ್ಯದರ್ಶಿ ಅಶಿಸ್‌ಸೆನ್ ಮತ್ತಿತರ ಮುಖಂಡರು ಸಾರಿದ್ದಾರೆ. ಜೂನ್ 11 ರ ಪ್ರತಿಭಟನೆಯೊಂದಿಗೆ ಇದು ಆರಂಭವಾಗಿದೆ. ಸರಕಾರ ಈ ಅನಿಷ್ಟಕಾರಿ ನೀತಿಗಳನ್ನು ಹೀಗೇ ಮುಂದುವರಿಸಿದರೆ ಈ ಆಂದೋಲನ ಇನ್ನಷ್ಟು ತೀವ್ರಗೊಳ್ಳುತ್ತದೆ, ವ್ಯಾಪಕಗೊಳ್ಳುತ್ತದೆ ಎಂದೂ ಎಚ್ಚರಿಸಲಾಯಿತು. ರಿಝರ್ವ್ ಬ್ಯಾಂಕಿನ ಉಸ್ತುವಾರಿ ವ್ಯವಸ್ಥೆಯನ್ನು ಬಲಪಡಿಸಲು ತುರ್ತು ಕ್ರಮಗಳನ್ನು ಕೈಗೊಂಡು ಅದು ಬ್ಯಾಂಕಿಂಗ್ ವಲಯ ಮತ್ತು ಇತರ ಹಣಕಾಸು ವಲಯದಲ್ಲಿ ವಂಚನೆಗಳಿಗೆ ಕಾರಣವಾದ ಅಪರಾಧಿಗಳನ್ನು ಹಿಡಿಯುವಲ್ಲಿ ಪರಿಣಾಮಕಾರಿಯಾಗುವಂತೆ ಮಾಡಬೇಕೆಂದು ಬ್ಯಾಂಕ್ ನೌಕರರ ಆಂದೋಲನ ಒತ್ತಾಯಿಸಿದೆ.

(ಐಎನ್ಎನ್)



ಎಕಾನಾಮಿಕ್ಸ್ ಟೈಮ್ಸ್ ನಲ್ಲಿ ಪೊನ್ನಪ್ಪನವರ ವ್ಯಂಗ್ಯ

ಒಕ್ಕೂಟ ಸ್ವರೂಪವನ್ನು ಬಲಪಡಿಸುವ ಕಣ್ಣೋಟವಿರಬೇಕು

- ರಾಜ್ಯಪಾಲರ ಸಮಾವೇಶದಲ್ಲಿ ಸಿಪಿಐ(ಎಂ) ಅಭಿಪ್ರಾಯ

ಜೂನ್ 2-3 ರಂದು ರಾಷ್ಟ್ರಪತಿಗಳು ನವದೆಹಲಿಯಲ್ಲಿ ರಾಜ್ಯಪಾಲರ ಒಂದು ಸಮಾವೇಶವನ್ನು ಕರೆದಿದ್ದರು. ಒಂದು ಪಕ್ಷ ಅಥವಾ ಕೂಟ ಬಹುಮತ ಪಡೆದಿಲ್ಲ ಎಂದು ಕಂಡು ಬಂದಾಗ ಸಾಂವಿಧಾನಿಕ ಮುಖ್ಯಸ್ಥ ಏನು ಪಾತ್ರ ವಹಿಸಬೇಕು ಎಂಬುದು ಈ ಸಮಾವೇಶದ ಚರ್ಚಾ ವಿಷಯವಾಗಿತ್ತು. ಈ ಸಮಾವೇಶದ ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಲು ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರಿಗೂ ಆಹ್ವಾನ ನೀಡಿದ್ದು ಈ ಸಮಾವೇಶದ ಒಂದು ವಿಶಿಷ್ಟತೆಯಾಗಿತ್ತು. ಈ ಮಹತ್ವದ ಪ್ರಶ್ನೆಗೆ ಸರಿಯಾದ ಉತ್ತರ ಕಂಡುಹಿಡಿಯಲು ಇದು ಅಗತ್ಯವೂ ಆಗಿತ್ತು. ರಾಷ್ಟ್ರಪತಿಗಳು ಈ ದಿಕ್ಕಿನಲ್ಲಿ ಸರಿಯಾಗಿಯೇ ಯೋಚಿಸಿದ್ದಾರೆನ್ನಬಹುದು.

ಸಿಪಿಐ(ಎಂ) ಪರವಾಗಿ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಈ ಪ್ರಶ್ನೆಯ ಪ್ರಮುಖ ಆಯಾಮಗಳ ಬಗ್ಗೆ ಪಕ್ಷದ ನಿಲುವನ್ನು ವಿವರಿಸುವ ಒಂದು ಟಿಪ್ಪಣಿಯನ್ನು ಸಲ್ಲಿಸಿದರು. ಸಿಪಿಐ(ಎಂ) ಪರವಾಗಿ ಈ ಸಭೆಯಲ್ಲಿ ಭಾಗವಹಿಸಿದ ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್‌ರವರು ಈ ಟಿಪ್ಪಣಿಯಲ್ಲಿನ ನಿಲುವುಗಳನ್ನು ಇನ್ನಷ್ಟು ವಿಶದ ಪಡಿಸಿದರು.

ಈ ಸಭೆಯಲ್ಲಿ ಭಾಗವಹಿಸಿದ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿಯವರಾಗಲೀ, ಬಿಜೆಪಿ ಪ್ರತಿನಿಧಿಗಳಾಗಲೀ ಕೇಂದ್ರದಲ್ಲಿ 1989, 1991 ಮತ್ತು 1996 ರಲ್ಲಿ ಯಾವುದೇ ಒಂದು ಪಕ್ಷ ಬಹುಮತಗಳಿಸಲಾಗದುದು ಒಂದು ಅಪವಾದವಲ್ಲ, ಭ್ರಮಣೆಯಲ್ಲ ಎಂಬುದನ್ನು ಒಪ್ಪಲು ಹಿಂದೇಟು ಹಾಕುವಂತೆ ಕಾಣುತ್ತಿತ್ತು. ಕಾಂಗ್ರೆಸ್‌ಗೆ ತನ್ನ ಏಕಪಕ್ಷ ಪ್ರಾಬಲ್ಯದ ಅವಧಿ ಮುಗಿದುಹೋಗಿದೆ ಎಂದು ಒಪ್ಪಲು ಸಾಧ್ಯವಾಗುತ್ತಿಲ್ಲವಾದರೆ, ಬಿಜೆಪಿ ತಾನು ಕಾಂಗ್ರೆಸ್‌ಗೆ ಏಕಪಕ್ಷ ಪರ್ಯಾಯವಾಗಲು ವ್ಯರ್ಥ ಪ್ರಯತ್ನ ನಡೆಸುತ್ತಿದೆ. ಆದ್ದರಿಂದಲೇ ವಾಸ್ತವತೆಯನ್ನು ಗುರುತಿಸಲು ಅವಕ್ಕೆ ಆಗುತ್ತಿಲ್ಲ. ಆದ್ದರಿಂದ ಈ ಪ್ರಶ್ನೆಗೆ ಅವರ ಉತ್ತರ ಅಷ್ಟೇ ಅಸಮಂಜಸವಾಗುಳಿದಿದೆ.

ಆದರೆ ಸಿಪಿಐ(ಎಂ) ಪ್ರಕಾರ ಇದು ಒಂದು ಭ್ರಮಣೆಯಲ್ಲ, ಅಪವಾದವಲ್ಲ, ಕೇಂದ್ರದಲ್ಲೂ ಸಮ್ಮಿಶ್ರ ರಾಜಕೀಯ ಅವಧಿ ಮೂಡಿಬಂದಿದೆ. ಇದು ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಮುಂದಿನ ಘಟ್ಟ ಎಂದು ಅದು ಬಗೆಯುತ್ತದೆ. ಏಕಪಕ್ಷ ಆಡಳಿತ ಮಾತ್ರವೇ ಸ್ಥಿರತೆ ಹಾಗೂ ಉತ್ತಮ ಆಡಳಿತ ನೀಡಬಲ್ಲದು ಎಂಬ ಮೂಢ ನಂಬಿಕೆಯಿಂದ ಹೊರಬರದೆ ಈ ಪ್ರಶ್ನೆಗೆ ಅರ್ಥಪೂರ್ಣ ಉತ್ತರ ಸಾಧ್ಯವಿಲ್ಲ.

ಕಳೆದ ಲೋಕಸಭಾ ಚುನಾವಣೆಗಳ ನಂತರ ಮಾಜಿ ರಾಷ್ಟ್ರಪತಿ ವೆಂಕಟರಾಮನ್ ಅವರು ವಿವಿಧ ರಾಜಕೀಯ ಪಕ್ಷಗಳು ಪಡೆದ ಸ್ಥಾನಗಳಿಗನುಸಾರವಾಗಿ ಆಯಾಯ ಪಕ್ಷಗಳ ಮುಖಂಡರನ್ನು ಕರೆದು ಸರಕಾರ ರಚಿಸಲು ಪ್ರಯತ್ನಿಸಿ ಎಂದು ಹೇಳಬೇಕು ಎಂದು ಸೂಚಿಸಿದರು. ಕೆಲವು ಕಾನೂನು ಪಂಡಿತರೂ ಇದನ್ನು ಬೆಂಬಲಿಸಿದರು. ಆದರೆ ಇದು ಸರಿಯಲ್ಲ ಎಂದು ಸಿಪಿಐ(ಎಂ)ನ ಅಭಿಪ್ರಾಯ. ಏಕೆಂದರೆ ಚುನಾವಣೆಯ ಮೊದಲು ಬಹುಮತದ ಆಳುವ ಪಕ್ಷವಾಗಿದ್ದು ಚುನಾವಣೆಯಲ್ಲಿ ಬಹುಮತ ಕಳಕೊಂಡರೂ ಅತ್ಯಧಿಕ ಸ್ಥಾನ ಪಡೆದರೆ ಅದನ್ನು ಸರಕಾರ ರಚಿಸಲು ಕರೆಯುವುದು ಅಸಂಬದ್ಧ, ಅದು ಜನಗಳ ತೀರ್ಪಿಗೆ, ಪ್ರಜಾಪ್ರಭುತ್ವ ವಿಧಿ-ವಿಧಾನಗಳಿಗೆ ವಿರುದ್ಧವಾದ ಕ್ರಮವಾಗುತ್ತದೆ. 1989 ರಲ್ಲಿ ವೆಂಕಟರಾಮನ್ ಅದನ್ನೇ ಮಾಡಿದರು. ರಾಜೀವ್ ಗಾಂಧಿ ಚುನಾವಣೆಗಳಲ್ಲಿ ಸೋತಿದ್ದರೂ ಸರಕಾರ ರಚಿಸಲು ಅವರನ್ನು ಆಹ್ವಾನಿಸಿದರು. ಆದ್ದರಿಂದ ಕೇವಲ ಸಂಖ್ಯೆಯನ್ನು ಏಕಮಾತ್ರ ಅಳತೆಗೋಲಾಗಿ ಮಾಡುವುದು ಸರಿಯಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಯಾವುದು ಮೊದಲು?

ರಾಷ್ಟ್ರಪತಿಗಳು ಈ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರಿಯಾ ಆಯೋಗದ ಕೆಲವು ಶಿಫಾರಸ್ಸುಗಳನ್ನು ಉದ್ಧರಿಸಿದರು. ಯಾವುದೇ ಒಂದು ಪಕ್ಷ ಅಥವಾ ಕೂಟಕೆ ಬಹುಮತವಿಲ್ಲವಾದಾಗ ಈ ಕೆಳಗಿನ ಕ್ರಮಾನುಸಾರ ಕರೆಯಬಹುದು ಎಂದು ಆ ಶಿಫಾರಸ್ಸುಗಳಲ್ಲಿ ಹೇಳಲಾಗಿತ್ತು.

i ಚುನಾವಣೆಯ ಮೊದಲು ರಚನೆಗೊಂಡ ಕೂಟದ ಮುಖಂಡರನ್ನು.

ii ಪಕ್ಷೇತರರೂ ಸೇರಿದಂತೆ ಇತರರ ಬೆಂಬಲದಿಂದ ಸರಕಾರ ರಚಿಸುವ ದಾವೆ ಹೂಡುವ ಅತಿ ದೊಡ್ಡ ಪಕ್ಷವನ್ನು.

iii. ಚುನಾವಣೆಯ ನಂತರ ಏರ್ಪಟ್ಟ ಎಲ್ಲಾ ಭಾಗೀದಾರರು ಭಾಗವಹಿಸುವಂತಹ ಒಂದು ಕೂಟವನ್ನು

iv ಚುನಾವಣೆಯ ನಂತರ ಏರ್ಪಟ್ಟ ಕೆಲವು ಭಾಗೀದಾರರು ಹೊರಗಿಂದ ಬೆಂಬಲಿಸುವಂತಹ ಕೂಟವನ್ನು.

ಇಲ್ಲಿ ಆದ್ಯತೆಯ ಅನುಕ್ರಮತೆಯನ್ನು ಬದಲಿಸುವ ಅಗತ್ಯವಿದೆ ಎಂದು ಸಿಪಿಐ (ಎಂ) ಅಭಿಪ್ರಾಯಪಟ್ಟಿತು. ಮೊದಲೆರಡು ಸಾಧ್ಯತೆಗಳಲ್ಲಿ ಸರಕಾರ ರಚಿಸುವ ದಾವೇದಾರರಿಗೆ ಸದನದಲ್ಲಿ ಬಹುಮತ ವಿರುವುದಿಲ್ಲ. ಆದ್ದರಿಂದ ಅವನ್ನು ಮೊದಲು ಪರಿಶೀಲಿಸುವುದು ಸರಿಯಾಗುವುದಿಲ್ಲ. ಚುನಾವಣೆಯ ನಂತರ ಕೆಲವು ಪಕ್ಷಗಳ ಕೂಟ ಏರ್ಪಟ್ಟು ಅದಕ್ಕೆ ಸದನದಲ್ಲಿ ಬಹುಮತವಿದ್ದರೆ ಆ ಕೂಟದ ಮುಖಂಡರನ್ನೇ ಸರಕಾರ ರಚಿಸಲು ಕರೆಯುವುದೇ ಸರಿಯಾದ ಕ್ರಮ ಎಂದು ಸಿಪಿಐ(ಎಂ) ಪ್ರತಿನಿಧಿ ಹೇಳಿದರು.

ಕಳೆದ ವರ್ಷ ಈ ನೀತಿಯನ್ನು ಅನುಸರಿಸದ್ದರಿಂದಲೇ ಕಾಂಗ್ರೆಸ್ ಬೆಂಬಲ ಪಡೆದ ಸಂಯುಕ್ತರಂಗಕ್ಕೆ ಸದನದಲ್ಲಿ ಬಹುಮತವಿದ್ದರೂ ಬಿಜೆಪಿ ಮತ್ತಿತರ ಮಿತ್ರ ಪಕ್ಷಗಳ ಮುಖಂಡರನ್ನು ಆಹ್ವಾನಿಸಲಾಯಿತು. ಈ ಮಂದದೃಷ್ಟಿಯ ಕ್ರಮದ ಫಲಿತಾಂಶ ಈಗಾಗಲೇ ಎಲ್ಲರಿಗೆ ಗೊತ್ತಿದೆ. - ಕೇವಲ 13 ದಿನಗಳ ಅಲ್ಪಮತದ ವಾಜಪೇಯಿ ಸರಕಾರ.

ಸದನದಲ್ಲಿ ಬಹುಮತ ಬೆಂಬಲವಿರುವ ಪಕ್ಷಗಳ ಯಾವುದೇ ಗುಂಪು ಸರಕಾರ ರಚಿಸುವ ದಾವೆ ಹೂಡದಿದ್ದಾಗ ಮಾತ್ರವೇ ಅತಿ ದೊಡ್ಡ ಪಕ್ಷ ಅಥವಾ ಕೂಟವನ್ನು ಸದನದಲ್ಲಿ ತನ್ನ ಬಹುಮತ ಸಿದ್ಧಪಡಿಸಬೇಕು ಎಂದು ಹೇಳುವುದಕೆ ಅರ್ಥ ಬರುತ್ತದೆ.

ರಾಜ್ಯಗಳಲ್ಲಿ

ಕೇಂದ್ರದಲ್ಲಿ ಸರಕಾರವಿರದಿರುವುದು ಸಾಧ್ಯವಿಲ್ಲ, ಆದರೆ ರಾಜ್ಯಗಳಲ್ಲಿ ಹಾಗಲ್ಲ, ರಾಷ್ಟ್ರಪತಿ ಆಳ್ವಿಕೆ ಸಾಧ್ಯವಿದೆ. ಆದರೆ ಇಲ್ಲಿ ಕೂಡಾ ಮೇಲೆ ಹೇಳಿದ ನಿಲುವೇ ಸೂಕ್ತ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿತು. ಅತಿ ದೊಡ್ಡ ಪಕ್ಷಕ್ಕೆ ಬಹುಮತವಿಲ್ಲದೆ, ಇತರ ಎಲ್ಲಾ ಪಕ್ಷಗಳು ಆ ಪಕ್ಷ ಸರಕಾರ ರಚಿಸುವುದನ್ನು ವಿರೋಧಿಸುವುದಾಗಿ ಬರವಣಿಗೆಯಲ್ಲಿ ಕೊಟ್ಟಾಗ ಮಾತ್ರವೇ ರಾಜ್ಯಪಾಲರು ಅತೀ ದೊಡ್ಡ ಪಕ್ಷವನ್ನು ಆಹ್ವಾನಿಸಬೇಕಾಗಿಲ್ಲ. ಬಹುಮತ ತೋರಬಲ್ಲ ಒಂದು ಸಂಬಲರ್ಹ ದಾವೆ ಹೂಡಲು ಪಕ್ಷಗಳಿಗೆ ಸಾಧ್ಯವೋ ಎಂದು ತಿಳಿಯಲು ರಾಜ್ಯಪಾಲರು ಸ್ವಲ್ಪ ಸಮಯ ಕೊಡುವುದೊಳ್ಳೆಯದು. ಬಹುಮತದಲ್ಲಿರುವ ಇತರ ಪಕ್ಷಗಳು ಬರವಣಿಗೆಯಲ್ಲಿ ತಮ್ಮ ನಿಲುವನ್ನು ತಿಳಿಸದಿದ್ದಾಗ ರಾಜ್ಯಪಾಲರು ಅತಿದೊಡ್ಡ ಪಕ್ಷದ ಮುಖಂಡರನ್ನು ಕರೆಯಬಹುದು.

ಕೇಂದ್ರದಲ್ಲಾಗಲೀ, ರಾಜ್ಯದಲ್ಲಾಗಲೀ, ಹೊಸ ಸರಕಾರ ಒಂದು ವಾರದೊಳಗೆ ವಿಶ್ವಾಸ ಮತ ಗಳಿಸಬೇಕೆಂದು ಸಿಪಿಐ(ಎಂ) ಸ್ಪಷ್ಟವಾಗಿ ಸಾರಿತು. ಆದರೆ ಬಿಜೆಪಿ ಪ್ರತಿನಿಧಿ ಬಹುಮತವಿಲ್ಲದ ಪಕ್ಷಕ್ಕೆ ವಿಶ್ವಾಸ ಮತ ಪಡೆಯಲು ಒಂದು ತಿಂಗಳ ಅವಧಿ ನೀಡಬೇಕು ಎಂದು ಪ್ರತಿಪಾದಿಸಿದರು. ಇದು ಹಣದ ಬಳಕೆ ಹಾಗೂ ಶಾಸಕರನ್ನು ಖರೀದಿಸುವ ಕಾನೂನು ಬಾಹಿರ ಕ್ರಮಗಳಿಗೆ ನೀಡುವ ಬಹಿರಂಗ ಆಹ್ವಾನ, ಪ್ರಜಾಪ್ರಭುತ್ವವನ್ನು ಹಾಸ್ಯಾಸ್ಪದಗೊಳಿಸುವ ಕ್ರಮ ಎಂಬುದರಲ್ಲಿ ಸಂದೇಹವೇ ಇಲ್ಲ. ಬಹಶಃ ಕೇಂದ್ರದಲ್ಲಿ ತನ್ನ ಕಹಿ ಅನುಭವದ ನಂತರ ಬಿಜೆಪಿಗೆ ಒಂದು ಬಹುಮತವನ್ನು ತಯಾರುಮಾಡುವ ಕಸರತ್ತಿಗೆ ಹೆಚ್ಚು ಸಮಯ ಬೇಕಾಗುತ್ತದೆ ಎಂದೆನಿಸಿರಬೇಕು.

ಆರಂಭದ ಅಧಿವೇಶನದಲ್ಲೇ ವಿಶ್ವಾಸ ಮತ ಪಡೆಯುವ ಮೊದಲೇ ರಾಜ್ಯಪಾಲರ ಅಥವಾ ರಾಷ್ಟ್ರಪತಿಗಳ ಭಾಷಣವಿರಬೇಕೇ ಎಂಬ ರಾಷ್ಟ್ರಪತಿಗಳ ಪ್ರಶ್ನೆಗೆ ಮಾತ್ರ ಎಲ್ಲಾ ಪಕ್ಷಗಳ ಉತ್ತರ ಒಂದೇ ಆಗಿತ್ತು. ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರ ಭಾಷಣದ ಮೂಲಕ ಹೊಸ ಸರಕಾರದ ಬಹುಮತ ಪಡೆದ ನಂತರವೇ ಮಾಡಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು.

ಸಿಪಿಐ(ಎಂ) ಮುಂದುವರಿದು ಸಿಪಿಐ(ಎಂ) ಸದನದಲ್ಲಿ ತನ್ನ ಬಹುಮತವನ್ನು ಸಿದ್ಧಪಡಿಸುವ ಮುನ್ನ ಯಾವುದೇ ಸರಕಾರ ಪ್ರಮುಖ ನೀತಿ ನಿರ್ಣಯಗಳನ್ನಾಗಲೀ, ಪ್ರಮುಖ ನೇಮಕಗಳನ್ನಾಗಲೀ ಮಾಡಬಾರದು ಎಂದೂ ಒತ್ತಿ ಹೇಳಿತು. ಅಪ್ರಾತಿನಿಧಿಕವಾಗಿದ್ದ ವಾಜಪೇಯಿ ಸರಕಾರ ವಿಶ್ವಾಸ ಮತದ ದಿನ ದಭೋಲ್‌ನಲ್ಲಿನ ಎನ್ರೋನ್ ಯೋಜನೆಗೆ ಮುಂಜೂರಾತಿ ನೀಡುವ ನಿರ್ಣಯ ಕೈಗೊಂಡ ನಗ್ನ ಕ್ರಮದ ಹಿನ್ನೆಲೆಯಲ್ಲಿ ಸಾಂವಿಧಾನಿಕ ಮುಖ್ಯಸ್ಥರು ಇಂತಹ ಮಾರ್ಗನಿರ್ದೇಶಕ ಸೂತ್ರಗಳನ್ನು ನೀಡುವುದು ಅತ್ಯಗತ್ಯ.

ವೈವಿಧ್ಯತೆಯ ಅರಿವು

ಕೊನೆಯದಾಗಿ, ಒಂದು ಚುನಾವಣೆಯಲ್ಲಿ ಯಾವುದೇ ಪಕ್ಷ ಬಹುಮತ ಪಡೆಯದಿದ್ದಾಗ ಬಹುಪಕ್ಷ ಸರಕಾರ ರಚಿಸುವುದು ಹೇಗೆ ಎಂಬ ಇಡೀ ಪ್ರಶ್ನೆಯ ಬಗ್ಗೆ ಒಂದು ಸರಿಯಾದ ನಿಲುವನ್ನು ರೂಪಿಸಬೇಕಾದರೆ ಇಂತಹ ಸರಕಾರಗಳು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಒಂದು ತಾತ್ಕಾಲಿಕ ಭ್ರಮಣೆ ಎಂಬ ಭಾವನೆಯನ್ನು ಬಿಡಬೇಕಾಗುತ್ತದೆ. ಭಾರತದಂತಹ ಬಹಳಷ್ಟು ವೈವಿಧ್ಯತೆಗಳಿರುವ, ಜನಗಳ ಆಕಾಂಕ್ಷೆಗಳು ಬಹುಮುಖಿವಾಗಿರುವ ದೇಶದಲ್ಲಿ ವಿಭಿನ್ನ ರಾಜಕೀಯ ಬಣ್ಣಗಳ ಸರಕಾರಗಳು ಏರ್ಪಡುವುದು ಸ್ವಾಭಾವಿಕ. ಮೂರು ದಶಕಗಳ ಹಿಂದೆ ರಾಜ್ಯಗಳಲ್ಲಿ 1967 ರಲ್ಲಿ ಆರಂಭವಾದ ಈ ಪ್ರಕ್ರಿಯೆ ಈಗ ಕೇಂದ್ರವನ್ನೂ ತಲುಪಿದೆ. ಇಂತಹ ಸನ್ನಿವೇಶದಲ್ಲಿ ಬೇಕಾಗಿರುವ ಸಂಗತಿಯೆಂದರೆ ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರುಗಳು ತಮ್ಮ ಸಾಂವಿಧಾನಿಕ ಕರ್ತವ್ಯವನ್ನು ಈ ರಾಜಕೀಯ ವೈವಿಧ್ಯತೆಯನ್ನು ಹಾಗೂ ನಮ್ಮ ರಾಜಕೀಯ ವ್ಯವಸ್ಥೆಯ ಒಕ್ಕೂಟ ಸ್ವರೂಪವನ್ನು ಪೂರ್ಣವಾಗಿ ಗುರುತಿಸಿಕೊಂಡು ನೆರವೇರಿಸಬೇಕಾಗುತ್ತದೆ. ಈ ಒಂದು ಒಕ್ಕೂಟ ವ್ಯವಸ್ಥೆಯ ಸರಕಾರದ ಸಂದರ್ಭದಲ್ಲಿ ರಾಷ್ಟ್ರಪತಿಗಳ ಮತ್ತು ರಾಜ್ಯಪಾಲರುಗಳ ಪಾತ್ರವನ್ನು ಸೂಕ್ತವಾಗಿ ಸ್ಪಷ್ಟೀಕರಿಸಬೇಕಾಗಿದೆ, ನಿರ್ವಚಿಸಬೇಕಾಗಿದೆ.

.... ಸಚಿವರ ವಿಶ್ವ ಪ್ರದಕ್ಷಿಣೆಗೆ ?

ಪುಟ ಒಂದರಿಂದ

ತಮ್ಮ ಪ್ರಯಾಣದ ಫಲಾನುಭವಗಳ ವರದಿ ಸಲ್ಲಿಸಿ ಜನರ ಮುಂದಿಡುವುದರಲ್ಲಿ ಹಿಂದೆ ಬಿದ್ದಿದ್ದಾರೆ. ವಿದೇಶಗಳಿಂದ ನೆರವು ಹರಿದು ಬರುತ್ತಿದೆಯೆಂದು ಹೇಳುವ ಡಂಬಾಚಾರ ಮಾತ್ರ ನಮ್ಮ ಮುಂದಿದೆ. ಆದರೆ ತಾವು ವಿದೇಶ ಪ್ರಯಾಣದಿಂದಾಗಿ ಕಂಡುಕೊಂಡ ಯಾವ ಅನುಭವಗಳನ್ನು ಯಾವ ಕ್ಷೇತ್ರದಲ್ಲಿ ಅನುಷ್ಠಾನ ತಂದಿದ್ದೇವೆಂದು ಯಾವ ಮಂತ್ರಿಯಾಗಲೀ, ಅಧಿಕಾರಿಗಳಾಗಲೀ ಹೇಳುತ್ತಿಲ್ಲ. ನಿರಂತರವಾಗಿ, ನಿರ್ಭೀತಿ ಯಿಂದಲೇ ಪ್ರಯಾಣಗಳು ನಡೆಯುತ್ತಲೇ ಇವೆ.

ಜನತಾ ದಳ ಸರಕಾರ ಬಂದ ಒಂದೂವರೆ ವರ್ಷದ ಅವಧಿಯಲ್ಲಿ ಸಚಿವರ ಹಾಗೂ ಅಧಿಕಾರಿಗಳ ವಿದೇಶ ಪ್ರವಾಸಕ್ಕಾಗಿ 38 ಲಕ್ಷ ರೂಪಾಯಿ ವೆಚ್ಚವಾಗಿದೆಯೆಂದು ಮುಖ್ಯಮಂತ್ರಿಗಳು ಹೋದ ಜುಲೈ ತಿಂಗಳ ವಿಧಾನಪರಿಷತ್ ಅಧಿವೇಶನದಲ್ಲಿ ಹೇಳಿದ್ದಾರೆ. ಸಚಿವರ ಖಾತೆಗಳಿಗೆ ಸಂಬಂಧಿಸಿದ ಉದ್ಯಮ, ನಿಗಮ, ಮಂಡಳಿಗಳ ವಿದೇಶ ಪ್ರಯಾಣ ಖರ್ಚು ಲಭ್ಯವಿಲ್ಲವೆಂದೂ ಹೇಳಿದ್ದಾರೆ. ಕಳೆದ ಒಂದು ವರ್ಷದಲ್ಲಿ ಮತ್ತೆ ಡಜನ್‌ಗಟ್ಲೆ ಮಂತ್ರಿಗಳು, ಅಧಿಕಾರಿಗಳು ವಿದೇಶಗಳಲ್ಲಿ ಸುತ್ತಿಬಂದಿದ್ದಾರೆ. ಈಗಲೂ ಸುತ್ತುತ್ತಿದ್ದಾರೆ.

ಮುಖ್ಯಮಂತ್ರಿ ಜೆ.ಹೆಚ್. ಪಟೇಲರು, ಬೃಹತ್ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ, ಕಾನೂನು ಮಂತ್ರಿ ಎಂ.ಸಿ. ನಾಣಯ್ಯ ಮತ್ತು ಇತರ ಹತ್ತಿಪ್ಪತ್ತು ಅಧಿಕಾರಿಗಳ ಜೊತೆಯಲ್ಲಿ ಇಂಗ್ಲೆಂಡ್, ಅಮೇರಿಕಗಳಿಗ ಹೊರಟಿದ್ದಾರೆ. ಇದಕ್ಕಾಗಿ ತಗಲುವ ಅಂದಾಜು ವೆಚ್ಚ ಎಂಟೂವರೆ ಕೋಟಿಯಂತೆ. ಪ್ರಯಾಣ ಮುಗಿಯುವಾಗ ಅದು ಹತ್ತು-ಹನ್ನೆರಡಕ್ಕೇರಿದರೂ ಆಶ್ಚರ್ಯ ಪಡಬೇಕಾಗಿಲ್ಲ. ಉಪಮುಖ್ಯಮಂತ್ರಿ ಸಿದ್ದ್ರಾಮಯ್ಯ, ಶಿಕ್ಷಣ ಸಚಿವ ಸೋಮಶೇಖರ, ಬಿ.ಡಿ.ಎ. ಸಚಿವ ಅನಂತನಾಗ್, ಸಾರಿಗೆ ಸಚಿವ ಪಿ.ಜಿ.ಆರ್. ಸಿಂಧ್ಯಾ ಪ್ರವಾಸದಲ್ಲಿದ್ದಾರೆ. ಗೃಹಖಾತೆ ಸಚಿವ ರೋಷನ್ ಬೇಗ್, ಗ್ರಾಮೀಣಾಭಿವೃದ್ಧಿ ಸಚಿವ ಎಂ.ಪಿ. ಪ್ರಕಾಶ್ ಯಾತ್ರೆ ಮುಗಿಸಿಬಂದಿದ್ದಾರೆ.

ಮಂತ್ರಿಗಳು, ಅಧಿಕಾರಿಗಳು ಹಾರಾಡುತ್ತಲೇ ಇದ್ದಾರೆ. ಸರಕಾರಿ ಖಜಾನೆ ಖಾಲಿಯಾಗುತ್ತಲೇ ಹೊರಟಿದೆ. ಪಾಪ ಬಡಪಾಯಿ ಬೋರೇಗೌಡ ಎವೆಇಕ್ಕದೆ ಆಕಾಶದತ್ತ ನೋಡುತ್ತಲೆ ಇದ್ದಾನೆ.

ಇಂಥ ವ್ಯವಸ್ಥೆಯ ವಿರುದ್ಧ ಜನರೆದ್ದು ಬಂಡಾಯ ಹೂಡಬೇಕು. ತ್ವರಿತ ರಾಜಕೀಯ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ತಮ್ಮ ಮಂತ್ರಿಪದವಿ ಹೋಗಬಹುದೆಂಬ ಭೀತಿಯ ಹಿನ್ನೆಲೆಯಲ್ಲಿ ಈ ರೀತಿಯ ವಿದೇಶಿ ಪ್ರಯಾಣದ ಹುನ್ನಾರ ನಡೆದಿರಬೇಕಲ್ಲವೇ? ಈ ರೀತಿ ಹಣದ ದುರುಪಯೋಗ ತಡೆಯಲು ಕಡಿವಾಣ ಅಗತ್ಯ. ಅಂಥ ಜನಾಂದೋಲನ ರೂಪಿಸಲು ಮುಂದಾಗಬೇಕು.

ಪ್ರತಿಭಟನೆಯ ಶಂಖ

ಮುಖ್ಯಮಂತ್ರಿಗಳನ್ನೊಳಗೊಂಡು ಹಲವಾರು ಮಂತ್ರಿಗಳು ವಿದೇಶಗಳಲ್ಲಿ ಸಂಚರಿಸುತ್ತಿರುವಾಗ ಅಸಮಾಧಾನದ ಬಂಡಾಯದ ಹೊಗೆಯಾಡುತ್ತಿದೆಂಬುದನ್ನು ಗಮನಿಸಬೇಕು. ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಪ್ರದೇಶಗಳಿಗೆ ಅನ್ಯಾಯವಾಗಿದೆಂಬ ಕೂಗು ಕೇಳುತ್ತಿದ್ದೇವೆ. ಜನತಾ ದಳದೊಳಗಿನ ವಿರೋಧಿ ಗುಂಪಿನ ನಾಯಕ ಶಾಸಕ ವೈಜನಾಥ ಪಾಟೀಲರೇ ಕಾಂಗ್ರೆಸ್, ಬಿಜೆಪಿಗಳ ಜೊತೆ ಸೇರಿ ಗುಲ್ಬರ್ಗದಲ್ಲಿ ಸಮಾವೇಶ ಕರೆದು ಶಿಕ್ಷಣ, ನೌಕರಿಗಳಲ್ಲಿ ವಿಶೇಷ ಮೀಸಲಾತಿ ಬೇಡುವ ನಿರ್ಣಯಕೈಗೊಂಡಿದ್ದಾರೆ. ಉತ್ತರ ಕರ್ನಾಟಕದ ನಾಲ್ಕು, ಹೈದಾರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಿಗೆ ಅನ್ಯಾಯವಾಗಿದೆಂಬ ಕೂಗು ಕೇಳಿಬರುತ್ತಿದೆ. ಈ ಕೂಗಿಗೆ ಶಂಖ ಹಿಡಿದವರೆಲ್ಲ 30-40 ವರ್ಷಗಳಿಂದಲೂ ಒಂದಲ್ಲೊಂದು ರೀತಿಯಲ್ಲಿ ಮಂತ್ರಿ ಸ್ಥಾನದಲ್ಲಿದ್ದವರು ಹಾಗೂ ಆಳುವ ಪಕ್ಷಕ್ಕೆ ಸೇರಿದವರೇ ಎಂಬುದನ್ನು ಮರೆಯುವಂತಿಲ್ಲ.

ಉತ್ತರ ಕರ್ನಾಟಕ - ಹೈದರಾಬಾದ ಕರ್ನಾಟಕದ ಜನರಿಗೆ ಹಾಗೆಯೇ ಆ ಪ್ರದೇಶಗಳಿಗೆ ಅನ್ಯಾಯವಾಗಿದೆ, ಆ ಪ್ರದೇಶದ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ, ನೀರಾವರಿ, ಉದ್ಯಮ ಸುಧಾರಿಸಬೇಕಾಗಿದೆ. ಆಡಳಿತ ಚುರುಕು ಗೊಳ್ಳಬೇಕಾಗಿದೆ,ಈ ವಿಷಯಗಳಲ್ಲಿ ಎರಡಭಿಪ್ರಾಯವಿಲ್ಲ. ಆದರೆ ಇಂಥ ಪರಿಸ್ಥಿತಿ ಉಂಟುಮಾಡಿದವರು ಈಗ ಶಂಖ ಊದುತ್ತಿರುವವರ ಪಕ್ಷಗಳೇ ಅಲ್ಲವೇ? ಕರ್ನಾಟಕ ಏಕೀಕರಣವಾದಂದಿನಿಂದಲೂ ಕಮ್ಯುನಿಸ್ಟ್ ಪಾರ್ಟಿ ಈ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳತ್ತ ಸರಕಾರದ ಗಮನ ಸೆಳೆಯುತ್ತಲೇ ಬಂದಿದೆ. ನೀರಾವರಿ ಯೋಜನೆಗಳಿಗಾಗಿಯೂ, ಉದ್ಯಮಗಳ ಸ್ಥಾಪನೆಗಾಗಿಯೂ, ಶಿಕ್ಷಣ ಸೌಲಭ್ಯಗಳಿಗಾಗಿಯೂ ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಲೇ ಬಂದಿದೆ. ಆದರೆ ಅಧಿಕಾರದಲ್ಲಿದ್ದ ಈ ಮುಖಂಡರ ಸರಕಾರಗಳು ಅತ್ತ ಗಮನ ಹರಿಸಲಿಲ್ಲ. ಅಂಥ ಹೋರಾಟಗಳನ್ನು ಕಮ್ಯುನಿಸ್ಟ್ ಪಕ್ಷ(ಸಿಪಿಐ(ಎಂ) ಈಗಲೂ ಮುಂದುವರಿಸಿದೆ. ಆದರೆ ಈ ಪ್ರದೇಶಗಳ ಹಿಂದುಳಿದಿರುವಿಕೆ ಅವುಗಳಿಗಾಗುವ ಅನ್ಯಾಯಗಳ ಕುರಿತು ಈಗ ಶಂಖ ಊದುವವರಾರು? ಒಂದಿಲ್ಲೊಂದು ಅಧಿಕಾರ ಸ್ಥಾನದಲ್ಲಿದ್ದು ಈಗ ಅದನ್ನು ಕಳಕೊಂಡ ಮುಖಂಡರಲ್ಲವೇ? ಈ ಮುಖಂಡರಿಗೆ ಅಧಿಕಾರ ದಕ್ಕಿದರೆ ಈ ತರದ ಶಂಖ ಊದುವಿಕೆ ಕೊನೆಗೊಳ್ಳುತ್ತದೆ. ಸಿಪಿಐ(ಎಂ) ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ಕೂಗು ಮಾತ್ರ ಮುಂದುವರಿಯುತ್ತದೆ.

ಬರೀ ಓಟಿಗಾಗಿ

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಹೆಸರಲ್ಲಿ ಈ ಮಹಾಶಯರೆಲ್ಲ ಅಪಾಯಕಾರಿ ವಿಚಾರಧಾರೆಗಳಿಗೆ ಅವಕಾಶಮಾಡಿ ಕೊಡುತ್ತಿದ್ದಾರೆ. ರಾಜ್ಯದ ಯೋಜನೆಯಲ್ಲಿ, ವಾರ್ಷಿಕ ಬಜೆಟ್ಟಿನಲ್ಲಿ ಈ ಪ್ರದೇಶದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನೊದಗಿಸಬೇಕೆಂಬ ಬೇಡಿಕೆಯಲ್ಲಿ ತಪ್ಪೇನಿಲ್ಲ. ಆದರೆ ಶಿಕ್ಷಣ, ನೌಕರಿಗಳಲ್ಲಿ ವಿಭಾಗ ಮಟ್ಟದಲ್ಲಿ ಈ ರೀತಿಯ ಪ್ರತಿಯೊಂದು ವಿಭಾಗದವರೇ ತಮಗೆ ಇಂತಿಷ್ಟು ಮೀಸಲಾತಿ ಬೇಕೆಂಬ ಬೇಡಿಕೆಗಾಗಿ ಚಳುವಳಿ ಹೂಡಿದ್ದಾದರೆ ಕರ್ನಾಟಕ ಏಕೀಕರಣ ಗುರಿ ಇಟ್ಟು ಕೊಂಡು ಹೋರಾಡಿದ ಅಸಂಖ್ಯಾತ ಕನ್ನಡಿಗರ ಪಾಡೇನಾಗುತ್ತದೆ. ಕರ್ನಾಟಕ ಏಕೀಕರಣದ ಉದ್ದೇಶವನ್ನೇ ಈ ಜನ ತಮ್ಮ ಅಧಿಕಾರಲಾಲಸೆಗಾಗಿ ನಿರರ್ಥಕಗೊಳಿಸುತ್ತಾರಲ್ಲ. ಸಂಪನ್ಮೂಲಗಳಿಗಾಗಿ, ಅಭಿವೃದ್ಧಿ ಕಾರ್ಯಗಳಿಗಾಗಿ, ಹೋರಾಡೋಣ. ಆದರೆ ಪ್ರಾದೇಶಿಕ ಮೀಸಲಾತಿಗಾಗಿ ಅಲ್ಲ. ಪ್ರಾದೇಶಿಕ ಮೀಸಲಾತಿಯಂತ ಬೇಡಿಕೆಗಳ ಸಮಾವೇಶಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಭಾಗವಹಿಸುವುದಿಲ್ಲ. ಅಂಥ ಸಂಕುಚಿತ ಭಾವನೆಗಳ ಪ್ರಚೋದನೆಯನ್ನು ಸಿಪಿಐ(ಎಂ) ಪಕ್ಷ ಬೆಂಬಲಿಸುವುದಿಲ್ಲ. ಅದು ಅಪಾಯಕಾರಿ ಘೋಷಣೆಯಾಗಿದೆಂದು ಅದು ಪರಿಗಣಿಸುತ್ತದೆ. ಸಿಪಿಐ(ಎಂ) ಬಿಟ್ಟು ಇತರ ಎಲ್ಲಾ ರಾಜಕೀಯ ಪಕ್ಷಗಳು ಒಂದೇ ಮಂಟಪದಲ್ಲಿ ಸೇರಿ ಘೋಷಿಸಿವೆ. ಅವರೆಲ್ಲರಿಗೆ ಮೀಸಲಾತಿ ಮಹತ್ವದಲ್ಲ. ಅಭಿವೃದ್ಧಿ ಅಗತ್ಯದಲ್ಲಿ ಮೀಸಲಾತಿ ಘೋಷಣೆ ಕೂಗಿ, ಚುನಾವಣೆಯಲ್ಲಿ ಮತಗಳಿಸುವುದೊಂದೇ ಗುರಿಯಾಗಿದೆ. ಇಲ್ಲದಿದ್ದಲ್ಲಿ ವೈಜನಾಥ ಪಾಟೀಲ, ಗುರುನಾಥ, ಲಲಿತಾ ನಾಯಕ (ಜನತಾದಳ) ಭೀಮಣ್ಣ ಖಂಡ್ರೆ, ಬಿ.ಜಿ. ಜವಳಿ(ಕಾಂಗ್ರೆಸ್) ಎಸ್.ಕೆ.ಕಾಂತ(ಲೋಕಶಕ್ತಿ) ನಾಮೋಶಿ (ಬಿಜೆಪಿ) ಇವರೆಲ್ಲ ಒಂದೇ ವೇದಿಕೆಯಲ್ಲಿ ನಿಂತು ಹಿಂದುಳಿದ ಪ್ರದೇಶದ ಜನರಿಗಾಗಿ ಕಣ್ಣೀರು ಸುರಿಸುವ ಅವಶ್ಯಕತೆ ಏನಿದೆ?

ಇವೆಲ್ಲ ಬರೇ ಓಟಿಗಾಗಿ ಮಾತ್ರವಲ್ಲದೆ ಮೀಸಲಾತಿಗಾಗಿ ಅಲ್ಲ, ಅಭಿವೃದ್ಧಿಗಾಗಿಯೂ ಅಲ್ಲ. ಜನರೇ ಇಂಥವರಿಂದ ಎಚ್ಚರಿಕೆ!

ಫ್ರಾನ್ಸ್ : ಬಲಪಂಥೀಯ ಅಧ್ಯಕ್ಷ ಚಿರಾಕ್‌ಗೆ ಮುಖಭಂಗ ; ಸೋಶಲಿಸ್ಟರು ಅಧಿಕಾರಕ್ಕೆ


ಬಲಪಂಥೀಯ ಅಧ್ಯಕ್ಷ ಚಿರಾಕ್ ರ ವೈಯಕ್ತಿಕ ಮನವಿಯನ್ನು ಧಿಕ್ಕರಿಸಿ, ಫ್ರೆಂಚ್ ಜನ ಸೋಶಲಿಸ್ಟ್, ಕಮ್ಯುನಿಸ್ಟ್ ಹಾಗೂ ಪರಿಸರವಾದಿ ಗ್ರೀನ್ ಪಕ್ಷಗಳ ರಂಗಕ್ಕೆ ನಿಚ್ಚಳ ಬಹುಮತವಿತ್ತಿದ್ದಾರೆ. ಮೊದಲ ಸುತ್ತಿನಲ್ಲಿ ರಂಗಕ್ಕೆ ನಿಚ್ಚಳ ಬಹುಮತ ಬರದ್ದರಿಂದ, ಎರಡನೇ ಸುತ್ತಿನ ಮತದಾನ (ಫ್ರೆಂಚ್ ಸಂವಿಧಾನದ ಪ್ರಕಾರ) ಅಗತ್ಯವಾಗಿತ್ತು. ಸೋಶಲಿಸ್ಟ್ ಪಕ್ಷದ ಜೋಸ್ಪಿನ್‌ರನ್ನು ರಂಗ ಪ್ರಧಾನಮಂತ್ರಿಯಾಗಿ ಆಯ್ಕೆ ಮಾಡಿದ್ದು, ಅವರನ್ನು ಪ್ರಧಾನ ಮಂತ್ರಿಯಾಗಿ ಅಧ್ಯಕ್ಷರು ಈಗಾಗಲೇ ನೇಮಿಸಿದ್ದಾರೆ. ಜೋಸ್ಪಿನ್ ನಾಯಕತ್ವದ ಹೊಸ ಸರಕಾರ ಈಗಾಗಲೇ ಅಸ್ತಿತ್ವಕ್ಕೆ ಬಂದಿದ್ದು ಈ ಸರಕಾರದಲ್ಲಿ ಕಮ್ಯುನಿಸ್ಟ್ ಪಕ್ಷದ 3 ಸದಸ್ಯರು, ಒಬ್ಬ ಗ್ರೀನ್ ಪಕ್ಷದ ಪ್ರತಿನಿಧಿ, ಐವರು ಮಹಿಳೆಯರು ಸೇರಿದ್ದಾರೆ. ಫ್ರೆಂಚ್ ಕಮ್ಯುನಿಸ್ಟ್ ಪಕ್ಷ 80 ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ತನ್ನ ಮತಗಳನ್ನು ಹೆಚ್ಚಿಸಿಕೊಂಡಿದ್ದು, ಶೇಕಡಾ 10.25 ಕ್ಕೇರಿಸಿಕೊಂಡಿದೆ. ಕಮ್ಯುನಿಸ್ಟ ಪಕ್ಷ ಕನಿಷ್ಠ ವೇತನ ಹೆಚ್ಚಿಸಬೇಕು, ತಕ್ಷಣ 7 ಲಕ್ಷ ಉದ್ಯೋಗವಕಾಶಗಳನ್ನು ನಿರ್ಮಿಸಬೇಕು ಎಂಬ ಬಗ್ಗೆ ಸೋಶಲಿಸ್ಟರೊಂದಿಗೆ ಒಪ್ಪಂದ ಮಾಡಿಕೊಂಡು ಮಂತ್ರಿಮಂಡಲವನ್ನು ಸೇರಿದೆ.

ಯುರೋಪಿಯನ್ ಸಾಮಾನ್ಯ ನಾಣ್ಯ ಯುರೋ ವ್ಯವಸ್ಥೆಯಲ್ಲಿ ಸೇರಲು, ಕಲ್ಯಾಣ ಯೋಜನೆ, ಬೆಳವಣಿಗೆ ಯೋಜನೆಗಳಲ್ಲಿ ಕಡಿತದ ಬಲಪಂಥೀಯ ನೀತಿಯನ್ನು ವಿರೋಧಿಸಿ ಹೊಸ ಸರಕಾರ ಅಧಿಕಾರಕ್ಕೆ ಬಂದಿದೆ. ಫ್ರೆಂಚ್ ಸೋಶಲಿಸ್ಟ್ ಪಕ್ಷ ಯುರೋ ವ್ಯವಸ್ಥೆಯ ವಿರೋಧಿಯಲ್ಲದಿದ್ದರೂ, ಇದು ಸಾಮಾಜಿಕ ಕಾರ್ಮಿಕ ವರ್ಗಕೆ ಅಡ್ಡಿಯಾಗಬಾರದು ಎಂದಿದೆ. ಇಟಲಿ, ಬ್ರಿಟನ್‌ಗಳ ನಂತರ ಪಶ್ಚಿಮ ಯುರೋಪಿ ನಲ್ಲಿ ಎಂಟು ದೇಶಗಳು ಇಂತಹ ಸರಕಾರ ಹೊಂದಿದಂತಾಗಿದೆ. ಯುರೋಪಿನ ರಾಜಕೀಯ ದಿಕ್ಕು ಎಡ-ಮಧ್ಯಮ ಪಂಥದತ್ತ ಬದಲಾಗುತ್ತಿದೆ. ಸದ್ಯದಲ್ಲೇ, ಚುನಾವಣೆ ನಡೆಯಲಿರುವ ಜರ್ಮನಿ, ಸ್ಪೇನ್‌ಗಳಲ್ಲೂ ಇಂತಹುದೇ ಗಾಳಿ ಬೀಸುತ್ತಿದೆ.

ಹೊಸ ಫ್ರೆಂಚ್ ಪ್ರಧಾನಿ ಬೆಳವಣಿಗೆ ಹಾಗೂ ಉದ್ಯೋಗ ನಿರ್ಮಾಣ ಮಾಸ್‌ಟ್ರಿಕ್ಟ್ ಒಪ್ಪಂದ(ಯುರೋ ನಾಣ್ಯ ನಿರ್ಮಿಸುವ ಬಗ್ಗೆ ಒಪ್ಪಂದ) ಕ್ಕಿಂತ ಹೆಚ್ಚಿನದು ಎಂದು ಸ್ಪಷ್ಟ ಪಡಿಸಿದ್ದಾರೆ. ಒಪ್ಪಂದವನ್ನು ಅಗತ್ಯ ಬಿದ್ದರೆ ಬದಲಾಯಿಸಬಹುದು ಎಂದು ಹೇಳಿದ್ದು, ಯುರೋಪಿಯನ್ ಒಕ್ಕೂಟದ ಬಹುರಾಷ್ಟ್ರೀಯ ಕಂಪನಿಗಳ ವಲಯಗಳಲ್ಲಿ ಆತಂಕ ಹೆಚ್ಚಿದೆ. ಯುರೋಪು ಎಡ-ಮಧ್ಯಮ ಪಂಥೀಯ ರಾಜಕೀಯದತ್ತ ವಾಲುತ್ತಿರುವುದು ಯುರೋ ಒಕ್ಕೂಟವನ್ನು ವಿಳಂಬ ಮಾಡಬಹುದು. ಇಲ್ಲದಿದ್ದರೆ ಯುರೋ ಹೆಸರಲ್ಲಿ ವಿಧಿಸಲಾಗಿದ್ದ ಬಲಪಂಥೀಯ ಸಾಮಾಜಿಕ ಕಲ್ಯಾಣ-ಉದ್ಯೋಗ ನಿರ್ಮಾಣ ಯೋಜನೆಗಳ ಕರಡನ್ನು ಸಡಿಲಿಸಬಹುದು. ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳ ಕನಸಿನ ದೇಶಗಳ ಕಟ್ಟುಪಾಡು ಇಲ್ಲದ ಅವರ ನೇರ ನಿಯಂತ್ರಣದಲ್ಲಿರುವ ಯುರೋಪಿನ ಸೂಪರ್ ಸರಕಾರ ಸಾಕಾರವಾಗದೆ ಹೋಗಬಹುದು.

ಫ್ರೆಂಚ್ ಚುನಾವಣಾ ಫಲಿತಾಂಶ ಈ ರೀತಿ ಭಾರೀ ಗಮನಾರ್ಹ.

ತನ್ನ ಸ್ಥಾನಗಳನ್ನು 23 ರಿಂದ 38 ಕ್ಕೇರಿಸಿಕೊಂಡ ಫ್ರೆಂಚ್ ಕಮ್ಯುನಿಸ್ಟ ಪಕ್ಷದ ಮುಖಂಡ ರಾಬರ್ಟ್ ಹೂ ಮತದಾನ ಮಾಡುತ್ತಿದ್ದಾರೆ.



ತಾಲಿಬಾನ್ ಸರಕಾರಕ್ಕೆ ಉತ್ತರ ಅಫಘಾನಿಸ್ತಾನದಲ್ಲಿ ಭಾರಿ ಪರಾಜಯ

ಪಾಕಿಸ್ತಾನ ಹಾಗೂ ಅಮೇರಿಕಾದ ಬೆಂಬಲಿತ ಬರ್ಬರ ಇಸ್ಲಾಮಿಕ್ ಮೂಲಭೂತವಾದಿ ತಾಲಿಬಾನ್ ಸರಕಾರದ ಸೈನ್ಯಗಳು ಉತ್ತರ ಅಫಘಾನಿಸ್ತಾನದಲ್ಲಿ ಭಾರಿ ಪರಾಜಯ ಹೊಂದಿ ಕಾಬೂಲ್‌ನಿಂದ ಹಿಂದೆ ಸರಿದಿವೆ. ಕಳೆದ ಕೆಲವು ವಾರಗಳಲ್ಲಿ ಕಾಬೂಲ್‌ನಿಂದ ಉತ್ತರದ ಗಡಿಯಲ್ಲಿರುವ ಮಝಾರ್-ಎ-ಶರೀಫ್‌ರವರೆಗೆ ಜನರಲ್ ದೊಸ್ತುಮನ ಪಡೆಗಳನ್ನು ಸೋಲಿಸುತ್ತಾ ನಡೆದಿದ್ದ ತಾಲಿಬಾನ್ ಕೇವಲ ಆರು ದಿನಗಳಲ್ಲಿ 120 ಮೈಲಿ ಕಾಬೂಲಿನತ್ತ ಸರಿಯಬೇಕಾಗಿದೆ. ಮಝಾರ್-ಎ-ಶರೀಫ್‌ನಲ್ಲಿ ನಡೆದ ಭೀಷಣ ಕಾಳಗದಲ್ಲಿ ಜನರಲ್ ಮಲ್ಲಿಕ್‌ರ ಪಡೆಗಳು ತಾಲಿಬಾನ್ ಪಡೆಗಳನ್ನು ಧ್ವಂಸ ಮಾಡಿವೆ. ನೂರಾರು ತಾಲಿಬಾನ್ ಸೈನಿಕರನ್ನು ಸೆರೆ ಹಿಡಿದಿದೆ. ಕೆಲವೇ ದಿನಗಳ ಈ ಭೀಷಣ ಕಾಳಗದಲ್ಲಿ ತಾಲಿಬಾನ್ ಮೂರು ಸಾವಿರ ಸೈನಿಕರನ್ನು ಕಳೆದುಕೊಂಡಿದೆ ಎನ್ನಲಾಗಿದೆ(ಈ ಸೈನಿಕರು ಇಲ್ಲವೆ ಸತ್ತಿದ್ದಾರೆ, ಇಲ್ಲವೆ ಸೆರೆಯಾಗಿದ್ದಾರೆ).


ಉತ್ತರ ಅಫಘಾನಿಸ್ತಾನವನ್ನು ಗೆದ್ದು, ಇಡೀ ಅಫಘಾನಿಸ್ತಾನವನ್ನು ಆಳುವ ಭರದಲ್ಲಿ, ತಾಲಿಬಾನ್ ಪಡೆಗಳನ್ನು ದೊಡ್ಡ ಸಂಖ್ಯೆಯಲ್ಲಿ ಉತ್ತರ ಅಫಘಾನಿಸ್ತಾನಕೆ ಕಳಿಸಲಾಗಿತ್ತು. ಕಾಬೂಲ್‌ನ ರಕ್ಷಣೆಯನ್ನು ಹೆಚ್ಚು ಕಡಿಮೆ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಕೈಗೆ ತೆಗೆದುಕೊಂಡಿತ್ತು ಎನ್ನಲಾಗಿದೆ. ಈಗ ಜನರಲ್ ಮಲ್ಲಿಕ್ ಹಾಗೂ ಜನರಲ್ ಮಸೂದ್ ಕಾಬೂಲ್‌ನ ಹೊರ ವಲಯಗಳಲ್ಲಿ ತಾಲಿಬಾನ್ ಸರಕಾರಕ್ಕೆ ದುಸ್ವಪ್ನವಾಗಿದ್ದಾರೆ. ಜಲಾಲಾಬಾದ್ ಪ್ರಾಂತ್ಯದಲ್ಲಿ ತಾಲಿಬಾನ್‌ಗೆ ಪಂಥಾಹ್ವಾನ ನೀಡಿದ್ದಾರೆ. ಆಯಕಟ್ಟಿನ ಪೇಶಾವರ್-ಕಂದಾಹಾರ್-ಕಾಬೂಲ್ ಹೈವೇಯಲ್ಲಿ ಹೋಗಲು ಪಾಕಿಸ್ತಾನದ ಭಾರೀ ಶಸ್ತ್ರಾಸ್ತ್ರ, ಆಹಾರ ಪದಾರ್ಥ ಇತ್ಯಾದಿ ಸರಬರಾಜನ್ನು ಪಡೆದಿದ್ದಾರೆ. ಇದು ತಾಲಿಬಾನ್ ಸರಕಾರಕೆ ತೀವ್ರ ಅಪಾಯ ಒಡ್ಡಿದೆ.

ತಾಲಿಬಾನ್ ಈಗ ಇಡೀ ಜಗತ್ತಿಗೆ ಗೊತ್ತಿರುವಂತೆ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐನ ಶಿಶು. ತಾಲಿಬಾನ್ ಹೆಸರಲ್ಲಿ ನಿಜವಾಗಿ ಯುದ್ಧದಲ್ಲಿ ಭಾಗವಹಿಸುವುದು ಪಾಕಿಸ್ತಾನದ ಐಎಸ್‌ಐ ಅಥವಾ ಸೈನ್ಯದ ಸಿಬ್ಬಂದಿ ಎಂದೂ ಹೇಳಲಾಗಿದೆ. ಅಫಘಾನಿಸ್ತಾನದಲ್ಲಿ ಕೈಗೊಂಬೆ ಸರಕಾರ ರಚಿಸಿ, ಆ ಮೂಲಕ ಮಧ್ಯ ಏಶ್ಯಾದ ಹೊಸ ಇಸ್ಲಾಮಿಕ್ ಗಣರಾಜ್ಯಗಳ ತೈಲ ಸಂಪತ್ತಿನ ಮೇಲೆ ನಿಯಂತ್ರಣ ಹೊಂದುವ ಭಾರೀ ದೂರಗಾಮಿ ಯೋಜನೆಯ ಭಾಗ ಇದು. ಪಾಕಿಸ್ತಾನದ ಗಡಿಯ ಬಳಿ ಇರುವ ಕಂದಾಹಾರ್‌ನಲ್ಲಿ ಮುಸ್ಲಿಂ ಧಾರ್ಮಿಕ ಶಾಲೆಗಳ ವಿದ್ಯಾರ್ಥಿಗಳನ್ನು ಮೂಲಭೂತವಾದಿ ವಿಚಾರ ಹಾಗೂ ಸಶಸ್ತ್ರ ಹೋರಾಟದಲ್ಲಿ ತರಬೇತಿ ಮಾಡಿ, ಪಾಕಿಸ್ತಾನ ತನ್ನ ಈ ಯೋಜನೆಗೆ ಬಳಸಿಕೊಳ್ಳಲಾಗಿತ್ತು. ಈ ಕೆಲಸದಲ್ಲಿ ಅಮೇರಿಕ ಸಿಐಎ ಸಹ ನೇರ ಬೆಂಬಲ ನೀಡಿದೆ. ಅಫಘಾನಿಸ್ತಾನದಲ್ಲಿ ಒಂದು ಕೈಗೊಂಬೆ ಸರಕಾರ, ಹಲವು ಅಮೇರಿಕನ್ ತೈಲ ಕಂಪನಿಗಳಿಗೂ ಬೇಕಾಗಿದೆ. ಯುನೋಕ್ಯಾಲ್ ಹಾಗೂ ಡೆಲ್ಟಾ ತೈಲ ಕಂಪನಿ ಈಗಾಗಲೇ ತುರ್ಕಮಾನಿಸ್ತಾನದಿಂದ ಅಫಘಾನಿಸ್ತಾನದ ಮೂಲಕ ಪಾಕಿಸ್ತಾನಕ್ಕೆ 700 ಶತಕೋಟಿ ಘನ ಮೀಟರ್ ಪ್ರಾಕೃತಿಕ ಗ್ಯಾಸ್ ಪಡೆಯುವ ಎರಡು ಶತಕೋಟಿ ಡಾಲರ್ ಪೈಪ್‌ಲೈನ್ ಯೋಜನೆ ಹಾಕಿದೆ. ತುರ್ಕಮಾನಿಸ್ತಾನದ ಪ್ರಾಕೃತಿಕ ಗ್ಯಾಸ್ ನಿಕ್ಷೇಪ ಜಗತ್ತಿನಲ್ಲೇ ಐದನೇ ಅತಿ ದೊಡ್ಡದು. ಇದೇ ರೀತಿ ಹಲವು ಅಮೇರಿಕನ್ ಕಂಪನಿಗಳು ಹಲವಾರು ಯೋಜನೆಗಳನ್ನು ಹಾಕುತ್ತಿದೆ. ಈ ಹೆಚ್ಚಿನ ಮಧ್ಯ ಏಶ್ಯಾ ದೇಶಗಳಿಗೆ ಬಂದರು(ಸಮುದ್ರ ಇಲ್ಲದಿರುವುದು). ವ್ಯವಸ್ಥೆ ಇಲ್ಲದ್ದರಿಂದ ತೈಲವನ್ನು ಪೈಪ್‌ಲೈನಿನ ಮೇಲೆ ಪಾಕಿಸ್ತಾನಕ್ಕೆ ಸಾಗಿಸಿ, ಕರಾಚಿ ಮೂಲಕ ರಫ್ತು ಈ ಕಂಪನಿಗಳ ಯೋಜನೆ, ಈ ಕಂಪನಿಗಳು ಸಿಐಎ, ಐಎಸ್‌ಐಯ ಯೋಜನೆಗಳಂತೆ ಸಕ್ರಿಯ ಬೆಂಬಲ, ಧನ ಸಹಾಯ ನೀಡುತ್ತಿವೆಯಂತೆ.

ಉತ್ತರ ಅಫಘಾನಿಸ್ತಾನದಲ್ಲಿ ತಾಲಿಬಾನ್‌ನ ಭಾರಿ ಪರಾಜಯ ಈ ಎಲ್ಲಾ ಸ್ಥಾಪಿತ ಹಿತಾಸಕ್ತಿಗಳ ಯೋಜನೆಗಳಿಗೆ ಭಾರಿ ಆಘಾತ ತಂದಿದೆ. ಪಾಕಿಸ್ತಾನ ತನ್ನ ಯೋಜನೆ ಕುಸಿದದ್ದು ನೋಡಿ ಗಾಬರಿ ಆಗಿ ಜನರಲ್ ಮಲ್ಲಿಕ್ ಹಾಗೂ ಜನರಲ್ ಮಸೂದ್‌ರ ಜತೆ ಶಾಂತಿ ಒಪ್ಪಂದಕೆ ಬಹಿರಂಗವಾಗಿ ಕೇಳಿಕೊಂಡಿದೆ ಜನರಲ್ ಮಲ್ಲಿಕ್ ಶಾಂತಿ ಒಪ್ಪಂದಕ್ಕೆ ಮಾತುಕತೆ ನಡೆಸಿದ್ದಾರೆ ಎಂದು ಸಾರ್ವಜನಿಕ ಹೇಳಿಕೆ ಸಹ ನೀಡಿದೆ. ಅದಕೆ ಖಾರವಾಗಿ ಉತ್ತರಿಸಿದ ಜನರಲ್ ಮಲ್ಲಿಕ್ ಪಾಕಿಸ್ತಾನದ ಜತೆ ಶಾಂತಿ ಮಾತುಕತೆ ಪ್ರಶ್ನೆ ಇಲ್ಲ. ತಾಲಿಬಾನ್ ಬೇಕಿದ್ದರೆ ಅವರೇ ಶಾಂತಿ ಮಾತುಕತೆಗೆ ಬರಬೇಕು. ಇಷ್ಟರವರೆಗೆ ಅಂತಹುದೇನೂ ನಡೆದಿಲ್ಲ ಎಂದಿದ್ದಾರೆ. ಪಾಕಿಸ್ತಾನದ ಗಾಬರಿ ಇದರಲ್ಲಿ ಸ್ಪಷ್ಟವಾಗಿದೆ. ಅಮೇರಿಕಾದ ಯುನೋಕ್ಯಾಲ್ ಹಾಗೂ ಡೆಲ್ಟಾ ಕಂಪನಿಗಳು ಹೇಳಿಕೆ ನೀಡಿ, ಅಫಘಾನಿಸ್ತಾನದಲ್ಲಿ ಶಾಂತಿ ನೆಲೆಸದಿದ್ದರೆ(ಅಂದರೆ ತಾಲಿಬಾನ್ ಸರಕಾರ ಬಿದ್ದು ಹೋಗದೆ) ತನ್ನ ಯೋಜನೆ ನಿಲ್ಲಿಸಬೇಕಾಗುತ್ತದೆ ಎಂದಿದೆ.

ಪಾಕಿಸ್ತಾನ ಹಾಗೂ ಈ ಅಮೇರಿಕನ್ ಕಂಪನಿಗಳು ತಮ್ಮ ಲಾಭಕ್ಕಾಗಿ, ಅಫಘಾನಿಸ್ತಾನವನ್ನು ಸ್ಮಶಾನವಾಗಿರಿಸಿ ರಣರಂಗವಾಗಿಸಿದ್ದಾರೆ.

ಲೋಕಸಂಚಾರ



ಶರತ್‌ಚಂದ್ರ

ಮೈನಾಮಾರ್‌ಗೆ ಆಸಿಯನ್ ಬೆಂಬಲ - ಅಮೇರಿಕದ ವಿರೋಧಿಗಳ ತಿರಸ್ಕಾರ

ಇತ್ತೀಚೆಗೆ ನಡೆದ ಏಳು ದೇಶಗಳ ಆಸಿಯನ್ (ದಕ್ಷಿಣ-ಪೂರ್ವ ಏಶ್ಯಾದ ದೇಶಗಳ ಕೂಟ) ಸಮ್ಮೇಳನದಲ್ಲಿ ಮೈನಾಮಾರ್, ಕಂಪೂಚಿಯಾ ಹಾಗೂ ಲಾವೋಸ್‌ಗಳನ್ನು ಹೊಸ ಸದಸ್ಯ ದೇಶಗಳನ್ನಾಗಿ ಸ್ವೀಕರಿಸಿತ್ತು. ಮೈನಾಮಾರ್ ವಿರುದ್ಧ ಇತ್ತೀಚೆಗೆ ಪ್ರತಿಬಂಧಗಳನ್ನು ಹೇರಿದ ಅಮೇರಿಕಾ ಆಸಿಯಾನ್ ದೇಶಗಳಿಗೆ ಮೈನಾಮಾರ್‌ನ್ನು ಸದಸ್ಯವಾಗಿ ಒಪ್ಪಬಾರದು ಎಂದು ಹೇಳಿಕೆ ನೀಡಿತ್ತು. ಆಸಿಯಾನ್ ಸಮ್ಮೇಳನ ಅದನ್ನು ತಿರಸ ರಿಸಿ, ಈ ಮೂರು ದೇಶಗಳನ್ನು ಸದಸ್ಯ ದೇಶಗಳಾಗಿ ಅಂಗೀಕರಿಸಿದ್ದು, ಅಮೇರಿಕಾದ ಗನ್‌ಬೋಟ್ ವಿದೇಶ ನೀತಿ ಪರಿಣಾಮಕಾರಿಯಾಗಿಲ್ಲ ಎಂದು ಇನ್ನೊಮ್ಮೆ ಎಲ್ಲರಿಗೂ ಗೊತ್ತಾದಂತಾಗಿದೆ.

ಪಾಕಿಸ್ತಾನ ಆರ್ಡರ್ ಮಾಡಿದ ಎಫ್-16 ವಿಮಾನಗಳ ಸರಬರಾಜು ಮಾಡದ್ದರ ವಿರುದ್ಧ ಅಮೇರಿಕನ್ ಕೋರ್ಟ್‌ನಲ್ಲಿ ಕೇಸು ಹಾಕುವುದಾಗಿ ಬೆದರಿಸಿದ್ದು ಆಸಿಯಾನ್ ನಿರ್ಧಾರ, ಇಂಡೋನೇಶ್ಯಾದ ಇತ್ತೀಚಿನ ಪ್ರತಿಭಟನೆ ಇವೆಲ್ಲಾ ಅಮೇರಿಕಾದ ಮಿತ್ರ ದೇಶಗಳು ಅದರ ಅಂತರ್ರಾಷ್ಟ್ರೀಯ ಕಾನೂನನ್ನು ಕೈಗೆತ್ತಿಕೊಳ್ಳುವ ಧೋರಣೆ ಸಹಿಸುವುದಿಲ್ಲ ಎಂದು ತೋರಿದೆ.

ಸಮಾಜವಾದದ ಚರಮಗೀತೆ ಹಾಡಹೊರಟವರೇ, ಈಗೇನನ್ನುತ್ತೀರಿ?

1995ರಲ್ಲಿ ಫ್ರಾನ್ಸನ್ನು ನಡುಗಿಸಿದ ಬಲಪಂಥೀಯ ನವ-ಉದಾರವಾದೀ ಆರ್ಥಿಕ ನೀತಿಗಳ ವಿರುದ್ಧ ಅಲ್ಲಿಯ ದುಡಿಯುವ ಜನರ ಮುಷ್ಕರಗಳು, ಪ್ರತಿಭಟನೆಗಳ ಅಲೆ ಈಗ ಅಲ್ಲಿಯ ಚುನಾವಣೆಗಳಲ್ಲಿ ಎಡಪಕ್ಷಗಳ ಚಾರಿತ್ರಿಕ ವಿಜಯಕ್ಕೆ ದಾರಿ ಮಾಡಿಕೊಟ್ಟಿದೆ.

ಇತ್ತೀಚೆಗೆ ಬ್ರಿಟನ್ನಿನಲ್ಲಿ ಲೇಬರ್ ಪಕ್ಷದ ವಿಜಯದ ಹಿನ್ನೆಲೆಯಲ್ಲಿ, ಅದಕ್ಕೆ ಮೊದಲು ಇಟಲಿಯಲ್ಲಿ ಎಡಪಂಥೀಯರ ರಂಗದ ಗೆಲುವಿನ ಹಿನ್ನೆಲೆಯಲ್ಲಿ ಫ್ರಾನ್ಸಿನಲ್ಲಿನ ಈ ವಿಜಯ ತಮ್ಮ ಹಿಂದಿನ ಸಾಧನೆಗಳನ್ನು,ಹಕ್ಕುಗಳನ್ನು ರಕ್ಷಿಸಿಕೊಳ್ಳಲು ದುಡಿಯುವ ಜನ ಸೆಟೆದು ನಿಂತಿದ್ದಾರೆ ಎಂಬುದನ್ನು ತೋರಿಸುತ್ತದೆ.

.... ಇಟಲಿಯ ಸೋಷಲಿಸ್ಟ್ ಪ್ರಧಾನಮಂತ್ರಿ ಫ್ರೆಂಚ್ ಎಡಪಂಥೀಯರ ಗೆಲುವು ಯುರೋಪ್‌ನಲ್ಲಿ ಒಂದು ಸುಧಾರಣೆಯ ಅಲೆ ಬಂದಿದೆ ಎಂಬುದನ್ನು ತೋರಿಸುತ್ತದೆ ಎಂದಿದ್ದಾರೆ. ಈ ಪ್ರಧಾನ ಮಂತ್ರಿಯ ಸರಕಾರ ಇಟಲಿಯ ಕಮ್ಯುನಿಸ್ಟ್ ಮರುಸ್ಥಾಪನಾ ಪಕ್ಷದ ಬೆಂಬಲದಲ್ಲಿ ನಿಂತಿದೆ ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು.

ಈಗ ಯುರೋಪಿನ ಎರಡು ಪ್ರಮುಖ ಸರಕಾರಗಳ ಅಸ್ತಿತ್ವ ಕಮ್ಯುನಿಸ್ಟರ ಮೇಲೆ ನಿಂತಿದೆ. ಅಷ್ಟೇ ಅಲ್ಲ, ಅಲ್ಲಿ ಕಮ್ಯುನಿಸ್ಟ್ ಕಣ್ಣೋಟವನ್ನು ದೇಶದ ಅಜೆಂಡಾದಲ್ಲಿ ಸೇರಿಸಲಾಗಿದೆ. ಪೋರ್ಚುಗೀಸ್‌ನಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮೂರನೇ ಒಂದರಷ್ಟು ಕಮ್ಯುನಿಸ್ಟರ ಕೈಗಳಲ್ಲಿವೆ. ಸ್ಪೇನಿನಲ್ಲಿ ಕಮ್ಯುನಿಸ್ಟರ ಚುನಾವಣಾ ಪ್ರಭಾವ ಹೆಚ್ಚಿದೆ. ಇದರೊಂದಿಗೆ, ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಕಮ್ಯುನಿಸ್ಟರು ಮತ್ತೆ ಗುಂಪುಗೂಡುವ, ಮತ್ತು ಅವರ ನೇತೃತ್ವದಲ್ಲಿ ಸಮರಶೀಲ ಜನಪ್ರಿಯ ಸಾಮೂಹಿಕ ಆಂದೋಲನಗಳು ಬೆಳೆಯುತ್ತಿರುವ ಪ್ರಕ್ರಿಯೆ ಹೀಗೆ ಕ್ರೋಢೀಕರಣಗೊಳ್ಳಲಾರಂಭಿಸಿದೆ.

ಇದು ಸಹಜವೇ. ಏಕೆಂದರೆ ಕಳೆದ ಕೆಲವು ವರ್ಷಗಳಲ್ಲಿ ಯುರೋಪಿನಲ್ಲಿನ ಬಲಪಂಥೀಯ ಸರಕಾರಗಳು ಸಾಮಾಜಿಕ ಕಲ್ಯಾಣ ಖರ್ಚುಗಳಲ್ಲಿ ತೀವ್ರ ಕಡಿತ ತಂದುದರಿಂದ ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ.

ಫ್ರಾನ್ಸಿನಲ್ಲಿನ ಎಡಪಂಥೀಯ ವಿಜಯ ಯುರೋಪಿನಾದ್ಯಂತ ಎಡ ಮತ್ತು ಪ್ರಗತಿಪರ ಶಕ್ತಿಗಳನ್ನು ಬಲಪಡಿಸುವಲ್ಲಿ ಪ್ರಭಾವ ಬೀರಲಿದೆ. ಅಲ್ಲದೆ ದುಡಿಯುವ ಜನರ ಶೋಷಣೆಯನ್ನು ತೀವ್ರಗೊಳಿಸುವ ಸಾಮ್ರಾಜ್ಯಶಾಹಿ ನವ-ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಇದೊಂದು ದೊಡ್ಡ ಕೊತ್ತಳವಾಗಲಿದೆ.

20ನೇ ಶತಮಾನ ಅಂತ್ಯವಾಗುತ್ತಿದ್ದಂತೆ ಸಮಾಜವಾದವೂ ಸತ್ತು ಹೋಯಿತು ಎಂದು ಬೊಬ್ಬಿಟ್ಟ ಮಂದಿ ಈಗ ಕಕ್ಕಾಬಿಕ್ಕಿಯಾಗಿದ್ದಾರೆ. ಈಗ 20ನೇ ಶತಮಾನದಲ್ಲಿ ದುಡಿಯುವ ಜನರ ಆಂದೋಲನಗಳು ಕಮ್ಯುನಿಸ್ಟ್ ಸೋಶಲಿಸ್ಟರ ನೇತೃತ್ವದಲ್ಲಿ ಗಳಿಸಿದ ಸಾಧನೆಗಳನ್ನು ಹಕ್ಕುಗಳನ್ನು ರಕ್ಷಿಸಿಕೊಳ್ಳಲು ದುಡಿಯುವ ಜನ ಎದೆ ಸೆಟೆದು ನಿಂತಿದ್ದಾರೆ. ಅವರ ಈ ಸವಾಲಿನ ಆಧಾರದಲ್ಲಿ ಹೊಸ ಶತಮಾನ ಆರಂಭವಾಗಲಿದೆ.

(ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯದಿಂದ)

ಎಫ್-16 ಯುದ್ಧ ವಿಮಾನಗಳ ಖರೀದಿ ರದ್ದು- ಅಮೇರಿಕಕೆ ಇಂಡೋನೇಶ್ಯಾದ ಪ್ರತಿಭಟನೆ

ಅಮೇರಿಕದ ಪಾರ್ಲಿಮೆಂಟು, ಇಂಡೋನೇಶ್ಯಾದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಮಾನವ ಹಕ್ಕು ಪರಿಸ್ಥಿತಿಯ ಬಗ್ಗೆ ಮಾಡಿದ ಟೀಕೆಯನ್ನ ಪ್ರತಿಭಟಿಸಿ ಇಂಡೋನೇಶ್ಯನ್ ಸರಕಾರ ಒಂಬತ್ತು ಎಫ್-16 ಯುದ್ಧ ವಿಮಾನಗಳ ಖರೀದಿ ಯೋಜನೆಯನ್ನು ರದ್ದುಗೊಳಿಸಿದೆ. ಇದಲ್ಲದೆ ಅಮೇರಿಕಾದ ಅಂತರ್ರಾಷ್ಟ್ರೀಯ ಮಿಲಿಟರಿ ತರಬೇತಿ ಕಾರ್ಯಕ್ರಮ ಈ-ಐ.ಎಂ.ಈ.ಟಿ.ನಲ್ಲಿ ಭಾಗವಹಿಸದಿರಲು ನಿರ್ಧರಿಸಿದೆ. ಇಂಡೋನೇಶ್ಯಾದ ಆಂತರಿಕ ವ್ಯವಹಾರಗಳಲ್ಲಿ ಅಮೇರಿಕನ್ ಸರಕಾರ, ಪಾರ್ಲಿಮೆಂಟು ಮೂಗು ತೂರಿಸುವುದರ ವಿರುದ್ಧ ಇದು ಪ್ರತಿಭಟನೆ ಎಂದು ಸರಕಾರಿ ವಕ್ತಾರರು ಹೇಳಿದ್ದಾರೆ. ಇದರಿಂದ ಎರಡು ದೇಶಗಳ ನಡುವಣ ಸಂಬಂಧದಲ್ಲಿ ಯಾವ ಇತರ ಪರಿಣಾಮ ಆಗುವುದಿಲ್ಲ ಎಂತಲೂ ಹೇಳಿದ್ದಾರೆ.

ವಿಮಾನ ಖರೀದಿ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ವಕ್ತಾರರು ಎಫ್-16 ಯುದ್ಧ ವಿಮಾನಗಳು ಇಂಡೋನೇಶ್ಯಾಗೆ ಬೇಕಾಗೆ ಇರಲಿಲ್ಲ. ಪಾಕಿಸ್ತಾನ ಆರ್ಡರ್ ಮಾಡಿ, ದುಡ್ಡು ಕೊಟ್ಟು ಎಫ್-16 ಯುದ್ಧ ವಿಮಾನಗಳ ವ್ಯಾಪಾರ, ಅಮೇರಿಕನ್ ಕಾನೂನಿನ ಪ್ರಕಾರ ನಿಲ್ಲಿಸಬೇಕಾದಾಗ ಅಮೇರಿಕನ್ ಸರಕಾರ ಇವನ್ನು ಇಂಡೋನೇಶ್ಯಾದ ಸರಕಾರಕ್ಕೆ ಕೊಳ್ಳಲು ವಿನಂತಿಸಿತ್ತು. ಅದಕ್ಕಷ್ಟೇ ಈ ಖರೀದಿ ಬಗ್ಗೆ ಯೋಚಿಸಲಾಗಿತ್ತು ಎಂದಿದೆ.

ಇಂಡೋನೇಶ್ಯಾದ ಈ ನಿರ್ಧಾರ ಅಮೇರಿಕನ್ ಗೋಮುಖ ವ್ಯಾಘ್ರತನವನ್ನು ಬಯಲು ಪಡಿಸಿದೆ. ಮೂರನೇ ಜಗತ್ತಿನ ಸರ್ವಾಧಿಕಾರಿಗಳಿಗೆ ಪೂರ್ಣ ಮಿಲಿಟರಿ ರಾಜಕೀಯ ಆರ್ಥಿಕ ನೀಡುವ, ಆದರೆ ಕೆಲವೊಮ್ಮೆ ಅಲ್ಲಿನ ಪ್ರಜಾಪ್ರಭುತ್ವದ ಬಗ್ಗೆ, ಮಾನವ ಹಕ್ಕುಗಳ ಪರಿಸ್ಥಿತಿ ಬಗ್ಗೆ ಮೊಸಳೆ ಕಣ್ಣೀರಿಡುವ ನಾಟಕ ಒಂದಲ್ಲ ಒಂದು ದಿನ ಬಯಲಾಗುತ್ತದೆ. ಇಂಡೋನೇಶ್ಯಾದಲ್ಲಂತೂ 1965ರ ಮಿಲಿಟರಿ ಕ್ಷಿಪ್ರಕ್ರಾಂತಿಯು ಈವರೆಗೆ ಜನರಲ್ ಸುಹಾರ್ತೋರ ಮುಖ್ಯ ಬೆಂಬಲಿಗ ಅಮೇರಿಕವೇ.



ಪುಸ್ತಕ ಪರಿಚಯ

ಎರಡನೇ ಚಿದಂಬರಂ ಬಜೆಟ್ ಪವಾಡವ್ರೋ? ಇನ್ನೊಂದು ತಂತ್ರವ್ರೋ?

ಪ್ರ. ಅಧ್ಯಯನ ಪ್ರಕಾಶನ, ಬೆಲೆ: 3.00 ರೂ.

ಒಂದು ಕಿರುಪುಸ್ತಕವನ್ನು ಅಧ್ಯಯನ ಪ್ರಕಾಶನ ಹೊರತಂದಿದೆ.

ಕೇವಲ 3 ರೂ. ಬೆಲೆಯ ಈ ಪುಸ್ತಕದಲ್ಲಿ ಡಾ|| ಸಿ.ಪಿ.ಚಂದ್ರಶೇಖರ ಅವರ ನಿರೀಕ್ಷೆಯ ಮೇಲೆ ನಿಂತ ಒಳತಂತ್ರದ ಬಜೆಟ್; ಪ್ರೊ| ಪ್ರಭಾತ್ ಪಟ್ನಾಯಕ್ ಅವರ 'ಉದಾರೀಕರಣದ ಜಾರು ಹಾದಿಯಲ್ಲಿ'; ಡಾ|| ಜಯಾ ಘೋಷ್ ಅವರ 'ಚಿದಂಬರಂರವರ ಪ್ರಧಾನ ಗುರಿಯನ್ನು ಕೂಡಾ ಈಡೇರಿಸಲಾಗದ ಬಜೆಟ್' ; ಡಾ|| ಅಶೋಕ ಮಿತ್ರ ಅವರ 'ಹಣಕಾಸು ಮಂತ್ರಿಗಳ ಕ್ಷಮಾದಾನ ಕಾಳಸಂತೆಕೋರರಿಗೆ ವರದಾನ' ,; ಸೀತಾರಾಂ ಯೆಚೂರಿ ಅವರ 'ಉತ್ತಮ ಅವಕಾಶವೊಂದನ್ನು ಕಳೆದುಕೊಂಡ ಬಜೆಟ್' ಎನ್ನುವ ಐದು ಲೇಖನಗಳನ್ನು ಮತ್ತು ಬಜೆಟ್ಟಿನ ಕೆಲವು ಪಾರಿಭಾಷಿಕ ಶಬ್ದಗಳ ಅರ್ಥವನ್ನು ಕೂಡಾ ಈ ಪುಸ್ತಕ ಒಳಗೊಂಡಿದೆ.

1997-98 ರ ಕೇಂದ್ರ ಬಜೆಟ್‌ನ್ನು ಚಿದಂಬರಂ ತನ್ನ ಕನಸಿನ ಬಜೆಟ್ ಎಂದು ಕರೆದರು. ಉದ್ಯಮಿಗಳು, ದೊಡ್ಡ ಪತ್ರಿಕೆಗಳು ಇನ್ನಿಲ್ಲದಂತೆ ಹೊಗಳಿದರು. ಇದು ಬಡವರ ಬಜೆಟ್ ಎಂದು ಕೆಲವರು ವ್ಯಾಖ್ಯಾನಿಸಿದರು. ಈವರೆಗಿನ ಕಾಂಗ್ರೆಸ್ಸಿನ ಬಜೆಟ್ಟಿಗಿಂತ ಇದು ಭಿನ್ನ ಎಂದರು. ದೇಶದ ಸಮಸ್ಯೆಯನ್ನು ಅರಿತು, ಸಾಮಾನ್ಯ ಕನಿಷ್ಠ ಕಾರ್ಯಕ್ರಮ ದ ಅಡಿಯಲ್ಲಿಯೇ ಬಜೆಟ್ ತಯಾರಾಗಿದೆ ಎಂದರು.

ನಿಜವಾಗಿಯೂ ಚಿದಂಬರಂ ಅವರಿಗೆ ತಮ್ಮ ಬಜೆಟ್‌ನಲ್ಲಿ ಇದನ್ನು ಮಾಡಲು ಸಾಧ್ಯವಾಗಿದೆಯೇ? 1997-98 ರ ಬಜೆಟ್ ಭಿನ್ನ ದಾರಿ ತುಳಿದಿದೆಯೇ? ದೇಶದ ಜ್ವಲಂತ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಕಾಣಿಕೆ ನೀಡಿದೆಯೆ? ಎಂದು ಕೇಳಿದರೆ ಇದೆಲ್ಲ ಸುಳ್ಳು ಎನ್ನುತ್ತಾರೆ ನಮ್ಮ ಆರ್ಥಿಕ ತಜ್ಞರು. ಯಾಕೆ ಸುಳ್ಳು ಎಂದು ವಿವರಿಸುವುದಕ್ಕಾಗಿಯೇ ಈ ವರ್ಷದ ಬಜೆಟ್‌ನ ವಸ್ತುನಿಷ್ಠ ವಿಶ್ಲೇಷಣೆಯ

ಇದು ಆಳುವ ವರ್ಗದ ಸುಳ್ಳುಗಳನ್ನು ಬಯಲು ಮಾಡಲು ಜನಪರ ಎನ್ನುವ ಅವರ ಮುಖವಾಡವನ್ನು ಕಳಚಲು ಜನರ ಮಧ್ಯೆ ವ್ಯಾಪಕವಾಗಿ ಒಯ್ಯಬೇಕಾದ ಪುಸ್ತಕಗಳಲ್ಲೊಂದು. ಬೆಂಗಳೂರಿನ ಕ್ರಿಯಾ ಪ್ರಕಾಶನ ದಲ್ಲಿ ಈ ಪುಸ್ತಕ ಲಭ್ಯವಿದೆ.

- ವಿಠ್ಠಲ

ಅಣಕ

- ಶರತ್ ಚಂದ್ರ

ಎಲ್ಲಾ ದೊಡ್ಡ ದೊಡ್ಡ ಹಗರಣದ ಪ್ರಸಿದ್ಧ ಕೇಸುಗಳೆಲ್ಲ ಒಂದೊಂದಾಗಿ ಠುಸ್ ಆಗುತ್ತಿದ್ದದ್ದು ನೋಡಿ, ಏನು ನಡೀತಿದೆ ನೋಡಿ ತನಿಖಾ ವರದಿ ಕಳಿಸು ಅಂದರೆ, ನಮ್ಮ ಬುದ್ಧಿವಂತ ವರದಿಗಾರ ನಕ್ಷತ್ರಕ ಒಂದು ಪ್ಯಾಂಪ್‌ಲೆಟ್ ಕಳಿಸಿದ್ದಾನೆ. ನಕ್ಷತ್ರಕ ದೆಹಲಿ ಹೈಕೋರ್ಟ್ ಹವಾಲಾ ಕೇಸು ನೋಡಲಿಕೆ ಹೋದಾಗ ಅಲ್ಲಿ ಯಾರೋ ಈ ಪ್ಯಾಂಪ್‌ಲೆಟ್ ಹಂಚುತ್ತಿದ್ದರಂತೆ. ನೋಡಿ ಎಂಥಾ ಕಾಲಬಂತು!

ನಾವು ಕಳ್ಳರಲ್ಲ....

ಕೇಂದ್ರೀಯ ಸಂಘಟನಾ ಸಮಿತಿ, ನವದೆಹಲಿ

ಮಾನ್ಯರೇ,

ದೇಶದ ಸ್ವಾತಂತ್ರ್ಯದ ಚಿನ್ನದ ಹಬ್ಬ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಹಲವಾರು ಹಗರಣಗಳ ಕೇಸುಗಳು ನಡೆಯುತ್ತಿರುವುದು, ಆ ಕೇಸುಗಳಲ್ಲಿ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು, ಅವರ ಉತ್ತರಾಧಿಕಾರಿಗಳಾದ ಗಣ್ಯ ನಾಯಕರನ್ನು ಎಳೆದಾಡುತ್ತಿರುವುದು ನಿಮಗೆ ಗೊತ್ತಿದೆ. ಇಂತಹ ಕೇಸುಗಳಲ್ಲಿ ಹಲವು ಬಿದ್ದು ಹೋಗಿರುವುದೂ ನಿಮಗೆ ಗೊತ್ತಿದೆ. ದೇಶದ ಹಿರಿಮೆ ಇಡೀ ಜಗತ್ತಿಗೆ ಸಾರಬೇಕಾದ ಈ ಸಂದರ್ಭದಲ್ಲಿ, ನಾವು ನಮ್ಮ ಪತ್ರಿಕೆ, ರೇಡಿಯೋ, ಟಿವಿ ಈ ಕೇಸುಗಳ ಬಗ್ಗೆ ಮಾತನಾಡುವುದು ದೇಶದ ಘನತೆಗೆ ಕುಂದಲ್ಲವೇ? ಈ ಬಗ್ಗೆ ಆತಂಕಿತರಾದ ದೇಶಭಕ್ತರು ಪಕ್ಷದ ಮಿತಿಯನ್ನು ಮೀರಿದ ಈ ಸಂಘಟನೆಯನ್ನು ಸ್ಥಾಪಿಸಬೇಕೆಂದಿದ್ದೇವೆ. ಈ ಕೆಳಕಂಡ ಅರ್ಹತೆ ಇರುವವರು ಸದಸ್ಯರಾಗಿ ಉಳಿದ ದೇಶಪ್ರೇಮಿಗಳು ಹಿತೈಷಿಗಳಾಗಿ ಈ ಸಂಘಟನೆಯನ್ನು ಬೆಂಬಲಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಧ್ಯೇಯ ಧೋರಣೆ ಮತ್ತು ಕಾರ್ಯಕ್ರಮಗಳು

1.ಸಾರ್ವಜನಿಕ ಸೇವೆಯಲ್ಲಿ ತೊಡಗಿರುವವರ ಮೇಲೆ ಭ್ರಷ್ಟಾಚಾರ ಮತ್ತು ಇತರ ಕ್ರಿಮಿನಲ್ ಹಗರಣದ ಕೇಸುಗಳು 21 ನೇ ಶತಮಾನದ ಹೊತ್ತಿಗೆ ಇಲ್ಲದಂತೆ ಮಾಡುವುದು.

2. ದೇಶಭಕ್ತರು, ಸಾರ್ವಜನಿಕ ಸೇವೆಯಲ್ಲಿ ತೊಡಗಿದ ಗಣ್ಯರ ಮೇಲೆ ಕಿಡಿಗೇಡಿತನ, ರಾಜಕೀಯ ಪ್ರತೀಕಾರ ಇತ್ಯಾದಿ ದುರುದ್ದೇಶಗಳಿಂದ ಆಪಾದನೆಯ ಕೇಸು ಬರದಂತಹ ಪರಿಸ್ಥಿತಿ ನಿರ್ಮಿಸುವುದು.

3. ಇಂತಹ ಪರಿಸ್ಥಿತಿ ನಿರ್ಮಿಸಲು ಕೆಳಕಂಡ ಸಂವೈಧಾನಿಕ ತಿದ್ದುಪಡಿ, ಹೊಸಕಾನೂನು, ಸಂಪ್ರದಾಯ ರೂಪುಗೊಳ್ಳುವಂತೆ ಶ್ರಮಿಸುವುದು.

ಅ. ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಎಲ್ಲಾ ಮಾನ್ಯತೆ ಪಡೆದ ಪಕ್ಷಗಳ ನಾಯಕರು, ಕೇಂದ್ರ/ರಾಜ್ಯ ಮಂತ್ರಿಮಂಡಲದ ಸದಸ್ಯರು, ಪಾರ್ಲಿಮೆಂಟು, ವಿಧಾನಸಭಾ(ಹಾಲಿ ಹಾಗೂ ಮಾಜಿ) ಸದಸ್ಯರ ಮೇಲೆ ಇಂತಹ ಭ್ರಷ್ಟಾಚಾರ ಇತರ ಕ್ರಿಮಿನಲ್ ಕೇಸು ಹಾಕುವ ಮೊದಲು ಆ ಪಕ್ಷದ ಅಧ್ಯಕ್ಷರು, ದೇಶದ ಅಧ್ಯಕ್ಷರು, ಅವರು ಸದಸ್ಯರಾಗಿರುವ ಮಂತ್ರಿಮಂಡಲ/ಶಾಸನ ಸಭೆಯ ಮುಖ್ಯಸ್ಥರು ಇವರೆಲ್ಲರ ಅನುಮತಿ ಪಡೆಯಬೇಕು.

ಆ. ಇವರೆಲ್ಲರ ಅನುಮತಿ ಪಡೆದ ಮೇಲೆ ಸ್ವತಃ ಆಪಾದಿತರ ಅನುಮತಿ, ಒಪ್ಪಿಗೆ ಪಡೆಯಬೇಕು.

ಇ. ಇಂತಹ ಹಲವು ಕೇಸುಗಳು ನಡೆಯುತ್ತಿರುವಾಗ ಒಂದು ಕೇಸಲ್ಲಿ ಆರೋಪ ವಿಮುಕ್ತರಾದರೆ, ಇತರ ಕೇಸುಗಳನ್ನು ಬಿಟ್ಟುಕೊಡುವುದು.

ಈ. ಇಂತಹ ಆಪಾದನೆ ಕೇಸು ಬಂದ ಮೇಲೆ ಆಪಾದಿತರು ಯಾವುದೇ ಚುನಾವಣೆ ಗೆದ್ದರೆ, ಜನರ ತೀರ್ಪನ್ನು ಅಂಗೀಕರಿಸಿ ಕೇಸು ವಾಪಸು ತೆಗೆದುಕೊಳ್ಳಬೇಕು.

ಉ. ಆಪಾದಿತ ಯಾವುದೇ ರಾಜಕೀಯ ಸರಕಾರಿ ಹುದ್ದೆಗೆ ರಾಜೀನಾಮೆ ನೀಡಬೇಕಾಗಿಲ್ಲ.

ಊ. ಎಲ್ಲಾ ವಿಚಾರಣೆ ಗುಪ್ತವಾಗಿಡಲಾಗುವುದು. ಆ ಬಗ್ಗೆ ಯಾವುದೇ ರೂಪದಲ್ಲಿ (ಪತ್ರಿಕೆ, ಟಿವಿ, ರೇಡಿಯೋ) ಪ್ರಚಾರ ಮಾಡುವುದು ಶಿಕ್ಷಾರ್ಹ ಅಪರಾಧ.

ಎ. ಸಿಬಿಐ ನಿರ್ದೇಶಕರನ್ನು ಪಾರ್ಲಿಮೆಂಟು ಹಾಗೂ ಎಲ್ಲಾ ವಿಧಾನ ಸಭೆಗಳ ಚುನಾವಣೆಯ ಮೂಲಕ ಆರಿಸುವುದು.

ಸದಸ್ಯತ್ವದ ನಿಯಮಗಳು

1. ಕನಿಷ್ಠ ಒಂದು ಕೋಟಿ ಮೊತ್ತದ ಭ್ರಷ್ಟಾಚಾರ ಅಥವಾ ಅಷ್ಟೇ ಗುರುತರವಾದ ಕೇಸಲ್ಲಿ ಆಪಾದಿತರಾಗಿ, ಕನಿಷ್ಠ ಒಂದು ಕೇಸಲ್ಲಿ ಕನಿಷ್ಠ ಒಂದು ಕೋರ್ಟಿನಲ್ಲಿ ವಿಮುಕ್ತಿ ಪಡೆದಿರಬೇಕು.

2. ಇಂತಹ ಕೇಸುಗಳ ಆಪಾದಿತರು(ಅಂದರೆ ಇನ್ನೂ ವಿಮುಕ್ತಿ ಪಡೆಯದವರು) ಮತ್ತು ಆಪಾದಿತರಾಗದಿದ್ದರೂ ಇಂತಹ ಹಗರಣದಲ್ಲಿ ಶಾಮೀಲಾದವರು, ಶಾಮೀಲಾಗದಿದ್ದರೂ, ಇಂತಹ ಹಗರಣದಲ್ಲಿ ಶಾಮೀಲಾದವರು ಶಾಮೀಲಾಗಿರುವ ಆಪಾದನೆಗೆ ಒಳಗಾಗಿರುವವರು ಸಹ ಸದಸ್ಯರಾಗಬಹುದು.

3. ಧ್ಯೇಯ ಧೋರಣೆ ವಿಭಾಗದಲ್ಲಿ (ಅ) ವಿಭಾಗದಲ್ಲಿ ಹೇಳಿದ ಸಾರ್ವಜನಿಕ ಸೇವೆಯಲ್ಲಿ ತೊಡಗಿದವರಾಗಿರಬೇಕು.

4. ಸದಸ್ಯತ್ವ ನಿಯಮ 1 ಮತ್ತು 2 ರಂತೆ ಅರ್ಹತೆ ಇರುವ ಸರ್ಕಾರಿ ಅಧಿಕಾರಿಗಳು, ಉದ್ಯಮಿಗಳೂ ಸದಸ್ಯರಾಗಬಹುದು.

5. ಒಂದು ಕೋಟಿಗಿಂತ ಕಡಿಮೆಯ ಭ್ರಷ್ಟಾಚಾರದಲ್ಲಿ ಆಪಾದಿತರು, ಕತ್ತಿ, ಚೂರಿ, ಗನ್ನು ಮುಂತಾದ ಆಯುಧ ಬಳಸಿ ದರೋಡೆ ನಡೆಸಿದ(ಒಂದು ಕೋಟಿಗಿಂತ ಜಾಸ್ತಿ ಇದ್ದರೂ) ಆಪಾದಿತರು ಸದಸ್ಯತ್ವಕ್ಕೆ ಅರ್ಹರಲ್ಲ.

6. ಈ ಮೇಲಿನ ಸಂಘಟನೆಯ ಧ್ಯೇಯ, ಧೋರಣೆ ಮತ್ತು ಕಾರ್ಯಕ್ರಮಗಳನ್ನು ಒಪ್ಪಿಕೊಂಡು, ಅವನ್ನು ಜಾರಿಗೆ ತರಲು ಶ್ರಮಿಸಬೇಕು.

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ತಿನ್ನ ಕಾನೂನು ಹಕ್ಕುಗಳ ಅರಿವಿದೆ. ಚರಂಡಿಗೆ ಹೋಗುವ ಪೈಪಿನ ಮೇಲೆ ಕೂತ ಮಾತ್ರಕ್ಕೆ ಅದು ದರೋಡೆಯ ಇರಾದೆಯಿಂದ ಎಂಬುದಕ್ಕೆ ಸಾಕ್ಷಿಯಾಗಲಾರದು.

ದಾಖಲೆಗಳನ್ನು ನಿರ್ಮಿಸಿದ ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟ

ಬೆಂಗಳೂರು - ಮೈಸೂರುಗಳಲ್ಲಿ ಮೇ 31 ರಂದು ಉದ್ಘಾಟಿಸಲ್ಪಟ್ಟ ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟ ಜೂನ್ 11 ರಂದು ವಿಜೃಂಭಣೆಯಿಂದ ಮುಕ್ತಾಯಗೊಂಡಿತು. ಈ ಹನ್ನೆರಡು ದಿನಗಳ ಹಾಗೂ ಅದಕ್ಕೂ ಮುಂಚೆ ಹಲವು ತೊಂದರೆಗಳು, ಮುಂದೂಡಿಕೆಗಳು, ವಿವಾದಗಳು, ಬೇಸರಗಳ ನಡುವೆಯೂ, ನಮ್ಮ ರಾಷ್ಟ್ರೀಯ ಕ್ರೀಡಾ ನೀತಿಯ ಪ್ರಜಾಸತ್ತಾತ್ಮಕವಲ್ಲದ ಸ್ವರೂಪವನ್ನೂ ಮೀರಿ ದೇಶದ ಮೂಲೆ-ಮೂಲೆಗಳಿಂದ ಬಂದ 5000 ದಷ್ಟು ಕ್ರೀಡಾ ಪಟುಗಳು ತಂತಮ್ಮ ಸಾಧನೆಗಳನ್ನು ಪ್ರದರ್ಶಿಸಿದರು. ಜತೆಗೆ ದೇಶದ ಕ್ರೀಡಾ ನೀತಿಯಲ್ಲಿನ ಕುಂದು-ಕೊರತೆಗಳನ್ನೂ ತೋರಿದರು. ಅತ್ಯಂತ ದೊಡ್ಡ ತಂಡವನ್ನು (500 ಕ್ಕೂ ಹೆಚ್ಚು) ಸ್ಪರ್ಧೆಯ ಕಣಕ್ಕಿಳಿಸಿದ್ದ ಆತಿಥೇಯ ಕರ್ನಾಟಕ ತಂಡ ಅತಿ ಹೆಚ್ಚು ಪದಕಗಳನ್ನು ಗಳಿಸಿ ಕ್ರೀಡಾರಂಗದಲ್ಲಿ ತನ್ನ ಮುನ್ನಡೆಯನ್ನು ಪ್ರದರ್ಶಿಸಿತು. ಈಜುಪಟುಗಳಾದ ಅಭಿಜಿತ್ ಅತ್ಯುತ್ತಮ ಪುರುಷ ಕ್ರೀಡಾಪಟು ಪ್ರಶಸ್ತಿಯನ್ನು-ಹಾಗೂ ನಿಶಾ ಮಿಲೆಟ್ ಅತ್ಯುತ್ತಮ ಮಹಿಳಾ ಕ್ರೀಡಾಪಟು ಪ್ರಶಸ್ತಿಯನ್ನು ಪಡೆದರು. ಕರ್ನಾಟಕ ರಾಜಾ ಬಲೀಂದ್ರ ಸಿಂಗ್ ಸಮಗ್ರ ಪ್ರಶಸ್ತಿಯನ್ನು ಪಡೆಯಿತು.

ಈ ಕ್ರೀಡಾಕೂಟದಲ್ಲಿ ಹಿಂದೆಂದಿಗಿಂತಲೂ ಹೆಚ್ಚು(140 ಕ್ಕೂ ಹೆಚ್ಚು) ಹೊಸ ದಾಖಲೆಗಳು ಸೃಷ್ಟಿಯಾದವು ಎಂದು ಹೇಳಲಾಗುತ್ತಿದೆ. ಇದರಲ್ಲಿ 50 ಕ್ಕೂ ಹೆಚ್ಚು ದಾಖಲೆಗಳನ್ನು ಕರ್ನಾಟಕವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ನಿರ್ಮಿಸಿದರು. ದೆಹಲಿಯ ಶೂಟಿಂಗ್ ಪಟು ಜಸ್ಪಾಲ್ ರಾಣಾ ವಿಶ್ವದಾಖಲೆಯೊಂದನ್ನು ಸರಿಗಟ್ಟಿ ರಾಷ್ಟ್ರೀಯ ಕ್ರೀಡಾಕೂಟದ ಶ್ರೇಷ್ಠ ಕ್ರೀಡಾಪಟು ಪ್ರಶಸ್ತಿಯನ್ನು ಪಡೆದರು.

ಕ್ರೀಡಾಪಟುಗಳ ಈ ಸಾಧನೆಗಳ ನಡುವೆ ಕ್ರೀಡಾಗ್ರಾಮದಲ್ಲಿ ಕ್ರೀಡಾಪಟುಗಳಿಗಾದ ಅನಾನುಕೂಲತೆಗಳು, ತದ್ವಿರುದ್ಧವಾಗಿ ಕ್ರೀಡಾ ಅಧಿಕಾರಿಶಾಹಿಗಳಿಗೆ ಸ್ಟಾರ್ ಹೋಟೆಲ್‌ಗಳ ಐಷಾರಾಮ ನಮ್ಮ ಕ್ರೀಡಾ ನೀತಿಯ ಅಪ್ರಜಾಸತ್ತಾತ್ಮಕ ಅಂಶಗಳನ್ನು ಮತ್ತೊಮ್ಮೆ ಎತ್ತಿತೋರಿದವು.



ಈ ಕ್ರೀಡಾಕೂಟದಲ್ಲಿ ಎಲ್ಲರ ಗಮನಕ್ಕೆ ಬಂದ ಇನ್ನೊಂದು ಅಂಶವೆಂದರೆ 'ಪ್ರಾಯೋಜಕ'ರೆಂಬ ಖಾಸಗಿ ಉದ್ಯಮಿಗಳ ಆಟಾಟೋಪ. ಸಾಮಾಜಿಕ ಜವಾಬ್ದಾರಿಗಳಿಂದ ಸರಕಾರ ಹಿಂದೆ ಸರಿಯುವ ಉದಾರೀಕರಣ ನೀತಿಯ ದುಷ್ಪಲಗಳು ಇಲ್ಲೂ ಕಾಣಲಾರಂಭಿಸಿವೆ. ಈ ಕ್ರೀಡಾಕೂಟ ವಿಪರೀತ ವಿಳಂಬಗೊಳ್ಳಲು 'ಪ್ರಾಯೋಜಕ'ರ ಅಭಾವವೂ ಒಂದು ಕಾರಣ ಎನ್ನಲಾಗುತ್ತಿದೆ - ಅಂದರೆ ಸರಕಾರದ ನೆರವಿನ ಅಭಾವವೆಂದೇ ಅರ್ಥ. ಕ್ರೀಡಾ ಕೂಟದ ಸಮಾರಂಭಗಳಲ್ಲಿ ವಿಡಿಯೋ ಕೋನ್‌ನ ಮುಖ್ಯಸ್ಥರು ಇತರರೊಂದಿಗೆ ರಾರಾಜಿಸಿದರು. ಅತ್ತ ಈ 'ಮುಖ್ಯ ಪ್ರಾಯೋಜಕ'ರ ದುಂಡಾವರ್ತಿಗೆ ಇತರ 15 ಪ್ರಾಯೋಜಕರು ದೂರಿತ್ತು ಸಂಘಟನಾ ಸಮಿತಿಯಿಂದ ಅದಕ್ಕಾಗಿ 'ಎಚ್ಚರಿಕೆ ನೋಟಿಸ'ನ್ನು ಈ ಮುಖ್ಯ ಪ್ರಾಯೋಜಕ ಪಡೆದ ಘಟನೆಯೂ ನಡೆಯಿತು. ಇದರ ನಡುವೆಯೂ ಉದಾರೀಕರಣದ ಅಧ್ವರ್ಯು ಗಳಾದ ಹಣಕಾಸು ಮಂತ್ರಿ ಚಿದಂಬರಂ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಉದ್ಯಮಿಗಳಿಗೆ ತೆರಿಗೆ ರಿಯಾಯ್ತಿ ನೀಡುವ ತನ್ನ ಎಂದಿನ ಭರವಸೆ ನೀಡಿದರು. ಅವರಿಗೆ ತೆರಿಗೆ ರಿಯಾಯ್ತಿ ನೀಡುವ ಬದಲು ಅದೇ ಹಣವನ್ನು ನೇರವಾಗಿ ಕ್ರೀಡಾ ಅಭಿವೃದ್ಧಿಗೆ ನೀಡಬಾರದೆ ಎಂದು ನೀವು ಖಂಡಿತಾ ಪ್ರಶ್ನಿಸಬಹುದು. ಆದರೆ ಉದ್ಯಮಿಗಳಿಗೆ ರಿಯಾಯ್ತಿ ನೀಡುವ ಖಯಾಲಿಯ ಹಣಕಾಸು ಮಂತ್ರಿಗಳು ಈ ಪ್ರಶ್ನೆಗೆ ಕಿವಿಗೊಡರು. ದೇಶದ ಐಕ್ಯತೆಯನ್ನು, ಆರೋಗ್ಯವನ್ನು ಪ್ರದರ್ಶಿಸುವ ಈ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ದೇಶದ ಸಾಂಸ್ಕೃತಿಕ ವೈವಿಧ್ಯತೆ, ಶ್ರೀಮಂತಿಕೆ ಪ್ರದರ್ಶನಗೊಳ್ಳುವ ಬದಲು ವಿವಿಧ ಕಂಪೆನಿಗಳ ಲೋಗೋಗಳು ಪ್ರದರ್ಶನಗೊಂಡವು ಎಂದು ಹಲವರು ಬೇಸರ ವ್ಯಕ್ತಪಡಿಸಿದರು. ಆದರೆ ಚಿದಂಬರಂಗೆ ಅವೆಲ್ಲಾ ಬೇಕಿಲ್ಲ ಅಲ್ಲವೇ?

ಇರಲಿ, 5ನೇ ರಾಷ್ಟ್ರೀಯ ಕ್ರೀಡಾ ಕೂಟ ಮುಂದಿನ ವರ್ಷ ಈಶಾನ್ಯದ ಪುಟ್ಟ ರಾಜ್ಯ ಮಣಿಪುರದಲ್ಲಿ ನಡೆಯಲಿದೆ. ರಾಷ್ಟ್ರೀಯ ಭಾವೈಕ್ಯತೆ ಬೆಸೆಯಲು ಈ ನಿರ್ಧಾರ ಕೈಗೊಳ್ಳಲಾಗಿದೆಯೆನ್ನಲಾಗಿದೆ. ಒಳ್ಳೆಯ ವಿಚಾರ. ಪುಟ್ಟ ರಾಜ್ಯವಾದರೂ ಇದು 15 ಚಿನ್ನ, 10 ಬೆಳ್ಳಿ ಹಾಗೂ 17 ಕಂಚಿನ ಪದಕಗಳನ್ನು ಗಳಿಸಿದೆ. ಆದರೆ ಖಾಸಗಿ 'ಪ್ರಾಯೋಜಕರು' ಈ ಚಿಂತನೆಗೆ ಮಸಿ ಬಳಿಯಲು ಬಿಡಬಾರದು ಜತೆಗೆ ಒಂದು ಪ್ರಜಾ ಸತ್ತಾತ್ಮಕ ಕ್ರೀಡಾ ನೀತಿ ರೂಪಗೊಳ್ಳಬೇಕೆಂಬ ಭಾವನೆಯೂ ಬೆಳೆಯಬೇಕಾಗಿದೆ.

ಪದಕ ಪಟ್ಟಿಯ ಮೊದಲ ಐವರು

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಕರ್ನಾಟಕ	72	45	51	168
ಪಂಜಾಬ್	44	28	40	112
ದೆಹಲಿ	36	45	38	119
ಕೇರಳ	26	19	20	65
ಮಹಾರಾಷ್ಟ್ರ	24	28	33	85

ಚಿಕ್ಕ ಕೇಂದ್ರಾಡಳಿತ ಪ್ರದೇಶಗಳಾದ ಪಾಂಡಿಚೇರಿ, ಅರುಣಾಚಲ, ಪ್ರದೇಶ, ಸಿಕ್ಕಿಂ ಬಿಟ್ಟು ಬೇರೆಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಪದಕಪಟ್ಟಿಯಲ್ಲಿ ಸ್ಥಾನ ಪಡೆದಿವೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು